ಸಂಪುಟ: 05 ಸಂಚಿಕೆ: 99 ಪುಟಗಳು: 08 ಭಾನುವಾರ 22 ಜೂನ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಜ್ಞಾನವು ಆತ್ಮದ ಶಕ್ತಿಯಾಗಿದೆ. ಯಾವ ವ್ಯಕ್ತಿ ಜ್ಞಾನಿಯಾಗಿರುತ್ತಾನೋ ಅವನು ಆತ್ಮಾವಲೋಕವನ್ನು ಪಡೆದುಕೊಳ್ಳುತ್ತಾನೆ.

## ರಾಜ್ಯದಲ್ಲಿ ವಕ್ಫ್ ಬೋರ್ಡ್ ಅವ್ಯವಹಾರ: ಈವರೆಗೆ 9 ಅಧಿಕಾರಿಗಳ ವಿರುದ್ಧ ಕ್ರಮ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆ ಗೊಂದಲ ಒಂದು ಕಡೆಯಾದ್ರೆ ವಕ್ಫ್ ಆಸ್ತಿಯಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆಯೂ ಚರ್ಚೆ ಆಗುತ್ತಿದೆ. ಈ ನಡುವೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಕ್ಫ್ ಬೋರ್ಡ್ ನಲ್ಲಿ ನಡೆದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಈವರೆಗೆ ಒಟ್ಟು 9 ಮಂದಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಕಳೆದ ವಿಧಾನಸಭೆ ಅಧಿವೇಶನದಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಈ ವಿಚಾರವಾಗಿ ಚುಕ್ಕೆ ಗುರುತಿಲ್ಲದ ಪ್ರಶ್ನೆಯನ್ನು ಕೇಳಿದ್ದರು. ಇದಕ್ಕೆ ಉತ್ತರ ನೀಡಿರುವ ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ಯಾರೆಲ್ಲಾ ಅಧಿಕಾರಿಗಳು ವಕ್ಫ್ ಇಲಾಖೆಯ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ ಹಾಗೂ ಅವರ ವಿರುದ್ಧ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರವನ್ನು ನೀಡಿದೆ.




**ಕ್ರಮ ಕೈಗೊಳ್ಳಲಾದ ಅಧಿಕಾರಿಗಳು ಯಾರು?**

- ಮೊಹಸೀನ್ ಜಮಖಂಡಿ - ಲೆಕ್ಕಪರಿಶೋಧಕ - 1.50 ಲಕ್ಷ ಲಂಚ ಸ್ವೀಕಾರದ ಸಂದರ್ಭದಲ್ಲಿ ಲೋಕಾಯುಕ್ತ ಪೊಲೀಸರಿಂದ ಬಂಧನ.
- ಮೊಹಮ್ಮದ್ ಅಬ್ದುಲ್ ಮನ್ನಾನ್ - ವಕ್ಫ್ ಅಧಿಕಾರಿ - ವಿಜಯಪುರ ಜಿಲ್ಲಾ ಕಚೇರಿ ದುರಸ್ಥಿ ಕಾಮಾಗಾರಿಯಲ್ಲಿ 15 ಲಕ್ಷ ಅವ್ಯವಹಾರ.
- ತೌಸೀಫ್ ಅಹ್ಮದ್ - ವಕ್ಫ್ ನಿರೀಕ್ಷಕ - ಹಾವೇರಿ ಜಿಲ್ಲೆಯಲ್ಲಿ 30 ಲಕ್ಷ ಅನುದಾನ ದುರ್ಬಳಕೆ ಆರೋಪ.
- ದಾವೂದ್ ಅಲಿ - ಲೆಕ್ಕ ಪರಶೋಧಕ - ಗದಗ ಜಿಲ್ಲೆಯಲ್ಲಿ ರೂ. 50 ಸಾವಿರ ವಕ್ಫ್ ವಂತಿಕೆ ದುರ್ಬಳಕೆ.
- ಮೊಹ್ಮದ್ ಲತೀಫ್ - ವಕ್ಫ್ ಅಧಿಕಾರಿ - ಬೀದರ್ ಜಿಲ್ಲೆಯಲ್ಲ ವಕ್ಫ್ ವಂತಿಗೆ 5.89 ಲಕ್ಷ ದುರ್ಬಳಕೆ.
- ಅಲಿಮುದ್ದೀನ್ - ಲೆಕ್ಕ ಪರಿಶೋಧಕ - ಬೀದರ್ ಜಿಲ್ಲೆಯಲ್ಲ ವಕ್ಫ್ ವಂತಿಗೆ 5.89 ಲಕ್ಷ ದುರ್ಬಳಕೆ.
- ಫೌಜಿಯಾ ಸಿದ್ದೀಕಿ - ವಕ್ಫ್ ಅಧಿಕಾರಿ -ಅನುದಾನ ಬಿಡುಗಡೆಗೆ ಶಿಫಾರಸ್ಸು ಮಾಡಲು ರೂ.20 ಲಕ್ಷ ಅವ್ಯವಹಾರದ ಆರೋಪ.
- ರಜಿಯಾ ಸುಲ್ತಾನ - ವಕ್ಫ್ ಅಧಿಕಾರಿ - ಅನುದಾನ ಬಿಡುಗಡೆ ಮಾಡಲು ಶಿಫಾರಸಿಗೆ ರೂ.20 ಲಕ್ಷ ಅವ್ಯವಹಾರ ಮಾಡಿರುವ ಆರೋಪ.

ಮುಹಮ್ಮದ್ ಇರ್ಫಾನ್ ಮುಜಾಹಿದ್ - ಸರ್ವೇಯರ್ - ವಕ್ಷ್ ಸಂಸ್ಥೆಯಿಂದ ಅನುದಾನ ದುರ್ಬಳಕೆ. ಅನುದಾನ ಬಿಡುಗಡೆಗೆ ಶಿಫಾರಸ್ಸು ಮಾಡಲು ರೂ.20 ಲಕ್ಷ ಅವ್ಯವಹಾರದ ಆರೋಪ.

ಇನ್ನು ಇದೇ ಸಂದರ್ಭದಲ್ಲಿ ಯತ್ನಾಳ್ ಅವರು, ಸ್ವಾತಂತ್ರವಾಗಿ ಯಾರ ಹಂಗಿಲ್ಲದೆ ಕಾರ್ಯನಿರ್ವಹಿಸುತ್ತಿರುವ ವಕ್ಫ್ ಬೋರ್ಡ್ ಮೇಲೆ ಸರ್ಕಾರ ನಿಯಂತ್ರಣ ಸಾಧಿಸಲು ಕೈಗೊಳ್ಳಲಾಗುವ ಕ್ರಮಗಳೇನು ಎಂದೂ ಕೇಳಿದ್ದರು.

ಇದಕ್ಕೆ ಉತ್ತರಿಸಿರುವ ಇಲಾಖೆ, ಕೇಂದ್ರ ಸರ್ಕಾರದ ವಕ್ಫ್ ಕಾಯ್ದೆ 1954ರನ್ವಯ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು 1961ರಲ್ಲಿ ಕರ್ನಾಟಕ ರಾಜ್ಯದ ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸಲ್ಪಟ್ಟಿರುತ್ತದೆ. ವಕ್ಫ್ ಬೋರ್ಡ್ ನಿರ್ವಹಿಸುವ ಚಟುವಟಿಕೆಗಳಲ್ಲಿ ಸರ್ಕಾರವು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ.

## ಜೀವಕ್ಕೆ ಮುಳುವಾಗುತ್ತಿರುವ ಮುನ್ನ ಎಚ್ಚೆತ್ತುಕೊಳ್ಳಲಿ: ಖಂಡ್ರೆ

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ ಮಳೆ ತೀವ್ರಗೊಳ್ಳುತ್ತಿದೆ. ರಾಜ್ಯ ರಾಜಧಾನಿ ಬೆಂಗಳೂರಿನಲ್ಲೂ ಮಳೆಯ ವಾತಾವರಣ ಇದೆ. ಕೆಲವೊಮ್ಮೆ ಬಿರುಸಾದ ಗಾಳಿ ಮಳೆ ಅಪಾಯಕಾರಿಯಾಗಿ ಮಾರ್ಪಡುತ್ತಿದೆ. ಮಳೆ ಹಾಗೂ ಗಾಳಿಗೆ ಟೊಳ್ಳು ಮರಗಳ ಕೊಂಬೆಗಳು ಬಿದ್ದು ಅಪಾಯ ಉಂಟಾಗುತ್ತಿದೆ. ಇದಕ್ಕೆ ಅಕ್ಷಯ್ ಎಂಬ ಯುವಕನ ಸಾವೇ ಉದಾಹರಣೆ. ಈ ನಿಟ್ಟಿನಲ್ಲಿ ಇಂತಹ ಅನಾಹುತ ನಡೆಯದಂತೆ ಬಿಬಿಎಂಪಿ ಹಾಗೂ ಅರಣ್ಯ ಇಲಾಖೆ ಎಚ್ಚರಿಕೆ ವಹಿಸಬೇಕಾಗಿದೆ.

ಬೆಂಗಳೂರಿನಲ್ಲಿ ಮಳೆ ವಾತಾವರಣ ಇದ್ದು, ಈ ನಡುವೆ ಮರದ ಕೊಂಬೆ ಬಿದ್ದು ಅಕ್ಷಯ್ ಎಂಬ ಯುವಕ ಮೃತಪಟ್ಟಿದ್ದ. ಜೂನ್ 15 ರಂದು ಬೈಕ್ ನಲ್ಲಿ ತೆರಳುತ್ತಿದ್ದ ಅಕ್ಷಯ್ ಮೇಲೆ ಶ್ರೀನಿವಾಸ್ ನಗರದ ಬ್ರಹ್ಮಮಂದಿರದ ಬಳಿ ಮರದ ಕೊಂಬೆ ಮುರಿದು ಬಿದ್ದಿತ್ತು. ತೀವ್ರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ಒದ್ದಾಡುತ್ತಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲು ಮಾಡಿದ್ದರು. ಅಕ್ಷಯ್ ತಲೆಗೆ ಹತ್ತಕ್ಕೂ ಅಧಿಕ ಗಾಯಗಳಾಗಿದ್ದವು. ಶಸ್ತ್ರ ಚಿಕಿತ್ಸೆ ನಡೆಸಿದ್ದರೂ ಮಿದುಳು ನಿಷ್ಕ್ರಿಯಗೊಂಡಿತ್ತು. 1.15 ಕ್ಕೆ ಅಕ್ಷಯ್ ಕೊನೆ ಉಸಿರೆಳೆದಿದ್ದರು. ಈ ಘಟನೆ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿತ್ತು.

## ಹಣ ಪಡೆದಿದ್ದು ನಿಜ, ಅದು ಟ್ಯಾಕ್ಸ್, ಅಭಿವೃದ್ಧಿ ಹಣ: ಪಿಡಿಒ ಸ್ಪಷ್ಟನೆ

• ಉದಯವಾಹಿನಿ, ಬೀದರ್

ಬಿ ಆಸ್ತಿ ನೋಂದಣಿಗಾಗಿ ಪಿಡಿಓ ಹಣ ಪಡೆಯುತ್ತಿರುವ ವೈರಲ್ ವೀಡಿಯೋ ಮಾಧ್ಯಮಗಳಲ್ಲಿ ಪ್ರಸಾರವಾದ ಬೆನ್ನಲ್ಲೇ ಕಮಲನಗರ ಪಿಡಿಓ ರಾಜಕುಮಾರ್ ಸ್ಪಷ್ಟನೆ ನೀಡಿದ್ದಾರೆ. ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಾನು ಹಣ ಪಡೆದಿದ್ದು ನಿಜ, ಆದರೆ ಅದು ಟ್ಯಾಕ್ಸ್ ಮತ್ತು ಅಭಿವೃದ್ಧಿ ಹಣವಾಗಿದ್ದು 2024ರ ಅಕ್ಟೋಬರ್ 21ರಂದು ಫಲಾನುಭವಿ ಆಸ್ತಿ ಟ್ಯಾಕ್ಸ್ ಕಟ್ಟಿದ್ದಾರೆ.

ಆದರೆ ಇದು ಲಂಚ ಎಂದು ಕೆಲವು ಟಿವಿ ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದು, ಅದು ಪ್ಲಾಟ್ ಆಸ್ತಿ ನೋಂದಣಿಯ ಟ್ಯಾಕ್ಸ್ ಹಣವಾಗಿದೆ. ಸಿಇಓಗೆ ದೂರು ನೀಡಿದವರು 8 ತಿಂಗಳ ಹಿಂದೆಯೇ ಈ ವೀಡಿಯೋ ಮಾಡಿದ್ದು, ಈಗ ವೈರಲ್ ಮಾಡಿ ನನ್ನ ವಿರುದ್ಧ ಪಿತೂರಿ ಮಾಡಿದ್ದಾರೆ ಎಂದು ತಿಳಿಸಿದರು. ಬೀದರ್ ಜಿಲ್ಲೆಯ ಕಮಲನಗರ ಗ್ರಾಮ ಪಂಚಾಯತಿ ಕಚೇರಿಯಲ್ಲೇ ಹಣ ಪಡೆದು ಎಣಿಸಿಕೊಳ್ಳುತ್ತಿರುವ ಪಿಡಿಓ ರಾಜಕುಮಾರ್ ವಿಡಿಯೋ ವೈರಲ್ ಆಗಿತ್ತು. ಹಣ ಪಡೆಯುತ್ತಿರುವ ವೀಡಿಯೋದೊಂದಿಗೆ ಜಿ.ಪಂ ಸಿಇಓಗೆ ಹೋರಾಟಗಾರ ದೀಲಿಪ್ ಮುದಾಳೆ ಎಂಬವರು ದೂರು ನೀಡಿದ್ದರು.

## ಗ್ರೀನ್‌ಪೀಸ್ ವಿರುದ್ಧದ ದೂರು ವಜಾಗೊಳಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ-2000 (ಫೆಮಾ) ನಿಬಂಧನೆಗಳನ್ನು ಉಲ್ಲಂಘಿಸಿದ ಆರೋಪದಡಿ ಗ್ರೀನ್ ಪೀಸ್ ಎನ್ವಿರಾನ್ಮೆಂಟ್ ಟ್ರಸ್ಟ್ ಮತ್ತು ಸಂಬಂಧಿತ ಸಂಸ್ಥೆಯಾದ ಗ್ರೀನ್ ಪೀಸ್ ಇಂಡಿಯಾ ಸೊಸೈಟಿ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿದ್ದ ದೂರನ್ನು ಹೈಕೋರ್ಟ್ ವಜಾಗೊಳಿಸಿದೆ. ದೂರು ರದ್ದುಪಡಿಸುವಂತೆ ಕೋರಿ ಗ್ರೀನ್ ಪೀಸ್ ಎನ್ವಿರಾನ್ಮೆಂಟ್ ಟ್ರಸ್ಟ್ ಮತ್ತು ಗ್ರೀನ್ ಪೀಸ್ ಇಂಡಿಯಾ ಸೊಸೈಟಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಜಾರಿ ಮಾಡಿದ್ದ ಷೋಕಾಸ್ ನೋಟಿಸ್ ಅನ್ನು ನ್ಯಾಯಪೀಠ ವಜಾಗೊಳಿಸಿದೆ. ಗ್ರೀನ್ ಪೀಸ್ ಸಂಸ್ಥೆಯು ದೇಶದ ಅಭಿವೃದ್ಧಿ ವಿರೋಧಿ ಚಟುವಟಿಕೆಯಲ್ಲಿ ತೊಡಗಿದೆ ಎಂದು ಕೇಂದ್ರ ಗೃಹ ಇಲಾಖೆ ಆರೋಪಿಸಿತ್ತು. ಇದರ ಆಧಾರದಲ್ಲಿ ವಿದೇಶಿ ವಿನಿಮಯ ನಿಯಂತ್ರಣ ಕಾಯ್ದೆ-2010 (ಎಫ್‌ಸಿಆರ್‌ಎ) ಪರವಾನಗಿ ರದ್ದುಪಡಿಸಲಾಗಿತ್ತು. ಈ ಬೆನ್ನಲ್ಲೇ ಗ್ರೀನ್ ಪೀಸ್ ಕಚೇರಿಯ ಮೇಲೆ ಇ.ಡಿ ದಾಳಿ ನಡೆಸಿತ್ತು.

ಗ್ರೀನ್ ಪೀಸ್ ಪರ ಹೈಕೋರ್ಟ್ ವಕೀಲೆ ಮೋನಿಕಾ ಪಾಟೀಲ್ ಮತ್ತು ಕೇಂದ್ರ ಸರ್ಕಾರದ ಪರ ಎಂ.ಉನ್ನಿಕೃಷ್ಣನ್ ವಾದ ಮಂಡಿಸಿದ್ದರು.

# ಯೋಗಾ ಯೋಗ

## ಸಾಮೂಹಿಕ ಯೋಗ ದಿನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ





ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ರಾಷ್ಟ್ರಪತಿ ಮುರ್ಮು ಯೋಗ

### ಹಿಮನದಿಯ ಪ್ರದೇಶದಿಂದ ವಿಶಾಖಪಟ್ಟಣದ ನೌಕಾನೆಲೆಯವರೆಗೂ ವಿವಿಧೆಡೆ ಯೋಧರು ಯೋಗ ದಿನ ಆಚರಣೆ

• ಉದಯವಾಹಿನಿ, ನವದೆಹಲಿ

> ಇಡೀ ಜಗತ್ತು ಈಗ ಒಂದು ರೀತಿ ಸಂಘರ್ಷದ ಕಾಲಘಟ್ಟದಲ್ಲಿದೆ. ಇಂತಹ ಹೊತ್ತಿನಲ್ಲಿ ಯೋಗವು ಶಾಂತಿ ಮತ್ತು ಒಗ್ಗಟ್ಟಿನ ಮಾರ್ಗವನ್ನು ತೋರಲಿ.
> -ನರೇಂದ್ರ ಮೋದಿ, ಪ್ರಧಾನಿ

> ಯೋಗ ಎಂಬುದು ಧರ್ಮ ಜಾತಿ ಅಥವಾ ಸಮುದಾಯವನ್ನಷ್ಟೇ ಒಗ್ಗೂಡಿಸುತ್ತಿಲ್ಲ. ಇದು ಆರೋಗ್ಯಕರ ಬದುಕಿನ ಹಾದಿಯಲ್ಲಿ ನಮ್ಮನ್ನು ಮುನ್ನಡೆಸಲಿದೆ.
> -ಮುರ್ಮು, ರಾಷ್ಟ್ರಪತಿ

ಜಗತ್ತಿಗೇ ಯೋಗದ ಅನುಭೋಗ, ಮಹತ್ವದ ಅರಿವು ಹಂಚಿದ ಭಾರತದ ವಿವಿಧೆಡೆ ಅಂತರರಾಷ್ಟ್ರೀಯ ಯೋಗದಿನವನ್ನು ಸಾಮೂಹಿಕವಾಗಿ, ಸಂಭ್ರಮದಿಂದ ಆಚರಿಸಲಾಯಿತು. ಜನಪ್ರತಿನಿಧಿಗಳು, ಅಧಿಕಾರಿಗಳು, ನೌಕರರು, ವಿದ್ಯಾರ್ಥಿಗಳು, ಸಾರ್ವಜನಿಕರು, ಶ್ರಮಿಕರು, ವೈದ್ಯರು ಹೀಗೆ ವಿವಿಧ ವರ್ಗಗಳ ಜನಗಣ ದೇಶದ ಉದ್ದಗಲಕ್ಕೂ ಬೆಳಿಗ್ಗೆಯೇ ಸಾಮೂಹಿಕವಾಗಿ ಯೋಗಾಸಕ್ತರಾದರು. ಒಂದು ಭೂಮಿ ಮತ್ತು ಒಂದು ಆರೋಗ್ಯಕ್ಕಾಗಿ ಯೋಗ ಎಂಬುದು ಈ ವರ್ಷದ ಧ್ಯೆಯವಾಕ್ಯವಾಗಿತ್ತು. ಆಂಧ್ರಪ್ರದೇಶದ ವಿಶಾಖಪಟ್ಟಣದ ಆರ್.ಕೆ.ಬೀಚ್‌ನಲ್ಲಿ ನಡೆದ ಸಾಮೂಹಿಕ ಯೋಗ ದಿನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಶ್ವೇತವಸ್ತ್ರ ಧರಿಸಿ ಪಾಲ್ಗೊಂಡರು. ಉಸಿರಾಟ, ಸಮತೋಲನ, ಎಲ್ಲರೂ ಒಗ್ಗೂಡಲು ಯೋಗ ಎಂಬುದು ಪ್ರಸಕ್ತ ಕಾಲದ ಒತ್ತುಗುಂಡಿಯಾಗಿದೆ. ಶಾಂತಿ ಜಾಗತಿಕ ನೀತಿಯಾಗಲಿ, ಯೋಗ ಇದಕ್ಕೆ ನಾಂದಿಯಾಗಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಸೇರಿ ರಾಜ್ಯದ ಹಲವು ಪ್ರಮುಖರು ಈ ಸಂದರ್ಭದಲ್ಲಿ ಭಾಗಿಯಾದರು.

**ರಾಷ್ಟ್ರಪತಿ ಯೋಗ:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆದ ಯೋಗ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ಯೋಗವನ್ನು ನಿತ್ಯದ ಆಚರಣೆಯಾಗಿಸಿಕೊಳ್ಳಬೇಕು ಎಂದು ಮುರ್ಮು ಈ ಸಂದರ್ಭದಲ್ಲಿ ಸಲಹೆ ಮಾಡಿದರು.

**ಯೋಧರಿಂದ ಯೋಗ, ಸಚಿವರ ಸಾಥ್:** ಸಿಯಾಚಿನ್‌ನಲ್ಲಿ ಎತ್ತರದಲ್ಲಿರುವ ಹಿಮನದಿಯ ಪ್ರದೇಶದಿಂದ ವಿಶಾಖಪಟ್ಟಣದ ನೌಕಾನೆಲೆಯವರೆಗೂ ವಿವಿಧೆಡೆ ಯೋಧರು ಯೋಗ ದಿನ ಆಚರಿಸಿದರು. ಜಮ್ಮು ಕಾಶ್ಮೀರದಲ್ಲಿ ಯೋಧರ ಜೊತೆಗೂಡಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಯೋಗಾಭ್ಯಾಸ ಮಾಡಿದರು. ಸೇನಾಪಡೆಗಳ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಅವರೂ ಸಾಥ್ ನೀಡಿದರು. ದೇಶದ ವಿವಿಧ ರಾಜ್ಯಗಳ ರಾಜಧಾನಿ ಮತ್ತು ಪ್ರಮುಖ ನಗರಗಳಲ್ಲಿ ನಡೆದ ಯೋಗ ದಿನ ಆಚರಣೆಯಲ್ಲಿ ಕೇಂದ್ರ ಸಚಿವರು, ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಚಿವರು, ನ್ಯಾಯಮೂರ್ತಿಗಳು ಪಾಲ್ಗೊಂಡರು.

### ಕರ್ತವ್ಯಪಥದಲ್ಲಿ ಸಚಿವರ ಸಾರಥ್ಯ

ರಾಜಧಾನಿಯ ಕರ್ತವ್ಯಪಥದಲ್ಲಿ ನಡೆದ ಯೋಗ ದಿನ ಕಾರ್ಯಕ್ರಮದ ಸಾರಥ್ಯವನ್ನು ಆರೋಗ್ಯ ಸಚಿವ ಜೆ.ಪಿ.ನಡ್ಡಾ ವಹಿಸಿದ್ದರು. ವಿದೇಶಾಂಗ ಸಚಿವ ಎಸ್.ಜೈಶಂಕರ್ ವಿವಿಧ ದೇಶಗಳ ರಾಯಭಾರಿಗಳು, ರಾಜತಾಂತ್ರಿಕ ಬಣದ ಸದಸ್ಯರ ಜೊತೆಗೂಡಿ ನೆಹರೂ ಪಾರ್ಕ್‌ನಲ್ಲಿ ಯೋಗ ಮಾಡಿದರು. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಹರಿಯಾಣದ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಬಿಹಾರದ ರಾಜ್ಯಪಾಲ ಆರೀಫ್ ಮೊಹಮ್ಮದ್ ಕಾನ್ ಹೀಗೆ ವಿವಿಧ ಗಣ್ಯರು ಆಯಾ ರಾಜ್ಯಗಳಲ್ಲಿ ನಡೆದ ಪ್ರಮುಖ ಕಾರ್ಯಕ್ರಮದಲ್ಲಿ ಭಾಗಿಯಾದರು. ಹರಿಯಾಣದಲ್ಲಿ ಯೋಗಗುರು ರಾಮದೇವ್ ಜೊತೆಯಾದರು. ಜೂನ್ 21 ಅನ್ನು ಅಂತರರಾಷ್ಟ್ರೀಯ ಯೋಗ ದಿನವಾಗಿ ಆಚರಿಸುವ ನಿರ್ಣಯವನ್ನು 2014ರ ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆ ಕೈಗೊಂಡಿತು. ಈ ಕುರಿತು ಭಾರತದ ಪ್ರಸ್ತಾವವನ್ನು 175 ರಾಷ್ಟ್ರಗಳ ಪ್ರತಿನಿಧಿಗಳು ಅಂದಿನ ಸಭೆಯಲ್ಲಿ ಒಕ್ಕೊರಲಿನಿಂದ ಅನುಮೋದಿಸಿದ್ದರು.

### ಮಿಲೇನಿಯಲ್ಸ್‌ಗಳ ಯೋಗ ಪ್ರೀತಿ

ದೇಶದಲ್ಲಿ ಯುವಜನರಲ್ಲಿ ಶೇ 74ರಷ್ಟು ಜನರು ಯೋಗವನ್ನು ನಿತ್ಯದ ಬದುಕಿನ ಭಾಗವಾಗಿ ಅಳವಡಿಸಿಕೊಂಡಿದ್ದಾರೆ. ಐಸಿಐಸಿಐ ಲೊಂಬಾರ್ಡ್ ವಿಮಾ ಸಂಸ್ಥೆಯು ಮಹಾನಗರ ನಗರಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತವಾಗಿದೆ. 1000 ಮಂದಿ ಈ ಸಮೀಕ್ಷೆಗೆ ಸ್ಪಂದಿಸಿದ್ದರು ಎಂದು ಸಂಸ್ಥೆಯು ಎಕ್ಸ್‌ನಲ್ಲಿ ಪ್ರಕಟಿಸಿದೆ. ಯೋಗ ಒತ್ತಡವನ್ನು ನಿವಾರಿಸುತ್ತದೆ. ಇದು ನಿತ್ಯ ಜೀವನದ ಅಗತ್ಯ ಎಂಬ ಅಭಿಪ್ರಾಯ ವ್ಯಕ್ತವಾಗಿದೆ ಎಂದು ಸಂಸ್ಥೆಯ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥೆ ಶೀನಾ ಕಪೂರ್ ಅವರು ತಿಳಿಸಿದ್ದಾರೆ.

### ನೌಕಾಪಡೆ ನೆಲೆಗಳಲ್ಲಿ ಆಚರಣೆ

ಮುಂಬೈನಲ್ಲಿ ಕೇಂದ್ರ ಕಚೇರಿ ಹೊಂದಿರುವ ಪಶ್ಚಿಮ ನೌಕಾ ಕಮಾಂಡ್ (ಡಬ್ಲ್ಯೂಎನ್‌ಸಿ) ಶನಿವಾರ ಯೋಗ ದಿನವನ್ನು ಆಚರಿಸಿತು. ನೌಕಾಪಡೆ ರಕ್ಷಣಾ ಇಲಾಖೆಯ 7000ಕ್ಕೂ ಹೆಚ್ಚು ನೌಕರರು ಅವರ ಕುಟುಂಬ ಸದಸ್ಯರು ಯೋಗ ದಿನದಲ್ಲಿ ಭಾಗಹಿಸಿದ್ದರು. ಮುಂಬೈ ಗುಜರಾತ್ ಗೋವ ಕರ್ನಾಟಕದಲ್ಲಿ ಯೋಗ ದಿನ ಆಚರಣೆಗಳು ನಡೆದವು. ಇದರ ಹೊರತಾಗಿ ಆರ್ಟ್ ಆಫ್ ಲಿವಿಂಗ್ ಭಾರತ್ ಸ್ವಾಭಿಮಾನ ಮಹಿಳಾ ಪತಂಜಲಿ ಯೋಗ ಸಮಿತಿಗಳು ನೌಕಾಪಡೆ ಸಿಬ್ಬಂದಿಗಾಗಿ ಯೋಗ ಕಾರ್ಯಕ್ರಮ ಆಯೋಜಿಸಿದ್ದವು. ಯೋಧರು ಸಿಬ್ಬಂದಿ ಎಂದಿಗೂ ಉತ್ತಮ ದೇಹದಾರ್ಢ್ಯ ಮಾನಸಿಕ ಮತ್ತು ದೈಹಿಕ ಆರೋಗ್ಯ ಹೊಂದಿರಬೇಕು ಎಂದು ಬಯಸಲಿದೆ. ಈ ವರ್ಷದಿಂದ ಯೋಗವನ್ನು ಈ ನಿಟ್ಟಿನಲ್ಲಿ ನಿತ್ಯದ ಆಚರಣೆಯಾಗಿ ಅಳವಡಿಕೊಳ್ಳಲು ತೀರ್ಮಾನಿಸಿದ್ದು ಅಗತ್ಯ ತರಬೇತಿ ಆಯೋಜಿಸಲು ನೌಕಾಪಡೆ ನಿರ್ಧರಿಸಿತು.

### ಪಾರಂಪರಿಕ ತಾಣಗಳಲ್ಲಿ ಯೋಗ ದಿನ

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು (ಎಎಸ್‌ಐ) ಶನಿವಾರ ದೇಶದ ವಿವಿಧ 81 ಪಾರಂಪರಿಕ ತಾಣಗಳಲ್ಲಿ ಯೋಗ ದಿನ ಆಯೋಜಿಸಿತ್ತು. ಗುಜರಾತ್‌ನ ಅದಲಜ್ ಕೀ ವಾವ್ ಒಡಿಶಾದ ಕೊನಾರ್ಕ್ ಸೂರ್ಯ ದೇಗುಲ ದೆಹಲಿ ಜಂತರ್ ಮಂತರ್ ರಾಜಸ್ಥಾನದ ಮೆಹ್ರಾಘರ್ ಇವುಗಳಲ್ಲಿ ಸೇರಿದ್ದವು. ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಸೇರಿ ಹಲವು ಪ್ರಮುಖರು ಭಾಗವಹಿಸಿದ್ದರು. ಪಾರಂಪರಿಕ ತಾಣಗಳು ಎಂದು ಯುನೆಸ್ಕೊ ಪಟ್ಟಿ ಮಾಡಿರುವ ತಾಣಗಳಲ್ಲಿಯೂ ಕಾರ್ಯಕ್ರಮ ಸಂಘಟಿಸಲಾಗಿತ್ತು.

### ಯೋಗ ನೀತಿ ಪ್ರಕಟಿಸಿದ ಉತ್ತರಾಖಂಡ

ಅಂತರರಾಷ್ಟ್ರೀಯ ಯೋಗ ದಿನವಾದ ಶನಿವಾರ ಉತ್ತರಾಖಂಡ ಸರ್ಕಾರ ಯೋಗ ನೀತಿಯನ್ನು ಪ್ರಕಟಿಸಿತು. ಯೋಗ ನೀತಿ ರೂಪಿಸಿದ ಮೊದಲ ರಾಜ್ಯ ಎಂಬ ಹಿರಿಮೆಗೂ ಪಾತ್ರವಾಯಿತು. ರಾಜ್ಯವನ್ನು ಜಾಗತಿಕವಾಗಿ ದೇಹಾರೋಗ್ಯ ತಾಣವಾಗಿ ರೂಪಿಸುವುದು ಈ ನೀತಿಯ ಉದ್ದೇಶ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದರು. ರಾಜ್ಯದಲ್ಲಿ ದೇಹಾರೋಗ್ಯ ರಕ್ಷಣೆ ಮತ್ತು ಯೋಗ ಕೇಂದ್ರ ಸ್ಥಾಪಿಸಲು ರೂ. 20 ಲಕ್ಷ ಯೋಗ ಸಂಬಂಧಿತ ಕ್ಷೇತ್ರದಲ್ಲಿ ಸಂಶೋಧನೆಗೆ 10 ಲಕ್ಷ ಅನುದಾನ ನೀಡಲಾಗುವುದು ಎಂದರು. ರಾಜ್ಯದಲ್ಲಿ 2030ರ ವೇಳೆಗೆ ಐದು ಕಡೆ ಯೋಗ ಹಬ್‌ಗಳನ್ನು ಸ್ಥಾಪಿಸುವ ಗುರಿಯನ್ನು ಈ ನೀತಿಯಡಿ ರಾಜ್ಯ ಸರ್ಕಾರ ಹೊಂದಿದೆ ಎಂದು ಪ್ರಕಟಿಸಿದರು.





## ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಣವೇ ಸವಾಲು

• ಚಿರತೆ, ಹುಲಿ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಬೋನುಗಳನ್ನು ಇರಿಸಿ ಸೆರೆಗೆ ಕ್ರಮ • ಕ್ಷಿಪ್ರ ಕಾರ್ಯಪಡೆ ತಂಡಗಳ ರಚನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ವನ್ಯಜೀವಿ ಹಾಗೂ ಮಾನವ ಸಂಘರ್ಷಕ್ಕೆ ಕೊನೆ ಇಲ್ಲದಂತಾಗಿದೆ. ಪಶ್ಚಿಮ ಘಟ್ಟ ಪ್ರದೇಶದ ಜಿಲ್ಲೆಗಳು, ಮೈಸೂರು, ಚಾಮರಾಜನಗರ ಸೇರಿದಂತೆ ವಿವಿಧ ಕಡೆಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ವಿಪರೀತವಾಗಿದೆ. ಆದರೆ ಇದಕ್ಕೆ ರೈತರು, ಕಾಡಂಚಿನಲ್ಲಿರುವ ಬಡ ವರ್ಗದವರು ಬಲಿಯಾಗುತ್ತಿದ್ದಾರೆ. ಕೃಷಿ ಹಾನಿ, ಪ್ರಾಣ ಹಾನಿ ನಿರಂತರವಾಗಿ ನಡೆಯಿತ್ತಿದೆ. ಈ ನಡುವೆ 2021 ರಿಂದ ಈವರೆಗೆ ರಾಜ್ಯದಲ್ಲಿ 43 ಕಾಡಾನೆ ಹಾಗೂ 14 ಹುಲಿಗಳನ್ನು ಸೆರೆ ಹಿಡಿಯಲಾಗಿದೆ.

**ನಿಯಂತ್ರಣಕ್ಕೆ ಕ್ರಮಗಳೇನು?:** ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಮಾನವ ಹಾಗೂ ಆನೆ ನಡುವೆ ಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ನಿಯಂತ್ರಿಸಲು ಉಪಯೋಗಿಸಿದ ರೈಲ್ವೆ ಹಳಿಗಳನ್ನು ಉಪಯೋಗಿಸಿಕೊಂಡು ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಒಟ್ಟು 391.832 ಕಿ.ಮೀ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ.





4 ವರ್ಷಗಳಲ್ಲಿ 43 ಕಾಡಾನೆ, 14 ಹುಲಿಗಳ ಸೆರೆ!

**ಆನೆ ಕಾರ್ಯಪಡೆಗಳ ಸ್ಥಾಪನೆ:** ಸರ್ಕಾರವು 21.11.2022 ರ ಆದೇಶದಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ, ಚಾಮರಾಜನಗರ ಜಿಲ್ಲೆ, ರಾಮನಗರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೆ ಒಂದರಂತೆ ಅಧಿಕಾರಿ /ಸಿಬ್ಬಂದಿಗಳನ್ನೊಳಗೊಂಡ 8 ಆನೆ ಕಾರ್ಯಪಡೆಯನ್ನು ರಚಿಸಲಾಗಿರುತ್ತದೆ.

### ಪ್ರಾಣ ಕಳೆದುಕೊಂಡವರೆಷ್ಟು?

ಕಾಡು ಪ್ರಾಣಿಗಳು ಹಾಗೂ ಮಾನವನ ನಡುವಿನ ಸಂಘರ್ಷಕ್ಕೆ ರಾಜ್ಯದಲ್ಲಿ ಹಲವು ಮಂದಿ ಬಲಿ ಆಗಿದ್ದಾರೆ. ಅರಣ್ಯ ಇಲಾಖೆಯ ಅಂಕಿ - ಅಂಶಗಳ ಪ್ರಕಾರ 2023-24 ರಲ್ಲಿ 65 ಮಂದಿ ಸಾವನ್ನಪ್ಪಿದರೆ, 2024-25 ರಲ್ಲಿ 42 ಮಂದಿ ಮೃತರಾಗಿದ್ದಾರೆ.



**ಚಿರತೆ ಕಾರ್ಯಪಡೆಗಳ ಸ್ಥಾಪನೆ:** ಮೈಸೂರು, ನಂಜನಗೂಡು, ಎಚ್.ಡಿ.ಕೋಟೆ, ಸರಗೂರು, ಟಿ.ನರಸೀಪುರ, ಮಂಡ್ಯ, ಪಾಂಡವಪುರ ಹಾಗೂ ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ಇವರ ನೇತೃತ್ವದಲ್ಲಿ ಚಿರತೆ ಕಾರ್ಯಪಡೆ ರಚಿಸಲಾಗಿದೆ.


ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ರವರ ಅಧಿಕೃತ ಜ್ಞಾಪನಾ ಪತ್ರ 24.11.2023ರಲ್ಲಿ ಬೆಂಗಳೂರು ಜಿಲ್ಲೆಯ ಕಗ್ಗಲೀಪುರ / ಆನೆಕಲ್ ಯಲಹಂಕ, ಹೊಸಕೋಟೆ, ಕೆ.ಆರ್.ಪುರಂ ವಲಯಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಚಿರತೆ ಕಾರ್ಯಪಡೆಯನ್ನು ರಚಿಸಲಾಗಿದೆ.

**ತಂತ್ರಜ್ಞಾನ ಬಳಕೆ:** ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ ಹೆಜ್ಜೆ ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ. ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಅಡ್ವಾನ್ಸ್ ಅಲರ್ಟ್ ಸಿಸ್ಟಮ್ ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ. ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ಮಾಹಿತಿ ನೀಡಲು ಡಿಜಿಟಲ್ ಬೋರ್ಡ್ ಗಳನ್ನು ಅಳವಡಿಸಲಾಗಿದೆ. ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ ಎಐ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಗಮನಿಸಲಾಗುತ್ತಿದೆ. ವನ್ಯಜೀವಿ ಪ್ರಾಣಿಗಳ ಚಲನ-ವಲನಗಳನ್ನು ಡ್ರೋನ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,075/Gram24ct ₹9,235/Gram22ct | ಬೆಳ್ಳಿ: ₹110.00/Gram

## ಕರ್ನಾಟಕ ಶಾಸ್ತ್ರೀಯ ಸಂಗೀತ

• ಉದಯವಾಹಿನಿ, ಬೆಂಗಳೂರು



ಶ್ರೀ ವೆಂಕಟೇಶ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಜೂನ್ 22, ಭಾನುವಾರ ಸಂಜೆ 5-30ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ. ಗಾಯನ: ವಿದುಷಿ ಶ್ರೀಮತಿ ಶರಣ್ಯಾ ನಂದನ್, ಪಿಟೀಲು ಕು|| ಹೃಷಿತಾ ಕೇದಗೆ, ಮೃದಂಗ : ವಿದ್ವಾನ್ ಶ್ರೀ ಅಪ್ರಮೇಯ. ಸ್ಥಳ : 48, ಮೊದಲನೇ ಮಹಡಿ, ಸುಮಧ್ವ ಧಾಮ', 6ನೇ ಮುಖ್ಯರಸ್ತೆ, ಕಾವೇರಿ ರಸ್ತೆ, ಕೆ.ಎಸ್.ಆರ್.ಟಿ.ಸಿ. ಲೇಔಟ್, ಚಿಕ್ಕಲ್ಲಸಂದ್ರ, ಬೆಂಗಳೂರು-560061

# ಆಯುಷ್ ಇಲಾಖೆಯಿಂದ ಯಶಸ್ವಿಯಾಗಿ ನಡೆದ ಯೋಗ ದಿನಾಚರಣೆ

## ಜಿಲ್ಲಾಸ್ಪತ್ರೆಗಳು, ಆರೋಗ್ಯ ಕೇಂದ್ರಗಳಲ್ಲಿ ಯೋಗ ಮಂದಿರ ಸ್ಥಾಪನೆ - ಆರೋಗ್ಯ ಸಚಿವ ದಿನೇಶ್ ಗುಂಡೂರಾವ್


• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಹೆಚ್ಚಿನ ಜನರಿಗೆ ಯೋಗ ಪರಿಚಯಿಸುವ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಯೋಗ ಮಂದಿರಗಳನ್ನು ಸ್ಥಾಪಿಸುವುದಾಗಿ ಆರೋಗ್ಯ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಬೆಂಗಳೂರಿನ ವಿಧಾನ ಸೌಧದಲ್ಲಿ 11 ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು ಸಚಿವರು ಮಾತನಾಡುತ್ತಿದ್ದರು.

ವಿಶ್ವ ಮಟ್ಟದಲ್ಲಿ ಮನ್ನಣೆ ಪಡೆದಿರುವ ಯೋಗವನ್ನು ನಾವು ಹೆಚ್ಚಿನ ಜನರಿಗೆ ಪರಿಚಯಿಸಬೇಕಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಲವು ಕಾರ್ಯಕ್ರಮಗಳನ್ನ ಹಾಕಿಕೊಳ್ಳುತ್ತಿದೆ.

ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಯೋಗ ಪರಿಚಯಿಸುವ ಯೋಗ ಮಂದಿರಗಳನ್ನ ಪ್ರಾರಂಭಿಸುವುದಾಗಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಮೈಸೂರು ಜಿಲ್ಲೆಯನ್ನು ಯೋಗ ಜಿಲ್ಲೆಯನ್ನಾಗಿ ನಿರ್ಮಿಸುವತ್ತ ಈಗಾಗಲೇ ಯೋಜನೆ ರೂಪಿಸಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದೇವೆ. ಮೈಸೂರು ಜಿಲ್ಲೆಯ ಪ್ರತಿ ಮನೆಗಳಲ್ಲಿ ಒಬ್ಬರಾದರೂ ಯೋಗಭ್ಯಾಸ ನಡೆಸುವ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಲು ಗುರಿ ಹೊಂದಲಾಗಿದೆ.

ದೇಶದಲ್ಲಿಯೇ ಪ್ರಥಮ ಬಾರಿಗೆ ರಾಜ್ಯದಲ್ಲಿ ಒಂದು ಜಿಲ್ಲೆಯನ್ನು ಸಂಪೂರ್ಣವಾಗಿ ಯೋಗ ಜಿಲ್ಲೆಯನ್ನಾಗಿ ರೂಪಿಸುವತ್ತ ಹೆಜ್ಜೆ ಇಟ್ಟಿದ್ದೇವೆ. ರಾಜ್ಯದಲ್ಲಿ ಪರಂಪರಾಗತವಾಗಿ ಬಂದ ಅಷ್ಟಾಂಗ ಯೋಗಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



ಉದಯವಾಹಿನಿ ಚಿತ್ರ

ಥಾವರ್ ಚಂದ್ ಗೆಹ್ಲೋಟ್ ಚಾಲನೆ

**ಅಲ್ಲದೇ ಯೋಗ ಧನುಷ್ ಎಂಬ ಕಾರ್ಯಕ್ರಮದ ಮೂಲಕ ರಾಜ್ಯದಾದ್ಯಂತ 5 ಲಕ್ಷ ಜನರಿಗೆ ಯೋಗ ಪ್ರೋಟೋಕಾಲ್ ಅನ್ನು ಹೇಳಿಕೊಡಲಾಗಿದ್ದು, ಕಾರ್ಯಕ್ರಮದ ಅಡಿಯಲ್ಲಿ 5000 ಶಾಲೆಗಳಲ್ಲಿ ಯೋಗ ಪ್ರೋಟೋಕಾಲ್ ಅನ್ನು ಮಾಡಲು ಕ್ರಮಕೈಗೊಳ್ಳಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಈ ಬಾರಿಯ ವಿಶ್ವ ಯೋಗ ದಿನಾಚರಣೆಯನ್ನ ಆಚರಿಸಲಾಯಿತು. ವಿಧಾನ ಸೌಧದ ಮೆಟ್ಟಿಲುಗಳ ಎದುರು 5 ಸಾವಿರಕ್ಕೂ ಹೆಚ್ಚು ಜನರು ಯೋಗಾಭ್ಯಾಸ ನಡೆಸಿದರು. ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಭಾಪತಿ ಬಸವರಾಜ್ ಹೊರಟ್ಟಿ ಅವರೊಂದಿಗೆ ಯೋಗಭ್ಯಾಸ ನಡೆಸಿದರು.**

ವಿಶಾಖಪಟ್ಟಣಂ ಸಮುದ್ರ ಕಿನಾರೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಯೋಗಾಭ್ಯಾಸ ನಡೆಸಿದರು.

ಆಯುಷ್ ಇಲಾಖೆಯಿಂದ ಯಶಸ್ವಿಯಾಗಿ 11ನೇ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಗಿದೆ. ರಾಜ್ಯದ 10 ಸಾವಿರ ಸ್ಥಳಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಜನರಿಗೆ ಯೋಗಭ್ಯಾಸ ಮಾಡಲು ಸರ್ಕಾರ ಅನುವು ಮಾಡಿಕೊಟ್ಟುತ್ತು. 45 ನಿಮಿಷಗಳ ಯೋಗ ಪ್ರಾತ್ಯಕ್ಷಿಕೆಯನ್ನ ಪ್ರದರ್ಶಿಸಲಾಯಿತು.

ರಾಜ್ಯದ ಹಲವೆಡೆ ಯೋಗ ದಿನಾಚರಣೆಯ ಪ್ರಯುಕ್ತ ಯೋಗ ಪಾರ್ಕ್, ಯೋಗ ಧನುಷ್, ಹಸಿರು ಯೋಗ, ಯೋಗ ಮಹಾಕುಂಭ, ಯೋಗ ಸಂಯೋಗ, ಯೋಗ ಅನ್ ಪ್ಲಗ್ಸ್ ನಂತಹ ಕಾರ್ಯಕ್ರಮಗಳನ್ನು ಆಯುಷ್ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದೆ.

ಹಸಿರು ಯೋಗ ಕಾರ್ಯಕ್ರಮದ ಅಡಿಯಲ್ಲಿ 1 ಲಕ್ಷ ಗಿಡಗಳನ್ನ ನಡಲಾಗುವುದು.

## ನಮ್ಮ ಕ್ಲಿನಿಕ್‌ಗಳಿಗೆ ಬೀಳುತ್ತಾ ಬೀಗ?

• ಉದಯವಾಹಿನಿ, ಬೆಂಗಳೂರು

ಬಡವರ ಚಿಕಿತ್ಸೆಗೆ ನೆರವಾಗಲಿ ಎಂದು ಬಿಬಿಎಂಪಿ ವ್ಯಾಪ್ತಿಯಲ್ಲಿ ತೆರೆಯಲಾಗಿರುವ ನಮ ಕ್ಲಿನಿಕ್‌ಗಳಿಗೆ ಬೀಗ ಜಡಿಯುವ ಪರಿಸ್ಥಿತಿ ಬಂದೋದಗಿದೆ. ನಮ ಕ್ಲಿನಿಕ್‌ಗಳನ್ನು ಆರಂಭಿಸಿದ ದಿನದಿಂದಲೂ ಒಂದಿಲ್ಲ ಒಂದು ಸಮಸ್ಯೆ ಎದುರಾಗುತ್ತಲೆ ಇದೆ. ಅಂತಹ ಕ್ಲಿನಿಕ್‌ಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಕಳೆದ ಮೂರು ತಿಂಗಳಿನಿಂದ ಸಂಬಳ ಸಿಗುತ್ತಿಲ್ಲ. ಸರ್ಕಾರದ ಈ ಧೋರಣೆಯಿಂದ ಬೇಸತ್ತಿರುವ ಸಿಬ್ಬಂದಿಗಳು ಮುಂದಿನ ತಿಂಗಳು ಬಾಕಿ ಇರುವ ಸಂಬಳ ಪಾವತಿಸದಿದ್ದರೆ ಕ್ಲಿನಿಕ್‌ಗಳನ್ನು ತೆರೆಯುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ನಗರದಲ್ಲಿ ಒಟ್ಟು 140 ಕ್ಕೂ ಹೆಚ್ಚು ನಮ್ಮ ಕ್ಲಿನಿಕ್‌ಗಳು ಇವೆ. ಇಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆ. ಬಡವರಿಗೆ, ಕೂಲಿ ಕಾರ್ಮಿಕರಿಗೆ ಉಚಿತ ಚಿಕಿತ್ಸೆ ಸಿಗಲಿ ಎಂಬ ಉದ್ದೇಶದಿಂದ ಓಪನ್ ಆಗಿರುವ ನಮ್ಮ ಕ್ಲಿನಿಕ್‌ಗಳಿಗೆ ಇದೀಗ ಬೀಗ ಜಡಿಯುವ ಪರಿಸ್ಥಿತಿ ಬಂದಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತರಲಾದ ನಮ್ಮ ಕ್ಲಿನಿಕ್ ಕಾನ್ಸೆಪ್ಟ್‌ಗೆ ಹಾಲಿ ಕಾಂಗ್ರೆಸ್ ಸಹಕಾರ ನೀಡುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿವೆ. ಈ ಹಿಂದೆ ಕಾಂಗ್ರೆಸ್ ಜಾರಿಗೆ ತಂದಿದ್ದ ಇಂದಿರಾ ಕ್ಯಾಂಟಿನ್‌ಗಳ ಬಗ್ಗೆ ಅಂದಿನ ಬಿಜೆಪಿ ಸರ್ಕಾರ ಉದಾಸೀನ ತೋರಿತ್ತು. ಈಗ ಇರುವ ಕಾಂಗ್ರೆಸ್ ಸರ್ಕಾರವೂ ಅದೇ ಧೋರಣೆಯನ್ನು ಮುಂದುವರೆಸುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಗ್ಯಾರಂಟಿ ಯೋಜನೆಗಳಿಂದ ಕಾಂಗ್ರೆಸ್ ಸರ್ಕಾರ ನಮಗೆ ಸಂಬಳ ನೀಡಲು ಮೀನಾಮೇಷ ಎಣಿಸುತ್ತಿದೆ. ಇದೇ ಧೋರಣೆ ಮುಂದುವರೆದರೆ ನಾವು ಮುಂದಿನ ತಿಂಗಳಿನಿಂದ ಕ್ಲಿನಿಕ್ ತೆರೆಯಲ್ಲ ಎನ್ನುತ್ತಿದ್ದಾರೆ ಅಲ್ಲಿನ ಸಿಬ್ಬಂದಿಗಳು.

## ತೊಗರಿ ಬೇಳೆ ದರ ಇಳಿಕೆ; ಗ್ರಾಹಕರು ಖುಷ್.. ರೈತರಿಗೆ ನಿರಾಸೆ!


• ಉದಯವಾಹಿನಿ, ಬೆಂಗಳೂರು

ಕಳೆದ ವರ್ಷ ಇದೇ ಸಮಯದಲ್ಲಿ ಗಗನಕ್ಕೇರಿದ್ದ ತೊಗರಿ ಬೇಳೆ ಬೆಲೆ ಈ ವರ್ಷ ಗಣನೀಯವಾಗಿ ಕುಸಿತ ಕಂಡಿದ್ದು, ಗ್ರಾಹಕರಲ್ಲಿ ಹರ್ಷ ಮನೆ ಮಾಡಿದೆ. ಗಗನದತ್ತ ಮುಖ ಮಾಡಿದ್ದ ತೊಗರಿ ಬೇಳೆ ಬೆಲೆಯಲ್ಲಿ ಗಣನೀಯ ಇಳಿಕೆ ಕಂಡುಬಂದಿದ್ದು, ದೇಶದಲ್ಲಿ ಇಳುವರಿ ಹೆಚ್ಚಾದ ಹಿನ್ನಲೆಯಲ್ಲಿ ಬೆಲೆಯಲ್ಲಿ ಕೂಡ ಕುಸಿತ ಕಂಡುಬಂದಿದೆ ಎನ್ನಲಾಗಿದೆ.

ಇದರಿಂದಾಗಿ ಕೈಗೆಟಕುವ ದರದಲ್ಲಿ ಗ್ರಾಹಕರು ತೊಗರಿ ಬೇಳೆ ಖರೀದಿಸಲು ಸಾಧ್ಯವಾಗುತ್ತಿದೆ. ಆದರೆ, ಕಳೆದ ವರ್ಷ ಕ್ವಿಂಟಲ್‌ಗೆ 12 ಸಾವಿರಕ್ಕೆ ಏರಿಕೆ ಕಂಡಿದ್ದ ತೊಗರಿ ದರ ಈ ಬಾರಿ 6,500ರಿಂದ 7 ಸಾವಿರ ರೂ ಆಸುಪಾಸಿಗೆ ಕುಸಿದಿದೆ.

**ಉತ್ಪಾದನೆ ಹೆಚ್ಚಳ:** ತೊಗರಿ ಕಣಜ ಎಂದೇ ಖ್ಯಾತಿ ಪಡೆದಿರುವ ಕಲಬುರಗಿ ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಹೆಚ್ಚಿನ ಇಳುವರಿ ಬಂದಿರುವುದರ ಜೊತೆಗೆ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿಯೂ ಉತ್ಪಾದನೆ ಹೆಚ್ಚಿದ ಪರಿಣಾಮ ತೊಗರಿ ಬೇಳೆಯ ಬೆಲೆಯಲ್ಲಿ ಭಾರಿ ಇಳಿಕೆಯಾಗಿದೆ. ಅಲ್ಲದೆ ಕೇಂದ್ರ ಸರ್ಕಾರವು ಬರ್ಮಾ, ಘಾನಾ, ದಕ್ಷಿಣ ಆಫ್ರಿಕಾ ದೇಶಗಳಿಂದ ಈ ಬಾರಿ ತೊಗರಿಯನ್ನು ಆಮದು ಮಾಡಿಕೊಂಡಿದ್ದರಿಂದ ತೊಗರಿ ಸಂಗ್ರಹ ಯಥೇಚ್ಛವಾಗಿದೆ. ದಾಲ್ ಮಿಲ್‌ಗಳು ಹೆಚ್ಚಿನ ಪ್ರಮಾಣದಲ್ಲಿ ತೊಗರಿ ಬೇಳೆಯನ್ನು ಉತ್ಪಾದನೆ ಮಾಡಿವೆ ಎಂದು ಪತ್ರಿಕೆಯೊಂದರ ವರದಿಯಲ್ಲಿ ಉಲ್ಲೇಖಿಸಲಾಗಿದೆ.

## ಯೋಗಾಭ್ಯಾಸ ಮಾಡಲು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕರೆ



• ಉದಯವಾಹಿನಿ, ಬೆಂಗಳೂರು

ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಶುಭಾಶಯಗಳನ್ನು ಕೋರಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು, ಆರೋಗ್ಯಕ್ಕಾಗಿ ಎಲ್ಲರೂ ಯೋಗಾಭ್ಯಾಸ ಮಾಡಬೇಕು ಎಂದು ಕರೆ ನೀಡಿದ್ದಾರೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಇಷ್ಟು ದಿನ ನನ್ನನ್ನು ಮುನ್ನಡೆಸಿದ್ದು, ಯೋಗ. ಯೋಗವು ನನ್ನ ಮನಸ್ಸು ಮತ್ತು ದೇಹ ಎರಡಕ್ಕೂ ನೆರವಾಗಿದೆ ಎಂದಿದ್ದಾರೆ. ಎಲ್ಲರಿಗೂ ತುಂಬಾ ತೃಪ್ತಿಕರ ಮತ್ತು ಆರೋಗ್ಯಕರ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಶುಭಾಶಯಗಳನ್ನು ಕೋರುವುದಾಗಿ ಅವರು ಹೇಳಿದ್ದಾರೆ.

## ಪ್ರತಿಪಕ್ಷದ ನಾಯಕ ಆರ್.ಅಶೋಕ್‌ರವರು ಬಹಿರಂಗ ಸವಾಲು

• ಉದಯವಾಹಿನಿ, ಬೆಂಗಳೂರು

ಸಿದ್ದರಾಮಯ್ಯ ಅವರಿಗೆ ಸ್ವಲ್ಪವಾದರೂ ಮಾನ ಮಾರ್ಯಾದೆ ಅಥವಾ ಕನಿಷ್ಠ ಪಕ್ಷ ಸಾರ್ವಜನಿಕ ಜೀವನದಲ್ಲಿ ಗೌರವ ಇಟ್ಟುಕೊಂಡಿದ್ದರೆ, ವಸತಿ ಇಲಾಖೆಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ತನಿಖೆಗೆ ಆದೇಶ ನೀಡಲಿ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್‌ರವರು ಬಹಿರಂಗ ಸವಾಲು ಹಾಕಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು, ವಸತಿ ಇಲಾಖೆಯಲ್ಲಿ ಮನೆ ಹಂಚಿಕೆಗೆ ಫಲಾನುಭವಿಗಳು ಹಣ ನೀಡಬೇಕು ಎಂದು ಸ್ವತಃ ಕಾಂಗ್ರೆಸ್ ಪಕ್ಷದ ಶಾಸಕ ಬಿ.ಆರ್.ಪಾಟೀಲ್ ಅವರೇ ಇದನ್ನು ಬಹಿರಂಗಪಡಿಸಿದ್ದಾರೆ. ಲಂಚಕ್ಕೆ ಇದಕ್ಕಿಂತ ಇನ್ನೇನು ಸಾಕ್ಷಿ ಬೇಕು ಎಂದು ಪ್ರಶ್ನೆ ಮಾಡಿದರು.

ವಸತಿ ಇಲಾಖೆಯಲ್ಲಿ ಲಂಚ ಕೊಡದೇ ಮನೆ ಸಿಗುವುದಿಲ್ಲ. ಶಾಸಕರೇ ಇದರ ಬಗ್ಗೆ ಮಾತಾಡಿದ್ದಾರೆ, ಆಡಿಯೋ ಇದೆ. ಇದು ಸ್ಯಾಂಪಲ್ ಮಾತ್ರ, ಮನೆ ಬೇಕಾ ಲಂಚ ಕೊಡಿ, ಸಿಎಂಗೆ ಗೌರವ ಇದ್ದರೆ, , ಮಾನ ಮರ್ಯಾದೆ ಇದ್ದರೆ ಕೂಡಲೇ ಇದನ್ನು ತನಿಖೆಗೆ ಕೊಡಲಿ. ಇಲ್ಲದ ಸಬೂಬು ಹೇಳುವುದು ಬೇಡ ಎಂದು ವಾಗ್ದಾಳಿ ನಡೆಸಿದರು.



ಉದಯವಾಹಿನಿ ಚಿತ್ರ

ಆಡಳಿತ ಪಕ್ಷದವರೇ ಆಡಳಿತ ಪಕ್ಷದ ವಿರುದ್ಧ ಆಪಾದನೆ ಮಾಡುತ್ತಿದ್ದಾರೆ. ಇದು ಭ್ರಷ್ಟ ಸರ್ಕಾರ, 60% ಸರ್ಕಾರ. ಇವರು ಸ್ಲೀಪಿಂಗ್ ಸಿದ್ದರಾಮಯ್ಯ, ನಿದ್ದೆ ಮಾಡೋ ಸಿದ್ದರಾಮಯ್ಯ. ಗಣಿ ಇಲಾಖೆಯಲ್ಲೂ ಲೂಟಿ ನಡೆಯುತ್ತಿದೆ. ಎಲ್ಲಾ ಇಲಾಖೆಗಳಲ್ಲೂ ಅಕ್ರಮ ನಡೆಯುತ್ತಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಪತ್ರ ಬರೆದಿರುವುದು ಇದಕ್ಕೆ ಸಾಕ್ಷಿ ಎಂದು ಕಿಡಿಕಾರಿದರು.

ಕಾಂಗ್ರೆಸ್ ಶಾಸಕರು ಬಾಯಿ ಬಿಟ್ಟರೆ, 3 ದಿನ ಈ ಸರ್ಕಾರ ಉಳಿಯುವುದಿಲ್ಲ. ಮನೆಗೆ ಹೋಗಲು ಲಂಚ ಪ್ರಕರಣ ಒಂದೇ ಸಾಕು, ತನಿಖೆಗೆ ವಹಿಸಿದರೆ ಸರ್ಕಾರ ವಜಾ ಆಗುತ್ತದೆ. 224 ಕ್ಷೇತ್ರಗಳಲ್ಲೂ ಲಂಚ ಇದೆ, ಎಷ್ಟು ಜನ ಅಧಿಕಾರಿಗಳಿಗೆ ಗಲ್ಲು ಹಾಕ್ತೀರಿ ಸುಮ್ಮನೆ ನಾಟಕದ ಹೇಳಿಕೆ ಬೇಡ. ಬಡವರನ್ನು ಲೂಟಿ ಮಾಡುತ್ತಿರುವ ಸರ್ಕಾರ ತೊಲಗಬೇಕು ಎಂದು ಟೀಕಾ ಪ್ರಹಾರ ನಡೆಸಿದರು.

**ಮುಸ್ಲಿಮರಿಗೆ 15% ವಸತಿ ಮೀಸಲಾತಿ ವಿಚಾರದಲ್ಲಿ ವಸತಿ ಸಚಿವ ಜಮೀರ್ ಸ್ಪಷ್ಟೀಕರಣ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಅಶೋಕ್, ತಪ್ಪು ಮುಚ್ಚಿಕೊಳ್ಳಲು ಜಮೀರ್ ಏನೇನೋ ಹೇಳುವುದು ಬೇಡ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವಧಿಯಲ್ಲಿ ಸಂಪುಟ ಉಪಸಮಿತಿ ತೀರ್ಮಾನ ಮಾಡಿದ್ದರೆ, ತನಿಖೆಗೆ ಕೊಡಲಿ. ತಪ್ಪು ಮುಚ್ಚಿಕೊಳ್ಳಲು ಏನೇನೋ ಹೇಳುವುದು ಸರಿಯಲ್ಲ, ತನಿಖೆ ಮಾಡಿಸಲಿ ಎಂದು ಆಗ್ರಹಿಸಿದರು.**

## ಬಾರ್‌ಗಳು, ರೆಸ್ಟೋರೆಂಟ್‌ಗಳ ಮೇಲೆ ವಿಶೇಷ ದಾಳಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಪೊಲೀಸರು ನಡೆಸಿದ ತಡರಾತ್ರಿ ವಿಶೇಷ ಕಾರ್ಯಾಚರಣೆಯಲ್ಲಿ 19 ಬಾರ್ ರೆಸ್ಟೋರೆಂಟ್‌ಗಳು COPTA ನಿಯಮಗಳನ್ನು ಉಲ್ಲಂಘಿಸಿ, ಮಹಿಳಾ ಸರ್ವರ್‌ಗಳನ್ನು ಅಕ್ರಮವಾಗಿ ನೇಮಿಸಿಕೊಂಡು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ಪಶ್ಚಿಮ ವಲಯದಲ್ಲಿರುವ ಹಲವಾರು ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳು ಮಹಿಳಾ ಸರ್ವರ್‌ಗಳನ್ನು ಅಕ್ರಮವಾಗಿ ನೇಮಿಸಿಕೊಂಡು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿವೆ ಎಂದು ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರಿಗೆ ವಿಶ್ವಾಸಾರ್ಹ ಮಾಹಿತಿ ಬಂದ ನಂತರ ಗುರುವಾರ ರಾತ್ರಿ ದಾಳಿ ನಡೆಸಲಾಯಿತು ಎಂದು ಅವರು ಹೇಳಿದ್ದಾರೆ.

ಉಪ್ಪಾರಪೇಟೆ, ಕಾಟನ್‌ಪೇಟೆ, ಕಲಾಸಿಪಾಳ್ಯ, ಕಬ್ಬನ್ ಪಾರ್ಕ್ ಮತ್ತು ಅಶೋಕನಗರ ಪೊಲೀಸ್ ಠಾಣೆಗಳ ವ್ಯಾಪ್ತಿಗೆ ಬರುವ ಈ ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳ ಮೇಲೆ ವಿಶೇಷ ದಾಳಿ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದಾಳಿ ಸಮಯದಲ್ಲಿ 19 ಬಾರ್, ರೆಸ್ಟೋರೆಂಟ್‌ಗಳು ಪ್ರಚೋದನಕಾರಿಯಾಗಿ ಬಟ್ಟೆ ಧರಿಸಿ, ಗ್ರಾಹಕರ ಟೇಬಲ್‌ಗಳ ಬಳಿ ಅಸಭ್ಯವಾಗಿ ನಿಂತಿರುವ ಮಹಿಳಾ ಸರ್ವರ್‌ಗಳು ಪತ್ತೆಯಾಗಿದ್ದು, ಅವರನ್ನು ನಿಯಮಗಳನ್ನು ಉಲ್ಲಂಘಿಸಿ ನೇಮಿಸಿಕೊಂಡಿರುವುದು ಕಂಡುಬಂದಿದೆ.



ಮಹಿಳಾ ಭದ್ರತಾ ಸಿಬ್ಬಂದಿಯ ಅನುಪಸ್ಥಿತಿ, ಅಡುಗೆ ಪ್ರದೇಶಗಳಲ್ಲಿ ಸ್ವಚ್ಛತೆಯ ಕೊರತೆ ಸೇರಿದಂತೆ ಮತ್ತಷ್ಟು ಕಾನೂನು ಉಲ್ಲಂಘನೆಗಳನ್ನು ಗಮನಿಸಲಾಗಿದೆ. ಸರಿಯಾದ ಧೂಮಪಾನ ವಲಯ ಗೊತ್ತುಪಡಿಸದಿರುವುದು ಅಥವಾ ನಿರ್ವಹಿಸದಿರುವುದು ಮತ್ತು ಅನುಮತಿಸಲಾದ ಸಮಯ ಮೀರಿ ಕಾರ್ಯನಿರ್ವಹಿಸುವುದು ಕಂಡುಬಂದಿದೆ ಎಂದು ಬೆಂಗಳೂರು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿ.ಆರ್.ಪಾಟೀಲ್ ವಿರುದ್ಧ ಡಿಕೆಶಿ ಗರಂ

• ಉದಯವಾಹಿನಿ, ಬೆಂಗಳೂರು

ಆಡಳಿತ ಪಕ್ಷದ ಶಾಸಕ ಬಿ.ಆರ್.ಪಾಟೀಲ್ ಅವರ ಹೇಳಿಕೆಯನ್ನು ತಾವು ಖಂಡಿಸುತ್ತಿದ್ದು, ಮುಖ್ಯಮಂತ್ರಿ ಹಾಗೂ ತಾವು ಅವರಿಗೆ ಈ ವಿಚಾರವಾಗಿ ಸೂಕ್ತ ತಿಳುವಳಿಕೆ ನೀಡುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರೋಪ ಮಾಡಿರುವ ಬಿ.ಆರ್.ಪಾಟೀಲ್ ಮತ್ತೆ ಅದನ್ನು ಪುನರುಚ್ಚರಿಸಿರುವುದನ್ನು ಒಪ್ಪುವುದಿಲ್ಲ. ಅವರು ಏನು ಮಾತನಾಡಿದ್ದಾರೆ ಎಂದು ನನಗೆ ಇನ್ನೂ ಅರ್ಥವಾಗಿಲ್ಲ ಎಂದಿದ್ದಾರೆ.

ಈ ಹೇಳಿಕೆ, ನಡವಳಿಕೆ ಮುಖ್ಯಮಂತ್ರಿಯವರ ಗಮನಕ್ಕೆ ಬಂದಿದೆ. ಅದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಾರೆ ಎಂದರು. ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿ ನಡೆಯುತ್ತಿದೆ.

ಗ್ರಾ.ಪಂ. ಅರ್ಹ ಫಲಾನುಭವಿಯನ್ನು ಆಯ್ಕೆ ಮಾಡುತ್ತದೆ. 1.50 ಲಕ್ಷ ರೂ. ಅನುದಾನ ನೀಡುವುದಕ್ಕೆ ಯಾವ ಮಂತ್ರಿ ಲಂಚ ಕೇಳಲು ಸಾಧ್ಯ ಎಂದು ಪ್ರಶ್ನಿಸಿದ್ದಾರೆ. ಬಿ.ಆರ್.ಪಾಟೀಲ್ ಯಾವ ಹಂತದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಆದರೆ ಆ ರೀತಿ ಯಾವುದೇ ಭ್ರಷ್ಟಾಚಾರ ನಡೆಯುತ್ತಿಲ್ಲ. ಮುಖ್ಯಮಂತ್ರಿ, ತಾವು ಬಿ.ಆರ್.ಪಾಟೀಲರಿಗೆ ಸ್ಪಷ್ಟವಾಗಿ ಈ ಬಗ್ಗೆ ಏನು ಹೇಳಬೇಕೋ ಅದನ್ನು ಹೇಳುತ್ತೇವೆ ಎಂದಿದ್ದಾರೆ.

ಸಂಪುಟದಲ್ಲಿರುವ ಹಲವು ಸಚಿವರು ಬಿ.ಆರ್ ಪಾಟೀಲ್ ಹೇಳಿಕೆ ಬಗ್ಗೆ ತಮ್ಮದೇ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಬಿ.ಆರ್.ಪಾಟೀಲ್ ಪದೇಪದೇ ಈ ರೀತಿಯ ಹೇಳಿಕೆಗಳ ಮೂಲಕ ಗೊಂದಲ ಮೂಡಿಸುತ್ತಿರುವುದಕ್ಕೆ ಕೆಲ ಸಚಿವರು ಬಹಿರಂಗ ಅಸಮಾಧಾನವನ್ನು ಹೊರಹಾಕಿದ್ದಾರೆ. ನಿನ್ನೆ ಆಡಿಯೋ ಬಹಿರಂಗವಾದ ಸಂದರ್ಭದಲ್ಲಿ ಡಿ.ಕೆ.ಶಿವಕುಮಾರ್ ಏಕಾಏಕಿ ಪ್ರತಿಕ್ರಿಯಿಸಲು ನಿರಾಕರಿಸಿದರು. ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಣುಚಿಕೊಂಡಿದ್ದರು. ಬಿ.ಆರ್.ಪಾಟೀಲ್ ತಮ್ಮ ಆರೋಪವನ್ನು ಪುನರುಚ್ಚರಿಸಿದ್ದು, ನಾನು ಹೇಳಿರುವುದು ಸತ್ಯ ಎಂದಿದ್ದಕ್ಕೆ ಡಿಕೆಶಿ ಖಾರವಾಗಿ ತಿರುಗೇಟು ನೀಡಿದ್ದಾರೆ. ಈ ಯೋಜನೆಯಲ್ಲಿ ಮಾರ್ಪಾಟು ಮಾಡಿರುವ ಅಂಶಗಳು, ಸಚಿವರುಗಳ ಸಲಹೆಗಳನ್ನು ನೀಡಿದ್ದಾರೆ. ಇಲ್ಲಿ ಕೆಲವು ತಾಂತ್ರಿಕ ಅಂಶಗಳು ಕೂಡ ಇವೆ. ಎಲ್ಲವನ್ನು ಅಧ್ಯಯನ ಮಾಡಿ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸುತ್ತೇನೆ.

ಬೇರೆ ಯೋಜನೆಗಳು ವಿಳಂಬವಾದರೂ ಚಿಂತೆಯಿಲ್ಲ, ಎತ್ತಿನಹೊಳೆ ಯೋಜನೆಯನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸುವಂತೆ ಸಿಎಂ ನನಗೆ ನಿರ್ದೇಶನ ನೀಡಿದ್ದಾರೆ ಎಂದು ಹೇಳಿದರು.



**2027ರ ಒಳಗಾಗಿ ಕೋಲಾರ ಭಾಗಕ್ಕೆ ಎತ್ತಿನ ಹೊಳೆ ನೀರನ್ನು ಹರಿಸಬೇಕು ಎಂಬುದು ನಮ್ಮ ಸರ್ಕಾರದ ಸಂಕಲ್ಪ. ಈ ಯೋಜನೆಗೆ ಅರಣ್ಯ ಇಲಾಖೆಗೆ ಸಂಬಂಧಿತ ಸಮಸ್ಯೆಗಳು, ಭೂ ಸ್ವಾಧೀನ ಪ್ರಕ್ರಿಯೆ, ಬೈರಗೊಂಡಲು, ಲಕ್ಕೇನಹಳ್ಳಿಯಲ್ಲಿ ಸಮತೋಲಿತ ಜಲಾಶಯ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಸ್ವಾಧೀನ ಹಾಗೂ ಆರ್ಥಿಕ ವಿಚಾರವಾಗಿ ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಹೀಗಾಗಿ ಈ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದೇವೆ ಎಂದು ತಿಳಿಸಿದರು.**

## ಅಕ್ರಮ ಗಣಿಗಾರಿಕೆ : ಸಿಎಂಗೆ ಸಚಿವ ಎಚ್.ಕೆ.ಪಾಟೀಲ್ ಪತ್ರ

• ಉದಯವಾಹಿನಿ, ಬೆಂಗಳೂರು

ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಹೈದ್ರಾಬಾದ್‌ನ ಸಿಬಿಐ ವಿಶೇಷ ನ್ಯಾಯಾಲಯ ಬಿಜೆಪಿ ಶಾಸಕ ಮಾಜಿ ಸಚಿವ ಗಾಲಿ ಜನಾರ್ದನರೆಡ್ಡಿ ಸೇರಿದಂತೆ ಇತರರನ್ನು ಘೋಷಿತ ಅಪರಾಧಿಗಳು ಎಂದು ಪ್ರಕಟಿಸಿ ಶಿಕ್ಷೆ ವಿಧಿಸಿದ ಬೆನ್ನಲ್ಲೇ ರಾಜ್ಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಗಂಭೀರತೆ ಹೆಚ್ಚಿದ್ದು, ಇದಕ್ಕೆ ಪೂರಕವಾಗಿ ಸಚಿವ ಎಚ್.ಕೆ.ಪಾಟೀಲ್‌ರವರು ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರ ಸಂಚಲನ ಸೃಷ್ಟಿಸಿದೆ. ಸುಮಾರು 7 ಪುಟಗಳ ಸುದೀರ್ಘ ಪತ್ರದಲ್ಲಿ ಅಂಕಿ ಅಂಶಗಳು, ಕಾನೂನಾತಕ ವಿಚಾರಗಳು, ಸಾಮಾಜಿಕ ಸ್ವಾಸ್ಥ್ಯ, ಕಾಳಜಿ, ರಾಜ್ಯಕ್ಕಾದ ನಷ್ಟ ಮತ್ತು ಅಪಕೀರ್ತಿ ಬಗ್ಗೆ ಎಚ್.ಕೆ.ಪಾಟೀಲ್ ಎಳೆಎಳೆಯಾಗಿ ವಿವರಿಸಿದ್ದಾರೆ.

ಈ ಮೂಲಕ ಅಕ್ರಮ ಗಣಿಗಾರಿಕೆ ಬಗ್ಗೆ ಮತ್ತೊಂದು ಸುತ್ತಿನ ಗಂಭೀರ ಚರ್ಚೆ ಆರಂಭವಾಗಿದ್ದು, ವಿಚಾರಣೆ ಹಾಗೂ ಕಾನೂನಾತಕ ಪ್ರಕ್ರಿಯೆಗಳು ಚುರುಕು ಪಡೆದುಕೊಂಡಿವೆ. 2007 ರಿಂದ 2011 ರವರೆಗೆ ರಾಜ್ಯವಿದ್ರೋಹದ ಅಕ್ರಮ ಗಣಿಗಾರಿಕೆ ನಡೆದಿದ್ದು, ಅಧಿಕಾರಸ್ಥ ರಾಜಕಾರಣಿಗಳು, ಅಧಿಕಾರ ಶಾಹಿಗಳು ಅಕ್ರಮ ಕೂಟ ರಚಿಸಿಕೊಂಡು ಸಂಘಟಿತ ಅಪರಾಧದ ಮೂಲಕ ರಾಜ್ಯದ ನೈಸರ್ಗಿಕ ಸಂಪತ್ತನ್ನು ಹಗಲು, ರಾತ್ರಿ ಲೂಟಿ ಹೊಡೆದಿದ್ದಾರೆ.



ಉದಯವಾಹಿನಿ ಚಿತ್ರ

**ಅಕ್ರಮ ಗಣಿಗಾರಿಕೆಯಿಂದ 1.50 ಲಕ್ಷ ಕೋಟಿ ರೂ. ನಷ್ಟ ಸಂಭವಿಸಿತ್ತು ಎಂದು ವಿವರಿಸಿದ್ದಾರೆ. 2013 ರಿಂದ 2018ರ ನಡುವೆ ತಮ್ಮ ಅಧ್ಯಕ್ಷತೆಯ ಸಚಿವ ಸಂಪುಟ ಉಪಸಮಿತಿ ಅಧ್ಯಯನ ನಡೆಸಿದಾಗ 2006 ರಿಂದ 2009ರ ಡಿಸೆಂಬರ್‌ವರೆಗೆ 12,891 ಪ್ರಕರಣಗಳು, 2010 ರಿಂದ 2011ರ ನಡುವೆ 6,476 ಅಕ್ರಮ ಗಣಿಗಾರಿಕೆ ಪ್ರಕರಣಗಳು ವರದಿಯಾಗಿದ್ದವು. ಕಬ್ಬಿಣದ ಅದಿರಿನ ಕುರಿತು ಸರಿಯಾದ ಲೆಕ್ಕ ನಿರ್ವಹಿಸಿಲ್ಲ. ಇಂತಹ ವಿದ್ರೋಹಿ ಗುಂಪು ಸ್ವಾರ್ಥ ಸಾಧನೆಗೆ ಸಂಪತ್ತು ಲೂಟಿ ಮಾಡಿ ಅಟ್ಟಹಾಸದ ಕುಹಕ ನಗೆ ಬೀರುತ್ತಿದೆ ಎಂದು ಹೇಳಿದ್ದಾರೆ.**

## ಯಾರೇ ದ್ವೇಷ ಭಾಷಣ ಮಾಡಿದ್ರು, ಸರ್ಕಾರ ಸುಮ್ಮನೆ ಇರಲು ಸಾಧ್ಯವಿಲ್ಲ

• ಉದಯವಾಹಿನಿ, ಬೆಂಗಳೂರು

ದ್ವೇಷ ಭಾಷಣ ಯಾರೇ ಮಾಡಿದ್ರು, ಸರ್ಕಾರ ಸುಮ್ಮನೆ ಇರೋದಕ್ಕೆ ಆಗುವುದಿಲ್ಲ ಎಂದು ಚಿಂತಕ ಚಕ್ರವರ್ತಿ ಸೂಲಿಬೆಲೆ ಭಾಷಣಕ್ಕೆ ಸರ್ಕಾರ ನೊಟೀಸ್ ನೀಡಿದ ಕ್ರಮವನ್ನು ಸಚಿವ ದಿನೇಶ್ ಗುಂಡೂರಾವ್ ಸಮರ್ಥನೆ ಮಾಡಿಕೊಂಡಿದ್ದಾರೆ.

ವಿಧಾನಸೌಧದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಈ ವೇಳೆ, ಚಕ್ರವರ್ತಿ ಸೂಲಿಬೆಲೆ ಭಾಷಣಕ್ಕೆ ಸರ್ಕಾರದಿಂದ ತಡೆ ವಿಚಾರಕ್ಕೆ ಪ್ರತಿಕ್ರಿಯಿಸಿದರು. ದ್ವೇಷ ಭಾಷಣ ಮಾಡಿದ್ರೆ ಸುಮ್ಮನೆ ಇರೋಕೆ ಆಗುತ್ತಾ? ಯಾರೇ ದ್ವೇಷ ಭಾಷಣ ಮಾಡಿದ್ರು, ನೊಟೀಸ್ ಜಾರಿ ಆಗುತ್ತದೆ. ನಾನೇ ದ್ವೇಷ ಭಾಷಣ ಮಾಡಿದ್ರು, ನನಗೂ ನೋಟೀಸ್ ಜಾರಿ ಆಗುತ್ತದೆ ಎಂದಿದ್ದಾರೆ.

ಕಾನೂನು ಬಾಹಿರವಾಗಿ ಯಾರು ನಡೆದುಕೊಳ್ಳಬೇಕು. ಅವರ ಭಾಷಣ ಸರಿಯಿಲ್ಲ. ಅವರು ತಪ್ಪಾಗಿ ಭಾಷಣ ಮಾಡಿದ್ರೆ, ನಾವೇನು ಮಾಡೋಣ. ನೆಹರು, ಇಂದಿರಾಗಾಂಧಿಯನ್ನ ನಿತ್ಯವೂ ಸೂಲಿಬೆಲೆ ಟೀಕೆ ಮಾಡ್ತಾರೆ. ದ್ವೇಷ ಭಾಷಣದ ಹೇಳಿಕೆ ಕೊಟ್ಟಾಗ ಕ್ರಮ ತೆಗೆದುಕೊಳ್ತೇವೆ ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿಯವರು ಯಾವುದೇ ತಪ್ಪು ಮಾಡದೇ ಹೋದ್ರು, ಕೇಸ್ ಬುಕ್ ಮಾಡಿ ಅವರ ಎಂಪಿ ಸ್ಥಾನ ಕಿತ್ತುಕೊಂಡಿದ್ದರು. ರಾಹುಲ್ ಅವರೇನು ದ್ವೇಷ ಭಾಷಣ ಮಾಡಿದ್ರಾ? ಆದರೂ ಅವರ ಮೇಲೆ ಕ್ರಮ ಮಾಡಿದ್ರಿ. ಯಾರು ದ್ವೇಷ ಭಾಷಣ ಮಾಡಬಾರದು. ಸಾಮರಸ್ಯವಾಗಿ ಇರಬೇಕು ಎಂದು ತಿರುಗೇಟು ನೀಡಿದ್ದಾರೆ.



ಉದಯವಾಹಿನಿ ಚಿತ್ರ

# ಕಾಲ್ತುಳಿತ ಪ್ರಕರಣಕ್ಕೆ ಕಾರಣ ಏನು, ಭದ್ರತೆ ಬಗ್ಗೆ ತನಿಖೆ ಮುಂದುವರಿಕೆ

## ಅಮಾನತಾದ ಪೊಲೀಸ್ ಆಯುಕ್ತ ದಯಾನಂದ್ ಸೇರಿ 50 ಪೊಲೀಸರ ವಿಚಾರಣೆಗೆ ನೋಟಿಸ್

• ಉದಯವಾಹಿನಿ, ಬೆಂಗಳೂರು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ದುರಂತ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಮ್ಯಾಜಿಸ್ಟೀರಿಯಲ್ ತನಿಖೆ ನಡೆಸುತ್ತಿದ್ದಾರೆ.

ಈ ಸಂಬಂಧ ವಿಚಾರಣೆ ಹಾಜರಾಗಲು ಮಾಜಿ ಕಮಿಷನರ್ ದಯಾನಂದ್ ಮತ್ತು ಇಬ್ಬರು ಡಿಸಿಪಿಗಳು ಸೇರಿದಂತೆ ಆರು ಪೊಲೀಸ್ ಅಧಿಕಾರಿಗಳ ವಿಚಾರಣೆಗೆ ನೋಟಿಸ್ ನೀಡಲಾಗಿತ್ತು. ಆದರೆ, ಬಿ.ದಯಾನಂದ ಗೈರುಹಾಜರಾಗಿದ್ದಾರೆ. ಜೂ.4ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ಐಪಿಎಲ್ ಕಪ್ ಗೆದ್ದ ಹಿನ್ನೆಲೆ ವಿಜಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಾಜಿ ಕಮಿಷನರ್ ನೇತೃತ್ವದಲ್ಲಿ ಬಂದೋಬಸ್ತ್, ಭದ್ರತೆ ಕೈಗೊಂಡಿದ್ದರಿಂದ ಆ ಕುರಿತು, ಮಾಹಿತಿ ಪಡೆಯಲು ಮಾಜಿ ಕಮಿಷನರ್ ದಯಾನಂದ್ ಸೇರಿ 50 ಪೊಲೀಸರ ವಿಚಾರಣೆಗೆ ನೋಟಿಸ್ ನೀಡಲಾಗಿತ್ತು.

**ಮಾಜಿ ಕಮಿಷನರ್ ಗೈರು:** ಜೂ.20ರಂದು ಮ್ಯಾಜಿಸ್ಟ್ರೇಟ್ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಕೊಟ್ಟ ನೋಟಿಸ್‌ನಂತೆ ಇಬ್ಬರು ಡಿಸಿಪಿ ಸೇರಿದಂತೆ 40ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ವಿಚಾರಣೆಗೆ ಹಾಜರಾದರು. ಇದುವರೆಗೆ 40ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿಯ ವಿಚಾರಣೆ ನಡೆಸಿ, ಘಟನೆ ಬಗ್ಗೆ ಅವರ ಹೇಳಿಕೆಯನ್ನು ವೀಡಿಯೋ ರೆಕಾರ್ಡಿಂಗ್ ಮೂಲಕ ಹೇಳಿಕೆಗಳ ದಾಖಲಿಸಲಾಗಿದೆ. ಆದರೆ, ಶುಕ್ರವಾರ ನಡೆದ ವಿಚಾರಣೆಗೆ ಮಾಜಿ ಕಮಿಷನರ್ ದಯಾನಂದ್ ಅವರು ಗೈರಾಗಿದ್ದರು.



ಉದಯವಾಹಿನಿ ಚಿತ್ರ

**ಕಪ್ ಗೆದ್ದ ಹಿನ್ನೆಲೆ ವಿಜಯೋತ್ಸವ**

**ಸಂಜೆ 5ರವರೆಗೂ ವಿಚಾರಣೆ:** ಮಧ್ಯಾಹ್ನ ಮೂರು ಗಂಟೆಗೆ ಉತ್ತರ ವಿಭಾಗದ ಡಿಸಿಪಿ ಸೈದುಲ್ಲಾ ಅಡಾವತ್, ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಭರಮಸಾಗರ್ ಸೇರಿದಂತೆ ಇಬ್ಬರು ಇನ್ಸ್‌ಪೆಕ್ಟರ್‌ಗಳು ಮತ್ತು ಇಬ್ಬರು ಎಸಿಪಿಗಳು ವಿಚಾರಣೆಗೆ ಹಾಜರಾದರು. ಶುಕ್ರವಾರ ಸಂಜೆ 5 ಗಂಟೆಯವರೆಗೆ ಪ್ರತ್ಯೇಕವಾಗಿ ವಿಚಾರಣೆ ಮಾಡಲಾಯಿತು ಎಂದು ತಿಳಿದುಬಂದಿದೆ.

**ವಿಚಾರಣೆಯಲ್ಲಿ ಕೇಳಿದ ಪ್ರಶ್ನೆಗಳೇನು:** ನೂರಾರು ಪೊಲೀಸರನ್ನು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಭದ್ರತೆಗೆ ನಿಯೋಜಿಸಿದ್ದರೂ ಕಾಲ್ತುಳಿತ ದುರಂತ ಸಂಭವಿಸಿದ್ದು ಏಕೆ, ಕ್ರೀಡಾಂಗಣದ ಯಾವ ಗೇಟ್ ಬಳಿ ಎಷ್ಟು ಪೊಲೀಸ್ ಸಿಬ್ಬಂದಿ ನಿಯೋಜನೆ ಗೊಂಡಿದ್ದರು. ಲಕ್ಷಕ್ಕೂ ಹೆಚ್ಚು ಮಂದಿ ಗ್ರೌಂಡ್‌ಗೆ ನುಗ್ಗಲು ಕಾರಣ ಏನು? ವಿಜಯೋತ್ಸವದ ಸಂದರ್ಭದಲ್ಲಿ ಎಷ್ಟು ಭದ್ರತೆ ಇರಬೇಕು ಎಂಬುದನ್ನು ಮೊದಲೇ ತೀರ್ಮಾನಿಸಲಾಗಿತ್ತಾ? ಈ ಬಗ್ಗೆ ಸಭೆ ನಡೆಸಿದ್ದರಾ, ಭದ್ರತಾಲೋಪವಾಗಿದ್ದು ಹೇಗೆ? ಎಂಬ ಸಾಕಷ್ಟು ಪ್ರಶ್ನೆಗಳನ್ನು ಪೊಲೀಸರಿಗೆ ಕೇಳಲಾಯಿತು

**ನಿರೀಕ್ಷೆಗೂ ಮೀರಿದ ಜನ ಸೇರಿದ್ದರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಾಮರ್ಥ್ಯ ಇರುವುದು 35,000 ಜನರಿಗೆ ಮಾತ್ರ. ಆದರೆ, ಕ್ರೀಡಾಂಗಣದಲ್ಲಿ ಸೇರಿದ್ದು 2.5 ಲಕ್ಷಕ್ಕೂ ಹೆಚ್ಚು ಜನ. ಜನರನ್ನು ನಿಯಂತ್ರಿಸಲು ನಾವು ಸಾಕಷ್ಟು ಪ್ರಯತ್ನಿಸಿದ್ದೇವೆ. ಗುಂಪು ಚದುರಿಸಲು ಲಾಠಿ ಪ್ರಹಾರ ಮಾಡಿದ್ದೇವೆ. ಆರ್‌ಸಿಬಿ ಆಟಗಾರರು ಕ್ರೀಡಾಂಗಣಕ್ಕೆ ಬರಲಿದ್ದಾರೆ ಎಂದು ಉಚಿತ ಟಿಕೆಟ್ ಬಗ್ಗೆ ಮಾಹಿತಿ ಹಂಚಿಕೊಂಡ ಹಿನ್ನೆಲೆ ಗದ್ದಲ ಶುರುವಾಯಿತು ಎಂದು ಪೊಲೀಸರು ವಿಚಾರಣೆಯಲ್ಲಿ ತಿಳಿಸಿದ್ದಾರೆ.

### 150 ಮಂದಿಗೆ ನೋಟಿಸ್

**45 ಮಂದಿ ಪೊಲೀಸ್ ಅಧಿಕಾರಿಗಳು ಸೇರಿ 150ಕ್ಕೂ ಹೆಚ್ಚು ಮಂದಿಗೆ ನೋಟಿಸ್ ನೀಡಿದ್ದಾರೆ. ದಯಾನಂದ್ ಸೇರಿ 50 ಪೊಲೀಸರ ವಿಚಾರಣೆಗೆ ನೋಟಿಸ್ ನೀಡಿದ್ದಾರೆ. ಜೊತೆಗೆ ಕಾಲ್ತುಳಿತದಲ್ಲಿ ಗಾಯಗೊಂಡ ಗಾಯಾಳುಗಳು, ಮೃತರ ಪೋಷಕರು, ಕೆಎಸ್‌ಸಿಎ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿತ್ತು. ವಿಚಾರಣೆ ನಡೆಸುತ್ತಿದ್ದಾರೆ. ಸದ್ಯ ವಿಕಾಸ್ ಕುಮಾರ್ ಮತ್ತು ಮಾಜಿ ಕಮಿಷನರ್ ದಯಾನಂದ್ ವಿಚಾರಣೆ ಗೈರಾಗಿದ್ದಾರೆ.**

## ಸದ್ಯಕ್ಕೆ ನಾನು ಬಿಜೆಪಿಗೆ ಮರಳುವುದಿಲ್ಲ: ಈಶ್ವರಪ್ಪ

• ಉದಯವಾಹಿನಿ, ಬೆಂಗಳೂರು

ನಾನು ಸದ್ಯಕ್ಕೆ ಬಿಜೆಪಿಗೆ ಮರಳುವುದಿಲ್ಲ, ಮೊದಲು ಬಿಜೆಪಿಯಲ್ಲಿನ ಪರಿಸ್ಥಿತಿ ಸರಿ ಹೋಗಬೇಕು ಎಂದು ಮಾಜಿ ಸಚಿವ ಕೆಎಸ್ ಈಶ್ವರಪ್ಪ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸದ್ಯಕ್ಕೆ ನಾನು ಬಿಜೆಪಿಗೆ ಮರಳುವ ಪರಿಸ್ಥಿತಿಯಲ್ಲಿಲ್ಲ. ಮೊದಲು ಬಿಜೆಪಿ ಪರಿಸ್ಥಿತಿ ಸರಿಯಾಗಬೇಕು. ವಿಜಯೇಂದ್ರ ಆಹ್ವಾನ ಕೊಟ್ಟಿರುವ ಬಗ್ಗೆ ಗೊತ್ತಿಲ್ಲ. ಅವರ ಹೇಳಿಕೆಗೆ ನಾನು ಪ್ರತಿಕ್ರಿಯೆ ಕೊಡಲ್ಲ ಎಂದರು. ಇನ್ನು, ನನ್ನ ಯಡಿಯೂರಪ್ಪ ಸ್ನೇಹ ಬಹಳ ಹಳೆಯದು, ಇವತ್ತಿನದಲ್ಲ.



ನಾವಿಬ್ಬರೂ ಪಾರ್ಟನರ್‌ಶಿಪ್‌ನಲ್ಲಿ ಹಿಂದೆ ಫ್ಯಾಕ್ಟರಿ ಮಾಡಿದ್ದೆವು. ನಮ್ಮಿಬ್ಬರ ಮಧ್ಯೆ ಸ್ನೇಹ ಮುಂದುವರೀತಿದೆ.

ರಾಜಕಾರಣಕ್ಕೂ ಸ್ನೇಹಕ್ಕೂ ಸಂಬಂಧ ಇಲ್ಲ. ನನ್ನ ಹುಟ್ಟುಹಬ್ಬಕ್ಕೆ ಪತ್ರಿಕೆಯಲ್ಲೂ ಅವರು ಶುಭಾಶಯ ಕೋರಿಕೆ ಹಾಕಿಸಿದ್ದರು. ನಮ್ಮ ಮನೆಯ ಕಾರ್ಯಕ್ರಮಗಳಿಗೆ ಅವರು ಬಂದಿದ್ದಾರೆ. ಅವರ ಮನೆ ಕಾರ್ಯಕ್ರಮಗಳಿಗೆ ನಾವು ಹೋಗಿದ್ದೇವೆ. ಸ್ನೇಹ ಬೇರೆ ರಾಜಕಾರಣ ಬೇರೆ ಎಂದು ತಿಳಿಸಿದರು.

## ಅಂತರಾಳದಿಂದ.. EDITORIAL

# ಏಕ ಪಕ್ಷೀಯ ಆಕ್ರಮಣಗಳಿಗೆ ಕೊನೆ ಎಂದು?

ಕಳೆದ ವಾರ ಜೂನ್ 13 ರಂದು ಇಸ್ರೇಲ್ ಸರಕಾರವು ಇರಾನ್ ವಿರುದ್ಧ ಯುದ್ಧ ಸಾರಿದೆ. ಕಳೆದೊಂದು ವಾರದಿಂದ ಅದು ಸತತವಾಗಿ ಇರಾನ್ ನಾಗರಿಕರ ಮೇಲೆ ಬಾಂಬುಗಳ ಮಳೆ ಸುರಿಸುತ್ತಲೇ ಇದೆ. ಈ ಕ್ರಮಕ್ಕೆ ಅದು ಮುಂದೊಡ್ಡುತ್ತಿರುವ ಸಬೂಬುಗಳು ಸ್ವಾರಸ್ಯಕರವಾಗಿವೆ. 1. ಇರಾನ್ ಅಣ್ವಸ್ತ್ರ ತಯಾರಿಸುವ ತನ್ನ ಗುರಿಗೆ ತುಂಬಾ ಹತ್ತಿರ ತಲುಪಿಬಿಟ್ಟಿದೆ. ಒಂದುವೇಳೆ ಅದನ್ನು ಈಗಲೇ ತಡೆಯದಿದ್ದರೆ ಇಸ್ರೇಲ್‌ನ ಭದ್ರತೆಗೆ ಮಾತ್ರವಲ್ಲ ಸಂಪೂರ್ಣ ಕೊಲ್ಲಿ ಪ್ರದೇಶದ ಭದ್ರತೆಗೆ ಅಪಾಯವಿದೆ ಎಂಬುದು ಅದರ ಪ್ರಮುಖ ಸಬೂಬು, 2. ಇರಾನ್ ವಿವಿಧ ಭಯೋತ್ಪಾದಕ ಸಂಘಟನೆಗಳನ್ನು ಪೋಷಿಸುತ್ತಿದೆ. 3. ಇಂದಿನ ಇರಾನ್ ಸರಕಾರವು ಇರಾನ್ ಜನತೆಯ ನಡುವೆ ಜನಪ್ರಿಯವಾಗಿಲ್ಲ. ಅಲ್ಲಿ ಪ್ರಚಲಿತ ಸರಕಾರವನ್ನು ಕಿತ್ತೊಗೆದು ಬೇರೆಯೇ ಸರಕಾರವೊಂದನ್ನು ಸ್ಥಾಪಿಸುವ ಅಗತ್ಯವಿದೆ – ಇವು ಇಸ್ರೇಲ್ ಮುಂದಿಡುತ್ತಿರುವ ಇತರ ಸಬೂಬುಗಳು.

**ಉತ್ತರ ಕೊರಿಯಾ, ಭಾರತ ಅಥವಾ ಪಾಕಿಸ್ತಾನಗಳು ಅಣ್ವಸ್ತ್ರ ಸಾಮರ್ಥ್ಯ ಬೆಳೆಸಿಕೊಳ್ಳುವುದಕ್ಕಿಂತ ಬಹಳ ವರ್ಷಗಳ ಮುನ್ನವೇ, ಅಂದರೆ 1967ಕ್ಕೆ ಮೊದಲೇ ಇಸ್ರೇಲ್ ಅಣ್ವಸ್ತ್ರಗಳನ್ನು ಬೆಳೆಸಿಕೊಂಡಿತ್ತೆಂಬ ಬಗ್ಗೆ ಯಾರಿಗೂ ಸಂದೇಹವಿಲ್ಲ. 'ಇರಾನ್, ಅಣ್ವಸ್ತ್ರ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಹಂತಕ್ಕೆ ತುಂಬಾ ಹತ್ತಿರವಾಗಿಬಿಟ್ಟಿದೆ' ಎಂಬ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿಕೆ ಹೊಸದೇನೂ ಅಲ್ಲ. ಅವರು ಈ ಕರ್ಕಶ ರಾಗ ಆಲಾಪಿಸಲಾರಂಭಿಸಿ ಮೂರು ದಶಕಗಳಿಗಿಂತ ಹೆಚ್ಚಿನ ಅವಧಿ ಕಳೆದಿದೆ. 1992 ರಲ್ಲೇ ಅವರು, ಇನ್ನೇನು ಮೂರ್ನಾಲ್ಕು ವರ್ಷಗಳೊಳಗೆ ಇರಾನ್ ಪೂರ್ಣಪ್ರಮಾಣದ ಅಣ್ವಸ್ತ್ರಸಜ್ಜಿತ ದೇಶವಾಗಿ ಬೆಳೆಯಲಿದೆ ಎಂದು ಕೂಗು ಹಾಕಿದ್ದರು. 1995 ರಲ್ಲಿ ಭಯೋತ್ಪಾದನೆಯ ಕುರಿತು ತಾನು ಬರೆದ ಒಂದು ಪುಸ್ತಕದಲ್ಲೂ ಅವರು ಇದೇ ಮಾತನ್ನು ಒತ್ತಿ ಹೇಳಿದ್ದರು.**

ಇಲ್ಲಿರುವ ವಿರೋಧಾಭಾಸಗಳ ಕಂತೆ, ದಿಗಿಲುಗೊಳಿಸುವಷ್ಟು ಬೃಹತ್ತಾಗಿದೆ. ಇರಾನ್ನ ಅಣ್ವಸ್ತ್ರ ಸಾಮರ್ಥ್ಯದ ಬಗ್ಗೆ ಕಳವಳ ಪ್ರಕಟಿಸುತ್ತಿರುವ ಇಸ್ರೇಲ್ ಸ್ವತಃ ತಾನೇ ಒಂದು ಅಣ್ವಸ್ತ್ರ ಸಜ್ಜಿತ ದೇಶವಾಗಿದೆ. ಇಸ್ರೇಲ್ ಸರಕಾರವು ಈ ವಿಷಯದಲ್ಲಿ ಉದ್ದೇಶಪೂರ್ವಕ ಅಸ್ಪಷ್ಟತೆಯ ನಿಲುವನ್ನು ಪಾಲಿಸುತ್ತಾ ಬಂದಿದ್ದು, ತನ್ನ ಬಳಿ ಅಣ್ವಸ್ತ್ರಗಳಿವೆ ಎಂಬುದನ್ನು ಅಧಿಕೃತವಾಗಿ ಒಪ್ಪಿಕೊಳ್ಳುತ್ತಿಲ್ಲ. ಆದರೆ ಅದರ ಬಳಿ ಸುಮಾರು 400 ರಷ್ಟು ಅಣ್ವಸ್ತ್ರಗಳಿವೆ ಎಂಬುದು ಜಗತ್ತಿಗೆಲ್ಲಾ ಗೊತ್ತಿದೆ. ಆ ಬಳಿಕ ಬೇರೆ ಬೇರೆ ಸನ್ನಿವೇಶಗಳಲ್ಲಿ ವಿವಿಧ ಅಂತರ್‌ರಾಷ್ಟ್ರೀಯ ವೇದಿಕೆಗಳಲ್ಲಿ ಅವರು ಈ ಸುಳ್ಳನ್ನು ಪುನರಾವರ್ತಿಸಿದ್ದರು. ವಿಶೇಷವಾಗಿ, 2002ರಲ್ಲಿ ಅಮೆರಿಕ ದುಷ್ಟಕೂಟವು ಇರಾಕ್ ಮೇಲೆ ಆಕ್ರಮಣಕ್ಕೆ ಸಜ್ಜಾಗುತ್ತಿದ್ದ ಸಂದರ್ಭದಲ್ಲಿ ನೆತನ್ಯಾಹು, ಇರಾನ್ ಅಣ್ವಸ್ತ್ರ ತಯಾರಿಸುವ ಹಂತದಲ್ಲಿರುವುದರಿಂದ, ಇರಾಕ್ ಜೊತೆ ಇರಾನ್ ಮೇಲೂ ದಾಳಿ ನಡೆಸಬೇಕು ಅಲ್ಲಿಯ ಸರಕಾರವನ್ನು ಬದಲಿಸಬೇಕೆಂದು ಅಮೆರಿಕದ ಸಂಸದ್ ಸದಸ್ಯರ ನಡುವೆ ತೀವ್ರ ಅಭಿಯಾನ ನಡೆಸಿದ್ದರು. ಆದರೆ ತಮ್ಮ ಆರೋಪದ ಪರವಾಗಿ ಯಾವುದೇ ಪುರಾವೆಯನ್ನು ಮುಂದಿಡಲು ಅವರಿಗೆ ಅಂದೂ ಸಾಧ್ಯವಾಗಿರಲಿಲ್ಲ. ಈತನಕವೂ ಸಾಧ್ಯವಾಗಿಲ್ಲ. ಮಾತ್ರವಲ್ಲ ಹಲವು ಜಾಗತಿಕ ಹಾಗೂ ಅಧಿಕೃತ ತನಿಖಾವರದಿಗಳು ಕೂಡ ಅವರ ಈ ಆರೋಪವನ್ನು ತಳ್ಳಿ ಹಾಕಿವೆ. ಮೂರುದಿನಗಳ ಹಿಂದೆ (ಜೂನ್ 18) ಅಂತರ್‌ರಾಷ್ಟ್ರೀಯ ಅಣುಶಕ್ತಿ ಸಂಸ್ಥೆ ಮುಖ್ಯಸ್ಥ ರಾಫೇಲ್ ಪ್ರೋಸ್ಸಿ ಅವರು, ಪ್ರಖ್ಯಾತ ವಾರ್ತಾ ಸಂಸ್ಥೆ ಸಿಎನ್ನೆನ್‌ನ ಕ್ರಿಸ್ಟಿನಾ ಅಮಾನ್ ಪೋರ್ ಅವರಿಗೆ ನೀಡಿದ ಸಂದರ್ಶನದಲ್ಲಿ ಇರಾನ್, ಅಣ್ವಸ್ತ್ರ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಶ್ರಮಿಸುತ್ತಿದೆ ಎಂಬುದಕ್ಕೆ ಯಾವುದೇ ಪುರಾವೆ ಈ ತನಕ ನಮ್ಮ ಸಂಸ್ಥೆಗೆ ಸಿಕ್ಕಿಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈ ಮೂಲಕ ನೆತನ್ಯಾಹು ಅವರ ವಿಕಲಾಂಗ ಸುಳ್ಳು ಬಟ್ಟಬಯಲಾಗಿದೆ. ಸಾಲದ್ದಕ್ಕೆ ಕಳೆದ ವಾರವಷ್ಟೇ ಸಾಕ್ಷಾತ್ ಅಮೆರಿಕ ಸರಕಾರವು ಇರಾನ್‌ನ ಅಣು ಕಾರ್ಯಕ್ರಮಗಳು ಯಾವ ಹಂತದಲ್ಲಿವೆ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಲು ನೇಮಿಸಿದ್ದ ಬೇಹುಗಾರಿಕಾ ಸಂಸ್ಥೆಗಳು ಕೂಡಾ ಇರಾನ್ ಅಣ್ವಸ್ತ್ರ ಸಜ್ಜಿತವಾಗಲು ಶ್ರಮಿಸುತ್ತಿದೆ ಎನ್ನುವುದಕ್ಕೆ ತಮಗೆ ಯಾವುದೇ ಪುರಾವೆ ದೊರಕಿಲ್ಲ ಎಂದು ಒಪ್ಪಿಕೊಂಡಿವೆ. ಅಮೆರಿಕದ ರಾಷ್ಟ್ರೀಯ ಯ ಬೇಹುಗಾರಿಕಾ ಸಂಸ್ಥೆ ನಿರ್ದೇಶಕಿ ಟುಲ್ಸಿ ಗಬ್ಬಾರ್ಡ್ ಈವರ್ಷ ಮಾರ್ಚ್ ನಲ್ಲಿತ ತಮ್ಮ ಬೇಹುಗಾರಿಕಾ ಮೂಲಗಳಿಂದ ಬಂದಿರುವ ವರದಿಗಳನ್ನು ಆಧರಿಸಿ ಅಮೆರಿಕದ ಸಂಸತ್ತಿನಲ್ಲಿ ಒಂದು ಸಾಕ್ಷಿ ಹೇಳಿಕೆಯನ್ನು ನೀಡಿದ್ದರು. ಅದರಲ್ಲಿ ಅವರು, ಇರಾನ್ ಯಾವುದೇ ತರದ ಅಣ್ವಸ್ತ್ರ ನಿರ್ಮಾಣದ ಚಟುವಟಿಕೆಯಲ್ಲಿ ತೊಡಗಿಲ್ಲ. 2003 ರಲ್ಲೇ ಇರಾನ್ ನ ಪರಮೋಚ್ಚ ನಾಯಕ ಅಲಿ ಖಾಮಿನ್ಯೆ ಅವರು ಅಣ್ವಸ್ತ್ರ ಬೆಳವಣಿಗೆಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗೆ ಅನುಮತಿ ನಿರಾಕರಿಸಿದ್ದಾರೆ ಎಂದು ತಿಳಿಸಿದ್ದರು. ಮೊನ್ನೆ ತಾನೇ ಅಮೆರಿಕ ಅಧ್ಯಕ್ಷ ಟ್ರಂಪ್, ಜಿ – 7 ಸಮ್ಮೇಳನವನ್ನು ಅರ್ಧದಲ್ಲೇ ಬಿಟ್ಟು ಶ್ವೇತ ಭವನಕ್ಕೆ ಮರಳಿದ ಬಳಿಕ ಅಲ್ಲಿ ತನ್ನ ದೇಶದ ಭದ್ರತಾ ಅಧಿಕಾರಿಗಳ ಜೊತೆ ಒಂದು ಸಮಾಲೋಚನಾ ಸಭೆ ನಡೆಸಿದರು. ಟುಲ್ಸಿ ಗಬ್ಬಾರ್ಡ್ ಆ ಸಭೆಯಲ್ಲಿ ಉಪಸ್ಥಿತರಿದ್ದರು. ಅಲ್ಲೂ ಇರಾನ್ ಬಳಿ ಯಾವುದೇ ಅಣ್ವಸ್ತ್ರ ಇಲ್ಲ ಎಂಬ ಅಭಿಪ್ರಾಯ ಪ್ರಕಟವಾಗಿತ್ತು.

ಇಷ್ಟಾದ ಬಳಿಕವೂ ಚಂಚಲ ಟ್ರಂಪ್ ಇರಾನ್‌ಗೆ ಬುದ್ದಿಕಲಿಸುವ ಮಾತುಗಳನ್ನೇ ಆಡುತ್ತಲಿದ್ದಾರಾದರೂ ಅಮೆರಿಕದ ಜನಾಭಿಪ್ರಾಯವು ಟ್ರಂಪ್‌ರ ಪರವಾಗಿರಲಿಲ್ಲ. ಜಗತ್ತಿನ ಮುಂದೆ ಇರಾನ್ ಶಸ್ತ್ರಾಸ್ತ್ರಗಳ ಬಗ್ಗೆ ಚಿಂತೆ ಪ್ರಕಟಿಸುತ್ತಿರುವ ಇಸ್ರೇಲ್ ಸ್ವತಃ ಎಷ್ಟೊಂದು ಸಭ್ಯ ರಾಷ್ಟ್ರವೆಂದರೆ, ಅದು ಕಳೆದ ಸುಮಾರು 20 ತಿಂಗಳಿಂದ ಹಗಲಿರುಳೂ ಫೆಲೆಸ್ತೀನ್ ನಾಗರಿಕರ ಸಾಮೂಹಿಕ ಹತ್ಯಾಕಾಂಡದಲ್ಲಿ ನಿರತವಾಗಿದೆ. ಅದು ಮಾನವ ಹಕ್ಕುಗಳ ಸತತ ಉಲ್ಲಂಘನೆ ನಡೆಸಿದ್ದು ಎಡೆಬಿಡದೆ ಬೃಹತ್ ಯುದ್ಧಾಪರಾಧಗಳನ್ನು ಮಾಡುತ್ತಾ ಬಂದಿದೆ. ಫೆಲೆಸ್ತೀನ್‌ನಲ್ಲಿ ಕಳೆದ 20 ತಿಂಗಳಲ್ಲಿ ಇಸ್ರೇಲ್, ಸಾವಿರಾರು ಎಳೆಯ ಮಕ್ಕಳು, ಪರಿಹಾರ ಕಾರ್ಯಕರ್ತರು ಮತ್ತು ಅಂತರ್‌ರಾಷ್ಟ್ರೀಯ ಸಹಾಯಕ ಸಂಸ್ಥೆಗಳಿಗೆ ಸೇರಿದ ವೈದ್ಯರು, ನರ್ಸ್ ಗಳ ಸಹಿತ 55 ಸಾವಿರಕ್ಕೂ ಹೆಚ್ಚು ಅಮಾಯಕ ನಾಗರಿಕರನ್ನು ಕೊಂದು ಹಾಕಿದೆ. ನೂರಾರು ವಸತಿ ಕೇಂದ್ರಗಳನ್ನು ಶಾಲೆಗಳನ್ನು ಮತ್ತು ಆಸ್ಪತ್ರೆಗಳನ್ನು ಧ್ವಂಸಗೊಳಿಸಿದೆ. ಹಸಿವು ಮತ್ತು ವ್ಯಾಧಿಗಳಿಂದ ನರಳುತ್ತಿರುವ ಯುದ್ಧಗ್ರಸ್ತ ನಿರಾಶ್ರಿತ ನಾಗರಿಕರಿಗೆ ಅನ್ನ ನೀರು, ಔಷಧಿ ತಲುಪದಂತೆ ಅಮಾನುಷ ನಿರ್ಬಂಧಗಳನ್ನು ಹೇರಿದೆ. ಈ ಮೂಲಕ ಅದು ಯಾವುದೇ ಭಯೋತ್ಪಾದಕ ಸಂಘಟನೆಯು ಮಾಡಿಲ್ಲದ ಅಪರಾಧವನ್ನು ಮಾಡಿದ್ದು, ಭಯೋತ್ಪಾದನೆಯ ವಿರುದ್ಧ ಮಾತನಾಡುವ ತನ್ನ ಹಕ್ಕನ್ನು ಕಳೆದುಕೊಂಡಿದೆ.

---

# ರಾಮಾಯಣ



## ಗಂಗಾತೀರಕ್ಕೆ ಭರತನ ಆಗಮನ

• ಹಿಂದಿನ ಸಂಚಿಕೆಯಿಂದ

### 78ನೆಯ ಅಧ್ಯಾಯ

ಆಮೇಲೆ ಭರತನು ಪ್ರಾತಃಕಾಲದಲ್ಲಿದ್ದು ಉತ್ತಮವಾದ ರಥವನ್ನೇರಿಕೊಂಡು ತೆರಳಲು ಆತನ ಮುಂದುಗಡೆಯಲ್ಲಿ ಮಂತ್ರಿಗಳೂ ಪುರೋಹಿತರೂ ಉತ್ತಮಾಶ್ವಗಳಿಂದ ಯುಕ್ತವಾದ ರಥಗಳನ್ನೇರಿಕೊಂಡು ತೆರಳಿದರು. ಭರತನ ಸಂಗಡ ಒಂಬತ್ತು ಸಾವಿರ ಮದ್ದಾನೆಗಳೂ ಅರುವತ್ತು ಸಾವಿರ ರಥಗಳೂ ಒಂದುಲಕ್ಷ ಉತ್ತಮಾಶ್ವಗಳೂ ಹೊರಟವು. ಕೌಸಲ್ಯಾದೇವಿ ಸುಮಿತ್ರಾದೇವಿ ಕೈಕೇಯ ದೇವಿ ಮೊದಲಾದ ದಶರಥರಾಯನ ಸ್ತ್ರೀಯರು ಶ್ರೀರಾಮನನ್ನು ನೋಡಬೇಕೆಂಬ ಇಚ್ಛೆಯಿಂದ ಪಲ್ಲಕ್ಕಿಗಳನ್ನೇರಿಕೊಂಡು ಹೊರಟರು. ಆ ಸಮಯದಲ್ಲಿ ಸ್ತ್ರೀಪುರುಷರೆಲ್ಲರೂ ಶ್ರೀರಾಮನ ಗುಣಗಳನ್ನು ವರ್ಣಿಸುತ್ತ ಅತ್ಯಂತ ಸಂತುಷ್ಟಚಿತ್ತರಾಗಿದ್ದರು. ನೀಲಮೇಘಶ್ಯಾಮನೂ ನಿಡಿದಾದ ತೋಳುಗಳುಳ್ಳವನೂ ಸ್ಥಿರವಾದ ಸತ್ತ್ವ ಗುಣವುಳ್ಳವನೂ ದೃಢವ್ರತನೂ ಆದ ಆ ರಾಮಚಂದ್ರನು, ಸೂರ್ಯನು ಸಮಸ್ತ ಪ್ರಾಣಿಗಳಿಗೂ ಅಂಧಕಾರವನ್ನು ತೊಲಗಿಸುವಂತೆ ದರ್ಶನಮಾತ್ರದಿಂದಲೇ ತಮ್ಮ ಶೋಕವನ್ನು ತೊಲಗಿಸುವನೆಂದು ಆತನನ್ನು ಹೊಗಳುತ್ತ ಸ್ನೇಹಾತಿಶಯದಿಂದ ಅನ್ಯೋನ್ಯವಾಗಿ ತಬ್ಬಿಸಿ ಕೊಂಡು ನಡೆಯುತ್ತಿದ್ದರು. ಕುಂಬಾರರು. ಸೂತ್ರಗಾರರು, ಆಯುಧಗಳ ಬೇಹಾರಿಗಳು, ನವಿಲುಗರಿ ಮೊದಲಾದ್ದರಿಂದ ಸತ್ತಿಗೆಗಳನ್ನು ಕಟ್ಟುವವರು, ಸಾಣೆಗಾರರು, ಮಣಿಗಳ ವೆಜ್ಜೆಗಳನ್ನು ತೆಗೆಯುವವರು. ಗಂಧದ ಬತ್ತಿ ಮಾಡುವವರು, ಗಾರೆಯವರು. ಗಂಧದ ಕೊರಡುಗಳನ್ನು ಮಾರುವ ಬೇಹಾರಿಗಳು, ಅಕ್ಕಸಾಲಿಗರು, ರತ್ನ ಕಂಬಳಿ ಮಾಡುವವರು, ನೀರುಕಾಸಿ ಅಭ್ಯಂಜನ ಮಾಡಿಸುವವರು, ಒರೆಗಾರರು, ವೈದ್ಯರು, ದೃಷ್ಟಿ ಧೂಪ ಹಾಕುವವರು.

ಸುರೆಯನ್ನು ಮಾರುವವರು, ರಜಕರು, ಚಿಪ್ಪಿಗರು, ಗೊಲ್ಲರಹಳ್ಳಿಗಳ ಮುಖ್ಯಸ್ಥರು, ಊಳಿಗಮಾಡುವವರು, ನಟುವರು ಮೊದಲಾದ ಪ್ರಜೆಗಳೂ ವೇದವೇದಾಂಗಪಾರಂಗತರಾದ ಬ್ರಾಹ್ಮಣರೂ ನಾನಾ ಬಗೆಯವಾದನ ಗಳನ್ನೇರಿ ಭರತನ ಹಿಂದೆ ತೆರಳಿದರು. ಹೀಗೆ ಭರತನು ಶತ್ರುಘ್ನ ಸಮೇತನಾಗಿ ಕೌಸಲ್ಯಾ, ಸುಮಿತ್ರಾ, ಕೈಕೇಯಾದೇವಿಯರ ಸಂಗಡ ತನ್ನ ಪ್ರಧಾನರೊಡನೆ ಗಂಗಾತೀರಕ್ಕೆ ಬಂದು ಸೇರಿದನು. ಅಲ್ಲಿ ಶ್ರೀರಾಮನ ಪ್ರಿಯಸಖನಾದ ಗುಹನಿರುವ ಶೃಂಗಿಬೇರಪುರದ ಸಮೀಪದಲ್ಲಿ ಹರಿಯುವ ಮನೋಹರವಾದ ಗಂಗೆಯನ್ನು ನೋಡಿ ಪ್ರಧಾನರನ್ನು ಕುರಿತು ಎಲೈ ಪ್ರಧಾನರುಗಳಿರಾ, ಇಲ್ಲಿ ಪಾಳಯವಿಳಿಯುವಹಾಗೆ ಕಟ್ಟು ಮಾಡಿ. ಎಲ್ಲರೂ ಬಳಲಿದ್ದಾರೆ. ಈ ಗಂಗಾತೀರದಲ್ಲಿದ್ದು ಬಳಲಿಕೆಯನ್ನು ತೀರಿಸಿಕೊಂಡು ಸ್ನಾನ ಜಪ ದೇವತಾರ್ಚನೆಗಳನ್ನು ಮಾಡಿ. ಸ್ವರ್ಗಸ್ಥನಾದ ನನ್ನ ತಂದೆಗೆ ತೀರ್ಥಶ್ರಾದ್ಧಗಳನ್ನು ಮಾಡಬೇಕು ಎಂದು ನುಡಿದನು. ವೃದ್ಧರಾದ ಬ್ರಾಹ್ಮಣರೂ ಪುರೋಹಿತರೂ ಪ್ರಧಾನಿಗಳೂ ಬಹಳ ಒಳ್ಳೆಯದಾಯಿತೆಂದು ಅವನ ಮಾತನ್ನು ಅಂಗೀಕರಿಸಿ ಆ ಗಂಗಾತೀರದಲ್ಲಿಳಿದುಕೊಂಡರು. ಶ್ರೀರಾಮನು ಸಂಚರಿಸಿದ ಸ್ಥಳವನ್ನೂ ಪಯಣ ನಿಂತ ಸ್ಥಳವನ್ನೂ ಸುಮಂತ್ರನು ತೋರಿಸಲು. ಭರತನು ಆ ಸ್ವಾಮಿಯನ್ನು ಧ್ಯಾನಮಾಡುತ್ತ ಗಂಗಾತೀರದಲ್ಲಿ ಪಾಳಯಬಿಟ್ಟನು.

ಮುಂದುವರಿಯುವುದು...

---

# ಸಕಲೇಶಪುರವು ಒಂದು ಊರಲ್ಲ; ಅದು ಒಂದು ಅನುಭವ


ವಿಶ್ವಾಸ್.ಡಿ.ಗೌಡ

• ಉದಯವಾಹಿನಿ, ವಿಶೇಷ



ಹಾಸನ ಜಿಲ್ಲೆಯ ಪಶ್ಚಿಮ ತುದಿಯಲ್ಲಿ ಪಶ್ಚಿಮ ಘಟ್ಟಗಳ ಮಡಿಲಲ್ಲಿ ನೆಲೆಗೊಂಡಿರುವ ಸಕಲೇಶಪುರ ತಾಲ್ಲೂಕು, ನಿಸರ್ಗಪ್ರಿಯರಿಗೆ ಮತ್ತು ಇತಿಹಾಸಾಸಕ್ತರಿಗೆ ಒಂದು ಅಪರೂಪದ ಅನುಭವವನ್ನು ನೀಡುವ ಭೂಭಾಗವಾಗಿದೆ. ಇದು ಕೇವಲ ಪ್ರವಾಸಿ ತಾಣವಲ್ಲ ಇದು ಹಸಿರು ಬೆಟ್ಟಗಳ ಹೃದಯ, ಇತಿಹಾಸದ ಹೆಜ್ಜೆಗಳ ನೆನೆಪು, ಹಾಗೂ ಕೃಷಿ ಜೀವನದ ನವಚೇತನ.

**ಇತಿಹಾಸದ ಕಣಜ:** ಸಕಲೇಶಪುರದ ಇತಿಹಾಸವು ಶತಮಾನಗಳ ಹಿಂದಿನ ಕಾಲಘಟ್ಟದಿಂದ ಆರಂಭವಾಗುತ್ತದೆ. ಈ ಪ್ರದೇಶವು ಹಲವಾರು ದ್ರಾವಿಡ ರಾಜವಂಶಗಳ ಆಡಳಿತದಲ್ಲಿತ್ತು. ಖಾಸಾಗಿವಾಗಿ, ಹೊಯ್ಸಳ ಸಾಮ್ರಾಜ್ಯ 10–14ನೇ ಶತಮಾನ ಕಾಲದಲ್ಲಿ ಈ ಪ್ರದೇಶವು ಪ್ರಮುಖ ತಾಣವಾಗಿತ್ತು. ಹೊಯ್ಸಳರ ಶಿಲ್ಪಕಲೆಯ ನೈಜ ಶಿಲ್ಪಸೌಂದರ್ಯವನ್ನು ಈ ಭಾಗದ ಸಣ್ಣ ದೇವಾಲಯಗಳಲ್ಲಿ ಕಾಣಬಹುದು. ಇಲ್ಲಿಯ ಮಂಜ್ರಾಬಾದ್ ಕೋಟೆ, ಟಿಪ್ಪು ಸುಲ್ತಾನ್ ನಿರ್ಮಿಸಿದ ಬಲಿಷ್ಠ ಕೋಟೆಯಾಗಿದೆ. 1792ರ ಕಾಲದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಸೈನಿಕ ಚಟುವಟಿಕೆಗಳಿಗೆ ಈ ಪ್ರದೇಶ ಪ್ರಾಮುಖ್ಯತೆಯೊಂದನ್ನು ಪಡೆದಿತ್ತು. ಈ ಕೋಟೆಯ ವಿನ್ಯಾಸವು ನಕ್ಷತ್ರಾಕಾರದ olup, ಇಲ್ಲಿ ನಿಂತು ನೋಡಿದರೆ ಸುತ್ತಲೂ ಹಬ್ಬಿರುವ ಕಾಡು, ಕಾಫಿ ತೋಟಗಳು ಮತ್ತು ಘಟ್ಟದ ರೇಖಾಚಿತ್ರ ಮನ ಮುಡಿಗೊಳಿಸುತ್ತದೆ.




**ಪ್ರಕೃತಿ ಸೌಂದರ್ಯ:** ಸಕಲೇಶಪುರವು ವರ್ಷವಿಡೀ ಮಳೆಯೊಯ್ದ ಹವಾಮಾನ ಹೊಂದಿದ್ದು, ಕಾಫಿ, ಎಲಕ್ಕಿ, ಮೆಣಸು ಮೊದಲಾದ ಬೆಳೆಗಳಿಗೆ ಸುಧಾರಿತ ಪರಿಸರ ಒದಗಿಸುತ್ತದೆ. ಇಲ್ಲಿ ಹರಡಿರುವ ಕಾಫಿ ತೋಟಗಳು, ಬಿಸ್ಲೆ ಕಣಿವೆ, ಮೆಟಿಕುಕಿ ವ್ಯಾಲಿ, ಮರೇಬೆಕಲು ಜಲಪಾತ, ಅಗ್ಗುಂಪೆ ಖಾತರಿಯಂತೆ ಪ್ರಕೃತಿಯ ನಿಶ್ಶಬ್ದ ಸಂಗೀತವನ್ನು ಕೇಳಿಸುತ್ತವೆ. ಬಿಸ್ಲೆ ಕಣಿವೆ ಬಹುಮಹತ್ವದ ಇಕೊ–ಹಾಟ್‌ಸ್ಪಾಟ್ ಆಗಿದ್ದು, ಪ್ರಾಣಿ , ಸಂಪತ್ತಿಯ ವೈವಿಧ್ಯದಿಂದ ಸಮೃದ್ಧವಾಗಿದೆ. ಇಲ್ಲಿನ ಕಾಡುಗಳಲ್ಲಿ ಹರಿಣ, ಕರಡಿ, ಗಿಡುಗ, ಹಾಗೂ ಅಪರೂಪದ ಪಕ್ಷಿಗಳ ಸಂಚಾರ ಸಾಮಾನ್ಯ.

**ಸಾಂಸ್ಕೃತಿಕ ಪರಿಚಯ:** ಇಲ್ಲಿ ಬೆಳೆದುಬಂದಿರುವ ಗ್ರಾಮೀಣ ಸಂಸ್ಕೃತಿ, ಕೃಷಿಯ ಆಧಾರದ ಮೇಲೆ ರೂಪುಗೊಂಡಿದ್ದರೂ ಸಹ ಪರಂಪರೆಗಳನ್ನು ಕಟ್ಟಿಕೊಂಡಿದೆ. ಜನಪದ ನೃತ್ಯಗಳು, ವಾದ್ಯಗಳ ಕೂಗು, ಕಾಫಿ ಹರವಿನ ಸಮಯದ ಹಬ್ಬಗಳು ಈ ಎಲ್ಲವೂ ಸಕಲೇಶಪುರದ ಜನಜೀವನದ ಭಾಗ. ಇಲ್ಲಿಯ ಜಾತ್ರೆಗಳು, ಉತ್ಸವಗಳಲ್ಲಿ ಸಹಜತೆಯೂ, ಉತ್ಸಾಹವೂ ಕಾಣಸಿಗುತ್ತದೆ.

**ಆಧುನಿಕ ಸಂಪರ್ಕ ಮತ್ತು ಪ್ರವಾಸೋದ್ಯಮ**

ಬೆಂಗಳೂರು ಮತ್ತು ಮಂಗಳೂರು ನಡುವೆ ಇರುವ ಪ್ರಮುಖ ರೈಲುಮಾರ್ಗ ಸಕಲೇಶಪುರದಿಂದ ಹಾದು ಹೋಗುತ್ತದೆ. ಗ್ರೀನ್ ರೈಲ್ವೆರುಟ್ ಎಂದು ಪ್ರಸಿದ್ಧವಾದ ಈ ಮಾರ್ಗವು ಸುರಂಗಗಳು, ಕಣಿವೆಗಳು, ಹಾಗೂ ಕಾಡುಗಳನ್ನು ದಾಟುವ ಅದ್ಭುತ ಪ್ರಯಾಣವನ್ನು ನೀಡುತ್ತದೆ. ಇದೀಗ ಇವು ಪ್ರವಾಸೋದ್ಯಮದ ಕಣ್ಣಿಗೆ ಬಿದ್ದಿರುವು, ಹಲವಾರು ಹೋಂಸ್ಟೇ ಹಾಗೂ ಕಾಫಿ ಎಸ್ಟೇಟ್‌ಗಳ ಪ್ರವಾಸಕೇಂದ್ರಗಳಾಗಿ ಮಾರ್ಪಟ್ಟಿವೆ.

**ಸಕಲೇಶಪುರವು ಒಂದು ಊರಲ್ಲ;** ಅದು ಒಂದು ಅನುಭವ. ಪ್ರಕೃತಿಯೊಡನೆ ಒಡನಾಟ, ಇತಿಹಾಸದ ಛಾಯೆ, ಕೃಷಿಯ ಸಂಕೇತ, ಸಾಂಸ್ಕೃತಿಕ ವೈವಿಧ್ಯದ ಸಂಕಲನ. ಬೆಟ್ಟದ ಹಾದಿ, ಪಕ್ಕದಿಂದ ಹರಿಯುವ ಜಲಪಾತ, ಕೋಡಿಯೊಳಗಿನ ಸುಗ್ಗಿ ಹಾಡು ಎಲ್ಲವೂ ಮನಸ್ಸನ್ನು ಶಾಂತಗೊಳಿಸುವ ಔಷಧಿಯಂತೆ. ಈ ನಾಡು ಕೇವಲ ತಂದುಕೊಳ್ಳುವ ನೆನಪಲ್ಲ, ಸದಾ ನೆನೆಸಿಕೊಳ್ಳುವ ಒಲವಿನ ನೆಲೆ

---

# ಮದ್ಯ ಮಾರಾಟದ ಲೈಸೆನ್ಸ್ ನವೀಕರಣ ಶುಲ್ಕ ಹೆಚ್ಚಳ ವಾಪಸ್ಸಿಗೆ ಆಗ್ರಹ



• ಉದಯವಾಹಿನಿ, ಬೆಂಗಳೂರು

ಲೈಸೆನ್ಸ್ ನವೀಕರಣ ಹಾಗೂ ಹೊಸ ಪರವಾನಗಿ ಶುಲ್ಕ ಕಡಿಮೆ ಮಾಡಬೇಕು ಇಲ್ಲದಿದ್ದರೆ ಹೋರಾಟ ಅನಿವಾರ್ಯವಾಗಲಿದೆ ಎಂದು ಮದ್ಯ ಮಾರಾಟಗಾರರ ಸಂಘ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ಶುಲ್ಕ ಹೆಚ್ಚಳದಿಂದ ಮದ್ಯ ಮಾರಾಟಕ್ಕೆ ತೀವ್ರ ತೊಂದರೆಯಾಗಿದೆ. ಹೀಗಾಗಿ ಶುಲ್ಕ ಹೆಚ್ಚಳ ಕೈ ಬಿಡಬೇಕು ಎಂದು ಸಂಘದ ಸದಸ್ಯರು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ನಗರದ ಫ್ರೀಡಂ ಪಾರ್ಕ್‌ನಲ್ಲಿ ಹಮಿಕೊಂಡಿರುವ ಮದ್ಯ ಮಾರಾಟಗಾರರ ಸಂಘದ ಸಮಾವೇಶದಲ್ಲಿ ಮುಖಂಡರುಗಳು ಈ ಎಚ್ಚರಿಕೆ ನೀಡಿದ್ದಾರೆ. ಮನಸ್ಸೋ ಇಚ್ಚೆ ಮದ್ಯದ ದರ ಹೆಚ್ಚಳ ಮಾಡುವುದು, ಲೈಸೆನ್ಸ್ ನವೀಕರಣ ಶುಲ್ಕ ಹೆಚ್ಚಳ ಮಾಡುವ ಮೂಲಕ ಸರ್ಕಾರ ನಮ್ಮ ಸಹನೆ ಕೆಣಕುವ ಕಾರ್ಯಕ್ಕೆ ಕೈ ಹಾಕಿದೆ. ಈ ಕೂಡಲೇ ತಮ್ಮ ನಿರ್ಧಾರದಿಂದ ಸರ್ಕಾರ ಹಿಂದೆ ಸರಿದು ಈ ಹಿಂದೆ ಇದ್ದ ಮಾದರಿಯನ್ನೇ ಮುಂದುವರೆಸಬೇಕು ಇಲ್ಲದಿದ್ದರೆ ರಾಜ್ಯದಲ್ಲಿ ಮದ್ಯ ಮಾರಾಟ ಸ್ಥಗಿತ ಗೊಳಿಸಿ ಹೋರಾಟ ನಡೆಸಬೇಕಾಗುತ್ತದೆ ಎಂದು ಅವರುಗಳು ಎಚ್ಚರಿಕೆ ನೀಡಿದ್ದಾರೆ.

---


# 2027ರ ವೇಳೆಗೆ ಎತ್ತಿನಹೊಳೆ ಯೋಜನೆ ಪೂರ್ಣಗೊಳಿಸುವುದು ಸರ್ಕಾರದ ಸಂಕಲ್ಪ

• ಉದಯವಾಹಿನಿ, ಬೆಂಗಳೂರು

ರಾಜ್ಯದ 7 ಜಿಲ್ಲೆಗಳಿಗೆ ಕುಡಿಯುವ ನೀರೊದಗಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಯೋಜನೆಯ ಮೊದಲ ಹಂತಕ್ಕೆ ಸಿದ್ದರಾಮಯ್ಯ ಅವರು ಕಳೆದ ವರ್ಷ ಸೆಪ್ಟೆಂಬರ್ 6ರಂದು ಚಾಲನೆ ನೀಡಿದ್ದರು. 2027ರ ವೇಳೆಗೆ ಕೋಲಾರಕ್ಕೆ ಎತ್ತಿನಹೊಳೆ ನೀರನ್ನು ತಲುಪಿಸಲು ನಮ್ಮ ಸರ್ಕಾರ ನಿರ್ಧರಿಸಿದೆ ಎಂದು ಡಿಕೆ ಶಿವಕುಮಾರ್ ಹೇಳಿದರು.

**ಎಂಟು ಬ್ಯಾರೇಜ್‌ಗಳಲ್ಲಿ ವಿಯಾರ್‌ಗಳು ಐದು ಪೂರ್ಣಗೊಂಡಿವೆ. ಪ್ರಾಯೋಗಿಕ ಕಾರ್ಯಾಚರಣೆಯಲ್ಲಿ ಸುಮಾರು 1,500 ಕ್ಯೂಸೆಕ್ ನೀರನ್ನು ಎತ್ತಲಾಗಿದೆ. ನೀರಿನ ಮಟ್ಟ ಇಳಿಯುವ ಮೊದಲು ಮುಖ್ಯಮಂತ್ರಿಗಳು ಇದನ್ನು ಉದ್ಘಾಟಿಸಲಿದ್ದಾರೆ. ಕಾಮಗಾರಿಗಳ ಪೂರ್ಣಗೊಳಿಸುವಿಕೆಯನ್ನು ಖುದ್ದಾಗಿ ನೋಡಲು ನಾನು ಬಂದಿದ್ದೇನೆ' ಎಂದು ಅವರು ಹೇಳಿದರು.**

ಈ ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಅರಣ್ಯ ಇಲಾಖೆ ಚರ್ಚಿಸಿದೆ ಎಂದು ಅವರು ಹೇಳಿದರು. ಸಭೆಯಲ್ಲಿ ಬೈರಗೊಂಡ ಮತ್ತು ಲಕ್ಕೇನಹಳ್ಳಿಯಲ್ಲಿ ಸಮತೋಲಿತ ಜಲಾಶಯ ನಿರ್ಮಾಣಕ್ಕೆ ಭೂಮಿ ಸ್ವಾಧೀನ ಮತ್ತು ಹಣಕಾಸಿನ ವಿಚಾರದ ಬಗ್ಗೆ ಚರ್ಚಿಸಲಾಗಿದೆ. 2027ರ ವೇಳೆಗೆ ಕೋಲಾರಕ್ಕೆ ಎತ್ತಿನಹೊಳೆ ನೀರನ್ನು ತಲುಪಿಸುವುದು ನಮ್ಮ ಸರ್ಕಾರದ ಸಂಕಲ್ಪ. ಈ ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳು, ಭೂಸ್ವಾಧೀನ ಪ್ರಕ್ರಿಯೆ, ಬೈರಗೊಂಡ, ಲಕ್ಕೇನಹಳ್ಳಿಯಲ್ಲಿ ಸಮತೋಲಿತ ಜಲಾಶಯ ನಿರ್ಮಾಣಕ್ಕೆ ಸಂಬಂಧಿಸಿದ ಹಣಕಾಸಿನ ಸಮಸ್ಯೆಗಳ ಕುರಿತು ನಾವು ಈಗಾಗಲೇ ಅರಣ್ಯ ಇಲಾಖೆಯೊಂದಿಗೆ ಚರ್ಚಿಸಿದ್ದೇವೆ. ಆದ್ದರಿಂದ, ನಾವು ಈ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇವೆ. ಸಚಿವರ ಸಲಹೆಗಳ ಆಧಾರದ ಮೇಲೆ ಈ ಯೋಜನೆಯಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ. ಇಲ್ಲಿ ಕೆಲವು ತಾಂತ್ರಿಕ ಅಂಶಗಳಿವೆ. ನಾನು ಎಲ್ಲವನ್ನೂ ಅಧ್ಯಯನ ಮಾಡಿ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತೇನೆ. ಇತರ ಯೋಜನೆಗಳು ವಿಳಂಬವಾದರೂ ನನಗೆ ಚಿಂತೆ ಇಲ್ಲ, ಎತ್ತಿನಹೊಳೆ ಯೋಜನೆಯನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲು ಸಿಎಂ ನನಗೆ ನಿರ್ದೇಶನ ನೀಡಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದರು. ರಾಜ್ಯದ 7 ಜಿಲ್ಲೆಗಳಿಗೆ ಕುಡಿಯುವ ನೀರೊದಗಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಯೋಜನೆಯ ಮೊದಲ ಹಂತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ ವರ್ಷ ಸೆಪ್ಟೆಂಬರ್ 6ರಂದು ಚಾಲನೆ ನೀಡಿದ್ದರು. ಎತ್ತಿನಹೊಳೆ ಒಂದು ಮಹತ್ವಾಕಾಂಕ್ಷೆಯ ಯೋಜನೆ.



ನಾನು ಪ್ರಾಯೋಗಿಕ ಕಾರ್ಯಾಚರಣೆಗೆ ಚಾಲನೆ ನೀಡಿದ್ದೇನೆ. ಕೆಲವು ತಿಂಗಳುಗಳ ವಿಳಂಬದೊಂದಿಗೆ ಕೆಲಸ ಈಗ ಪೂರ್ಣಗೊಂಡಿದೆ' ಎಂದು ಡಿಕೆ ಶಿವಕುಮಾರ್ ಹೇಳಿದ್ದರು. ಈ ಯೋಜನೆಯು 252.87 ಕಿ.ಮೀ ಉದ್ದವಿದ್ದು, ಅದರಲ್ಲಿ 164 ಕಿ.ಮೀ ಕೆಲಸ ಪೂರ್ಣಗೊಂಡಿದೆ. 25.87 ಕಿ.ಮೀ ಕಾಲುವೆಯ ಕೆಲಸಗಳು ಪ್ರಗತಿಯಲ್ಲಿವೆ. 42 ನೇ ಕಿ.ಮೀ ನಂತರದ ಕೆಲಸಗಳು ಅರಣ್ಯ ಭೂಸ್ವಾಧೀನ ಸಮಸ್ಯೆಯಿಂದಾಗಿ ಪರಿಣಾಮ ಬೀರಿವೆ. ಆದ್ದರಿಂದ ಎಸ್ಕೇಪ್ ಕಾಲುವೆಯ ಮೂಲಕ ವಾಣಿ ವಿಲಾಸ ಸಾಗರಕ್ಕೆ ನೀರು ಸರಬರಾಜು ಮಾಡಲು ಯೋಜಿಸಲಾಗಿದೆ' ಎಂದು ಅವರು ಹೇಳಿದರು.

---



# ಒಂದು ವಾರ ಸಕ್ಕರೆಯಿಂದ ದೂರ

ಆರೋಗ್ಯ ತಜ್ಞರು ಹೇಳುವ ಪ್ರಕಾರ ಸಕ್ಕರೆ ಯಾವತ್ತಿಗೂ ಕೂಡ ಆರೋಗ್ಯಕ್ಕೆ ಒಳ್ಳೆಯದಲ್ಲ. ಅದರಲ್ಲೂ ಅತಿಯಾದ ಸಕ್ಕರೆಯಾಂಶ ಇರುವ ಆಹಾರ ಸೇವನೆಯು ಪ್ರತಿದಿನ ಧೂಮಪಾನ ಮಾಡಿದಷ್ಟೇ ಅಪಾಯಕಾರಿಯಂತೆ ಬೆಳಗಿನ ಟೀ–ಕಾಫಿಗೆ ಹೆಚ್ಚು ಸಕ್ಕರೆ ಹಾಕಿ ಕುಡಿಯುವುದು, ಸಿಹಿಯಾಗಿರುವ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಸೇವನೆ ಮಾಡುವುದು, ಸಂಸ್ಕರಿಸಿದ ಬೇಕರಿ ತಿಂಡಿಗಳಾದ ಕೇಕ್, ಬಿಸ್ಕೆಟ್‌ಗಳು, ಐಸ್ ಕ್ರೀಮ್ ಮುಂತಾದ ಕೃತಕ ಸಕ್ಕರೆಯಾಂಶ ಇರುವ ಆಹಾರಪದಾರ್ಥಗಳನ್ನು ದಿನನಿತ್ಯ ಸೇವನೆ ಮಾಡುವುದು, ಅದರಲ್ಲೂ ಪ್ಯಾಕೆಟ್‌ನಲ್ಲಿ ಸಿಗುವ ಪಾನೀಯಗಳನ್ನು ಕುಡಿಯುವುದು ಅಥವಾ ಸಂಸ್ಕರಿಸಲ್ಪಟ್ಟ ಹಣ್ಣಿನ ಜ್ಯೂಸ್ ಕುಡಿಯುವುದು (ಇಂತಹ ಪಾನೀಯಗಳಲ್ಲಿ ಸಕ್ಕರೆಯಾಂಶ ಬಳಕೆ ಹೇರಳವಾಗಿ ಕಂಡು ಬರುತ್ತದೆ).

ಇವೆಲ್ಲಾ ಅಭ್ಯಾಸಗಳು ಯಾವುದೇ ಕಾರಣಕ್ಕೂ ಕೂಡ ಆರೋಗ್ಯಕ್ಕೆ ಒಳ್ಳೆಯದಲ್ಲ ಎನ್ನುತ್ತಾರೆ ಆರೋಗ್ಯ ತಜ್ಞರು! ದಿನನಿತ್ಯ ಸೇವಿಸುವ ಆಹಾರಪದಾರ್ಥಗಳಲ್ಲಿ ಅಧಿಕ ಪ್ರಮಾಣದಲ್ಲಿ ಸಕ್ಕರೆ ಬಳಸುವುದರಿಂದ ದೇಹದಲ್ಲಿ ಕೊಬ್ಬಿನಾಂಶ ಪ್ರಮಾಣ ಹೆಚ್ಚಾಗಿ, ತೂಕ ಹೆಚ್ಚಾಗುವುದರ ಜೊತೆಗೆ ಮಧುಮೇಹ, ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳು, ಲಿವರ್‌ನಲ್ಲಿ ಸಮಸ್ಯೆಗಳು, ಹೀಗೆ ಹಲವಾರು ರೀತಿಯಲ್ಲಿ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ



**ಕೇವಲ 7 ದಿನಗಳ ಸಕ್ಕರೆ ರಹಿತ ಆಹಾರ:** ಇಂದಿನ ಲೇಖನದಲ್ಲಿ ಕೇವಲ ಒಂದು ವಾರ ಸಕ್ಕರೆಯಿಂದ ದೂರವಿದ್ದರೆ, ದೇಹದಲ್ಲಿ ನಿಜವಾಗಿಯೂ ಏನಾದರೂ ವ್ಯತ್ಯಾಸ ಕಂಡುಬರುತ್ತದೆಯೇ ಕೇವಲ 7 ದಿನಗಳ ಸಕ್ಕರೆ ರಹಿತ ಆಹಾರದಿಂದ ಆರೋಗ್ಯದಲ್ಲಿ ಏನಾದರೂ ಬದಲಾವಣೆಗಳು ಕಂಡು ಬರಬಹುದೇ ಇಂದಿನ ಈ ಲೇಖನದಲ್ಲಿ, ಪೌಷ್ಟಿಕ ತಜ್ಞರಿಂದ ಈ ಪ್ರಶ್ನೆಗಳಿಗೆ ಉತ್ತರಗಳನ್ನು ನಾವು ತಿಳಿದುಕೊಳ್ಳುತ್ತೇವೆ. ಒಂದು ವಾರ ಸಕ್ಕರೆಯಾಂಶ ಇರುವ ಆಹಾರಗಳಿಂದ ದೂರವಿದ್ದರೆ ಆರೋಗ್ಯದಲ್ಲಿ ಏನೆಲ್ಲಾ ಪ್ರಯೋಜನಗಳನ್ನು ನಿರೀಕ್ಷೆ ಮಾಡಬಹುದು ಎನ್ನುವುದನ್ನು ನೋಡೋಣ ಬನ್ನಿ

**ಈ ಬಗ್ಗೆ ತಜ್ಞರು ಹೇಳುವ ಪ್ರಕಾರ :** ಶ್ರೀ ಬಾಲಾಜಿ ಆಕ್ಷನ್ ಮೆಡಿಕಲ್ ಇನ್‌ಸ್ಟಿಟ್ಯೂಟ್‌ನ ಹಿರಿಯ ಸಲಹೆಗಾರರಾದ ಡಾ. ಅರವಿಂದ್ ಅಗರ್ವಾಲ್ ಅವರು ಹೇಳುವ ಪ್ರಕಾರ, ಒಂದು ವಾರ ಸಂಸ್ಕರಿಸಿದ ಸಕ್ಕರೆಯನ್ನು ಸೇವಿಸುವುದನ್ನು ನಿಲ್ಲಿಸಿದರೆ, ದೇಹದಲ್ಲಿ ಅನೇಕ ಸಕಾರಾತ್ಮಕ ಬದಲಾವಣೆಗಳು ಕಂಡುಬರುತ್ತದೆಯಂತೆ. ಆರಂಭದಲ್ಲಿ ಆಗಾಗ ಆಯಾಸ, ಕಿರಿಕಿರಿ ಅಥವಾ ತಲೆನೋವಿಗೆ ಕಾರಣವಾಗಬಹುದು, ಏಕೆಂದರೆ ದೇಹವು ಸಕ್ಕರೆಗೆ ಒಗ್ಗಿಕೊಂಡಿರುತ್ತದೆ. ಆದರೆ ದೇಹವು ಅದನ್ನು ತೊಡೆದುಹಾಕಲು ಪ್ರಾರಂಭಿಸಿದಾಗ, ಶಕ್ತಿಯ ಮಟ್ಟವು ಸ್ಥಿರವಾಗುತ್ತದೆ, ರಕ್ತದಲ್ಲಿನ ಸಕ್ಕರೆ ಮಟ್ಟವು ನಿಯಂತ್ರಣಕ್ಕೆ ಬರುತ್ತದೆ ಮತ್ತು ಇನ್ಸುಲಿನ್ ಸಂವೇದನೆ ಸುಧಾರಿಸುತ್ತದೆ.

**ಒಂದು ವಾರ ಸಕ್ಕರೆ ಬಿಟ್ಟರೆ ಆರೋಗ್ಯಕ್ಕೆ ಸಿಗುವ ಪ್ರಯೋಜನಗಳು:** ಸಕ್ಕರೆ ರಹಿತ ಆಹಾರವನ್ನು ಸೇವಿಸುವುದರಿಂದ ಹೊಟ್ಟೆ ಉಬ್ಬರ, ಗ್ಯಾಸ್ಟ್ರಿಕ್ ಮತ್ತು ಆಮ್ಲೀಯತೆಯಂತಹ ಸಮಸ್ಯೆಗಳಿಂದ ಪರಿಹಾರ ಸಿಗುತ್ತದೆ ಎಂದು ಡಾ. ಅರವಿಂದ್ ಅಗರ್ವಾಲ್ ಎಂದು ಸಲಹೆ ನೀಡುತ್ತಾರೆ.

ದೇಹದಲ್ಲಿ ಒಳ್ಳೆಯ ಕೊಲೆಸ್ಟ್ರಾಲ್ ಅಂಶ ಹೆಚ್ಚಾಗಿ ಹೃದಯದ ಆರೋಗ್ಯವು ಚೆನ್ನಾಗಿರುತ್ತದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಏನೆಂದರೆ ಅತಿಯಾಗಿ ಸಕ್ಕರೆಯಾಂಶ ಇರುವ ಆಹಾರಗಳನ್ನು ಸೇವನೆ ಮಾಡುವುದರಿಂದ ಆರೋಗ್ಯಕರ ಕೊಲೆಸ್ಟ್ರಾಲ್ ಕಡಿಮೆಯಾಗುವುದರ ಜೊತೆಗೆ ಕೆಟ್ಟ ಕೊಲೆಸ್ಟ್ರಾಲ್ ಮಟ್ಟ ಹೆಚ್ಚಾಗಿ ಹೃದಯಕ್ಕೆ ಸಂಬಂಧ ಪಟ್ಟ ಆರೋಗ್ಯ ಸಮಸ್ಯೆಗಳು ಬಹಳ ಬೇಗನೇ ಕಾಣಿಸಿಕೊಳ್ಳಲು ಕಾರಣ ವಾಗುತ್ತದೆ. ಇನ್ನು ಒಂದು ವಾರದೊಳಗೆ, ನಿದ್ರೆಯ ಗುಣಮಟ್ಟ ಸುಧಾರಿಸಲು ಪ್ರಾರಂಭಿ ಸುತ್ತದೆ ಮತ್ತು ಮಾನಸಿಕ ಸ್ಪಷ್ಟತೆ ಅಂದರೆ ಗಮನ ಮತ್ತು ಮನಸ್ಥಿತಿ ಸುಧಾರಿಸುತ್ತದೆ. ದೇಹವು ಕೊಬ್ಬನ್ನು ಶಕ್ತಿಯಾಗಿ ಬಳಸಲು ಪ್ರಾರಂಭಿಸಿದಾಗ ತೂಕ ಇಳಿಸುವ ಪ್ರಕ್ರಿಯೆಯು ಕ್ರಮೇಣ ಪ್ರಾರಂಭವಾಗುತ್ತದೆ.

ಒಟ್ಟಾರೆಯಾಗಿ, ಒಂದು ವಾರ ಸಕ್ಕರೆ ತಿನ್ನದಿರುವುದು ದೇಹ ಮತ್ತು ಮನಸ್ಸು ಎರಡನ್ನೂ ನಿರ್ವಿಷಗೊಳಿಸಲು ಸಹಾಯ ಮಾಡುತ್ತದೆ ಮತ್ತು ದೀರ್ಘಾವಧಿಯಲ್ಲಿ ಈ ಅಭ್ಯಾಸವು ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ ಎಂದು ಸಾಬೀತುಪಡಿಸುತ್ತದೆ.

**ಸಂಶೋಧನೆ ಏನು ಹೇಳುತ್ತದೆ :** 2020 2025 ರ ಅಮೆರಿಕನ್ನರಿಗೆ ಆಹಾರ ಮಾರ್ಗಸೂಚಿಗಳ ಪ್ರಕಾರ, ದಿನದ ಒಟ್ಟು ಕ್ಯಾಲೊರಿಗಳಲ್ಲಿ 10% ಕ್ಕಿಂತ ಹೆಚ್ಚು ಸಕ್ಕರೆಯಿಂದ ಬರಬಾರದು. ಪುರುಷರು ದಿನಕ್ಕೆ 36 ಗ್ರಾಂ (ಸುಮಾರು 9 ಟೀ ಚಮಚಗಳು) ಮಹಿಳೆಯರು 25 ಗ್ರಾಂ (ಸುಮಾರು 6 ಟೀ ಚಮಚಗಳು) ಗಿಂತ ಹೆಚ್ಚು ಸಕ್ಕರೆಯನ್ನು ತೆಗೆದುಕೊಳ್ಳಬಾರದು ಎಂದು ಅಮೇರಿಕನ್ ಹಾರ್ಟ್ ಅಸೋಸಿಯೇಷನ್ ಸಲಹೆ ನೀಡುತ್ತದೆ.

ಅಂತಹ ಪರಿಸ್ಥಿತಿಯಲ್ಲಿ, ನೀವು 30 ದಿನಗಳ ಸಕ್ಕರೆ ರಹಿತ ಸವಾಲನ್ನು ತೆಗೆದುಕೊಳ್ಳುತ್ತಿದ್ದರೆ, ಯಾವ ವಿಷಯಗಳನ್ನು ತಪ್ಪಿಸಬೇಕು ಮತ್ತು ಯಾವ ವಿಷಯಗಳನ್ನು ಆಹಾರದಲ್ಲಿ ಸೇರಿಸಬೇಕು ಎಂಬುದನ್ನು ತಿಳಿದು ಕೊಳ್ಳುವುದು ನಿಮಗೆ ಮುಖ್ಯವಾಗಿದೆ.

**ಸಕ್ಕರೆಯಾಂಶ ಇರುವ ಪಾನೀಯಗಳು :** ಹೆಲ್ತ್‌ಲೈನ್ ಪ್ರಕಾರ, ಸೇರಿಸಿದ ಸಕ್ಕರೆಯನ್ನು, ಅಂದರೆ ಆಹಾರ ಅಥವಾ ಪಾನೀಯಗಳಿಗೆ ಪ್ರತ್ಯೇಕವಾಗಿ ಸೇರಿಸಲಾದ ಸಕ್ಕರೆಯನ್ನು ಸಂಪೂರ್ಣವಾಗಿ ತಪ್ಪಿಸಬೇಕು. ಇದರಲ್ಲಿ ಟೇಬಲ್ ಸಕ್ಕರೆ, ಜೇನುತುಪ್ಪ, ಮೇಪಲ್ ಸಿರಪ್, ಕಾರ್ನ್ ಸಿರಪ್ ಮತ್ತು ತೆಂಗಿನಕಾಯಿ ಸಕ್ಕರೆಯಂತಹ ಸಿಹಿ ಕಾರಕಗಳು ಸೇರಿವೆ. ತಂಪು ಪಾನೀಯಗಳು, ಸಿಹಿ ಸ್ಮೂಥಿಗಳು ಮತ್ತು ಜ್ಯೂಸ್ ಗಳು, ಟೀ–ಕಾಫಿ, ಎನರ್ಜಿ ಡ್ರಿಂಕ್ಸ್‌ನಂತಹ ಸಿಹಿ ಪಾನೀಯಗಳಿಂದ ದೂರವಿರಿ. ಕಾಕ್ಟೈಲ್‌ಗಳು ಮತ್ತು ಸುವಾಸನೆಯ ಮದ್ಯಗಳಂತಹ ಸಿಹಿ ಆಲ್ಕೊಹಾಲ್ಯುಕ್ತ ಪಾನೀಯಗಳನ್ನು ಸಹ ತಪ್ಪಿಸಬೇಕು.

---

# ಆಗಾಗ ಬಾಯಿಯ ವಸಡಿನಲ್ಲಿ ರಕ್ತ

ಕೆಲವೊಮ್ಮೆ ಇದ್ದಕ್ಕಿದಂತೆ ಬಾಯಿಯ ವಸಡಿನಲ್ಲಿ ರಕ್ತಸ್ರಾವ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಾರಣಗಳು ಹಲವಾರು ಇರಬಹುದು, ಅದರಲ್ಲಿ ಹೃದಯಕ್ಕೆ ಸಂಬಂಧಪಟ್ಟ ಸಮಸ್ಯೆ ಕೂಡ ಒಂದು ಎನ್ನುವುದನ್ನು ಮರೆಯಬಾರದು ಎನ್ನುತ್ತಾರೆ ತಜ್ಞರು ಬಾಯಿಯ ಹಲ್ಲುಗಳು ಸದೃಢವಾಗಿರಬೇಕೆಂದರೆ ವಸಡುಗಳು ಕೂಡ ಆರೋಗ್ಯವಾಗಿರಬೇಕು. ಆದರೆ ಕೆಲವೊಮ್ಮೆ ವಸಡಿನಲ್ಲಿ ನೋವು ಕಾಣಿಸಿಕೊಳ್ಳುವುದು ಅಥವಾ ಇದ್ದಕ್ಕಿದಂತೆ ರಕ್ತಸ್ರಾವ ಆಗುವುದು, ಹೀಗೆ ಅನೇಕ ರೀತಿಯಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುವುದು.

ಆದರೆ ನಮ್ಮಲ್ಲಿ ಬಹುತೇಕರು ಈ ವಿಚಾರಕ್ಕೆ ಸಂಬಂಧಿಸಿದಂತೆ ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ ಯಾಕೆಂದ್ರೆ, ಕೆಲವೊಮ್ಮೆ ಹಲ್ಲುಜ್ಜುವ ಸಂದರ್ಭದಲ್ಲಿ ಒರಟಾದ ಟೂತ್ ಬ್ರಷ್ ಬಳಕೆ ಮಾಡಿ, ಜಾಸ್ತಿ ಹೊತ್ತು ಬ್ರಷ್ ಮಾಡುವ ಸಂದರ್ಭದಲ್ಲಿ ಗಾಯವಾಗಿ ಕೂಡ ವಸಡಿನಲ್ಲಿ ರಕ್ತಸ್ರಾವ ಕಂಡು ಬರುತ್ತದೆ, ಅದೇ ಕಾರಣಕ್ಕೆ ಇರಬಹುದು ಎಂದು ಸುಮ್ಮನೆ ನಿರ್ಲಕ್ಷ್ಯ ಮಾಡುತ್ತಾರೆ. ಒಂದು ವೇಳೆ ವಸಡು ತುಂಬಾನೇ ನೋವಿನಿಂದ ಕೂಡಿದ್ದರೆ, ಅಂತಹ ಸಂದರ್ಭದಲ್ಲಿ ಮನೆಮದ್ದುಗಳನ್ನು ಅನುಸರಿಸಿ ಗುಣಪಡಿಸಲು ಪ್ರಯತ್ನಿಸುತ್ತಾರೆ. ಆದರೆ ನಿಮಗೆ ಗೊತ್ತಿರಲಿ ಒಸಡುಗಳಿಂದ ರಕ್ತಸ್ರಾವವಾಗುವುದರ ಹಿಂದೆ ಇನ್ನೂ ಹಲವು ಕಾರಣಗಳಿವೆ, ಅದರಲ್ಲೂ ಮುಖ್ಯವಾಗಿ ಒಸಡುಗಳಿಂದ ರಕ್ತಸ್ರಾವವಾಗುವುದು, ಹೃದಯದ ರೋಗಲಕ್ಷಣಗಳು ಆಗಿರಲು ಸಾಕು ಎನ್ನುತ್ತಾರೆ ತಜ್ಞರು! ಹಾಗಾದ್ರೆ, ಇದರ ಹಿಂದರ ಹಿಂದಿನ ಕಾರಣಗಳೇನು ನೋಡೋಣ ಬನ್ನಿ




**ಈ ಬಗ್ಗೆ ತಜ್ಞರು ಹೇಳುವುದು ಏನು?**

ಒಸಡುಗಳಿಂದ ಹಠಾತ್ ರಕ್ತಸ್ರಾವವು ಹಲವು ಕಾರಣಗಳಿಂದ ಸಂಭವಿಸ ಬಹುದು.

ಇದು ಯಾವುದೇ ಹಲ್ಲಿನ ಕಾಯಿಲೆ ಅಥವಾ ಗಾಯದಿಂದಲೂ ಸಂಭವಿಸಬಹುದು. ಹೃದಯ ಸಂಬಂಧಿತ ಕಾಯಿಲೆಗಳು ಸಹ ಒಸಡು ಗಳಿಂದ ರಕ್ತಸ್ರಾವಕ್ಕೆ ಕಾರಣವಾಗಬಹುದು. ಒಸಡುಗಳಿಂದ ರಕ್ತಸ್ರಾವವನ್ನು ಹಗುರವಾಗಿ ಪರಿಗಣಿಸಬಾರದು. ಯಾವುದೇ ಕಾರಣವಿಲ್ಲದೆ ಒಸಡುಗಳು ರಕ್ತಸ್ರಾವವಾಗುತ್ತಿದ್ದರೆ, ಅಜಾಗರೂಕತೆಯನ್ನು ಮಾಡಬಾರದು. ಅದರ ಕಾರಣಗಳನ್ನು ಕಂಡುಹಿಡಿಯಬೇಕು ಮತ್ತು ಚಿಕಿತ್ಸೆ ನೀಡಬೇಕು.

**ವೈದ್ಯರು ಏನು ಹೇಳುತ್ತಾರೆ :** ಎಂಎಂಜಿ ಆಸ್ಪತ್ರೆಯ ಹಿರಿಯ ವೈದ್ಯ ಡಾ. ಅಲೋಕ್ ರಂಜನ್ ಹೇಳುವಂತೆ ಒಸಡುಗಳಲ್ಲಿ ರಕ್ತಸ್ರಾವವಾಗುವುದು ಹೃದಯ ಕಾಯಿಲೆಯ ಲಕ್ಷಣವೂ ಆಗಿರಬಹುದು.

ಹಾಗಂತ ಈ ಸಮಸ್ಯೆ ಕಾಣಿಸಿಕೊಂಡಾಗ ಅದು ಯಾವಾಗಲೂ ಹೃದಯ ಕಾಯಿಲೆಯ ಲಕ್ಷಣ ಎಂದಲ್ಲ. ಒಸಡುಗಳಲ್ಲಿ ರಕ್ತಸ್ರಾವವಾಗುವುದು ಪರಿದಂತದ ಕಾಯಿಲೆಯ ಸಾಮಾನ್ಯ ಲಕ್ಷಣವಾಗಿದೆ, ಇದು ಹೃದಯ ಕಾಯಿಲೆಗೆ ಸಂಬಂಧಿಸಿದೆ. ಒಸಡು ಕಾಯಿಲೆಯಲ್ಲಿ, ಬಾಯಿಯಲ್ಲಿರುವ ಬ್ಯಾಕ್ಟೀರಿಯಾಗಳು ರಕ್ತಪ್ರವಾಹಕ್ಕೆ ಪ್ರವೇಶಿಸಿ ಉರಿಯೂತ ಮತ್ತು ಹೃದಯಕ್ಕೆ ಹಾನಿಯನ್ನುಂಟು ಮಾಡಬಹುದು,



ಇದು ಹೃದಯ ಕಾಯಿಲೆಯ ಅಪಾಯವನ್ನು ಹೆಚ್ಚಿಸುತ್ತದೆ.

ಆದಾಗ್ಯೂ, ಒಸಡುಗಳಲ್ಲಿ ರಕ್ತಸ್ರಾವವಾಗುವುದು ನಿಮಗೆ ಹೃದಯ ಕಾಯಿಲೆ ಇದೆ ಎಂದು ನಿರ್ಧರಿಸುವುದಿಲ್ಲ. ಇದು ಒಸಡು ಕಾಯಿಲೆಯ ಲಕ್ಷಣವಾಗಿರಬಹುದು, ಇದು ಸಾಮಾನ್ಯ ಸಮಸ್ಯೆಯಾಗಿದೆ.

**ಮೊದಲಿಗೆ ಪರೀಕ್ಷೆ ಮಾಡಿಸಿಕೊಳ್ಳಿ :** ಯಾವುದೇ ಕಾರಣವಿಲ್ಲದೆ ನಿಮ್ಮ ಒಸಡುಗಳಿಂದ ರಕ್ತಸ್ರಾವವಾಗುತ್ತಿದ್ದರೆ, ನೀವು ಅದನ್ನು ಪರೀಕ್ಷಿಸಿಕೊಳ್ಳಬೇಕು. ಪರೀಕ್ಷೆಯ ನಂತರವೇ ಒಸಡು ಗಳಿಂದ ರಕ್ತಸ್ರಾವಕ್ಕೆ ಮುಖ್ಯ ಕಾರಣವೇನೆಂದು ನಿರ್ಧರಿಸಲಾಗುತ್ತದೆ. ಒಸಡುಗಳಿಂದ ರಕ್ತಸ್ರಾವವಾಗುವುದು ಹೃದಯ ಸಂಬಂಧಿತ ಕಾಯಿಲೆ ಯಿಂದಾಗಿದ್ದರೆ, ಅದನ್ನು ಗುರುತಿಸಿ ಚಿಕಿತ್ಸೆ ನೀಡಬಹುದು. ಒಸಡುಗಳು ಬೇರೆ ಯಾವುದಾದರೂ ಕಾರಣದಿಂದಾಗಿ ರಕ್ತಸ್ರಾವವಾಗುತ್ತಿದ್ದರೆ, ಆ ಕಾರಣಗಳನ್ನು ಕಂಡುಹಿಡಿಯುವುದು ಮತ್ತು ಅವುಗಳಿಗೆ ಚಿಕಿತ್ಸೆ ನೀಡುವುದು ಮುಖ್ಯ.

**ಹೃದಯಘಾತದ ಪ್ರಮುಖ ಲಕ್ಷಣಗಳು ಹೀಗಿರುತ್ತವೆ ನೋಡಿ :** ಎದೆಯಲ್ಲಿ ಬಿಗಿತ, ಭಾರ ಆಗಿದ ಹಾಗೆ ಅನಿಸುವುದು ನೋವು ಕಾಣಿಸಿಕೊಳ್ಳುವುದು, ಅಥವಾ ತುಂಬಾನೇ ಒತ್ತಡ ಕಂಡು ಬರುತ್ತದೆ. ಕೆಲವೊಮ್ಮೆ ಅತಿಯಾಗಿ ಎದೆ ನೋವು ಕೂಡ ಕಂಡು ಬರುವ ಸಾಧ್ಯತೆ ಇರುತ್ತದೆ. ಹಲ್ಲಿನ ದವಡೆ, ಕೈಗಳತೋಳು ಹಾಗೂ ಕುತ್ತಿಗೆಯ ಭಾಗದಲ್ಲಿ ಅಥವಾ ಭುಜದ ಹತ್ತಿರ ನೋವು ಕಾಣಿಸಿಕೊಳ್ಳುವುದು. ಇದ್ದಕ್ಕಿದಂತೆ ಕೆಲವೊಮ್ಮೆ ತಲೆ ಸುತ್ತು ಕಾಣಿಸಿಕೊಳ್ಳುವುದು ಉಸಿರಾಟದಲ್ಲಿ ತೊಂದರೆ ಎದುರಾಗುವುದು, ಆಗಾಗ ಸುಸ್ತು ಆಯಾಸ ಕಾಣಿಸಿಕೊಳ್ಳುವುದು, ಹೃದಯದ ಬಡಿತದಲ್ಲಿ ಏರುಪೇರಾಗುವುದು

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ನಿಮ್ಮಲ್ಲಿ ಕೆಲವರು ಇದು ಬಲವಂತವಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕಾಗಬಹುದು, ಇದು ನಿಮ್ಮನ್ನು ಉದ್ವೇಗಭರಿತರನ್ನಾಗಿಯೂ ಹಾಗೂ ಗಾಬರಿಯಿರುವವರನ್ನಾಗಿಯೂ ಮಾಡಬಹುದು.

**ವೃಷಭ** ವಿಶೇಷವಾಗಿ ಹೃದಯ ರೋಗಿಗಳು ಕಾಫಿಯನ್ನು ಬಿಡಬೇಕು. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು.

**ಮಿಥುನ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ.

**ಕರ್ಕಾಟಕ** ಆರೋಗ್ಯ ವಿಷಯಗಳಲ್ಲಿ ನಿಮ್ಮ ಬಗ್ಗೆ ನೀವೇ ನಿರ್ಲಕ್ಷ್ಯ ಮಾಡದಂತೆ ಎಚ್ಚರಿಕೆ ವಹಿಸಿ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು.

**ಸಿಂಹ** ರಾತ್ರಿ ಸಣ್ಣ ವಿಷಯಗಳಲ್ಲೂ ಕೂಡ ನಿಮ್ಮ ಪ್ರಿಯತಮೆಯ ಜೊತೆಗಿನ ಸಂಬಂಧಗಳು ಶಿಥಿಲಗೊಳ್ಳುತ್ತವೆ. ಜನರೊಂದಿಗೆ ಮಾತನಾಡುವಲ್ಲಿ ನೀವು ನಿಮ್ಮ ಅಮೂಲ್ಯವಾದ ಸಮಯವನ್ನು ಹಾಳುಮಾಡಬಹುದು.

**ಕನ್ಯಾ** ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ.

**ತುಲಾ** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ.

**ವೃಶ್ಚಿಕ** ನಿಮ್ಮ ಮುಂಗೋಪ ನಿಮ್ಮನ್ನು ಇನ್ನೂ ಹೆಚ್ಚು ತೊಂದರೆಯಲ್ಲಿ ಸಿಲುಕಿಸಬಹುದು. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

**ಧನಸ್ಸು** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ , ವ್ಯಾಯಾಮವನ್ನು ತಪ್ಪದೆ ಮಾಡಿ. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ.

**ಮಕರ** ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ಯಾರಾದರೂ ನಿಮ್ಮ ನೆರೆಹೊರೆಯವರು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು,

**ಕುಂಭ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ.

**ಮೀನ** ತಂದೆಯು ನಿಮ್ಮನ್ನು ಆಸ್ತಿಯ ಉತ್ತರಾಧಿಕಾರಿತ್ವದಿಂದ ತಪ್ಪಿಸಬಹುದು. ಆದರೆ ಧೃತಿಗೆಡಬೇಡಿ. ಅಭ್ಯುದಯ ಮನಸ್ಸಿಗೆ ಮುದ ನೀಡಿದರೆ ಅಭಾವ ಅದನ್ನು ಬಲಗೊಳಿಸುತ್ತದೆಂದು ನೆನಪಿಡಿ.

## ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಶಿಕ್ಷಣಕ್ಕೆ ಒತ್ತು ನೀಡಿ : ಶಶಿಕಾಂತ ಶೆಂಬೆಳ್ಳಿ

• **ಉದಯವಾಹಿನಿ ಬೀದರ್**

ಸರ್ಕಾರಿ ಶಾಲೆಯ ಮಕ್ಕಳಿಗೆ ಉತ್ತಮ ಗುಣಮಟ್ಟ ಶಿಕ್ಷಣಕ್ಕೆ ಒತ್ತು ನೀಡಿದರೆ ಪೋಷಕರು ತಂತಾನೇ ಮಕ್ಕಳನ್ನು ಸೇರಿಸಲು ಉತ್ಸಾಹ ತೋರುತ್ತಾರೆ ಎಂದು ಹಿರಿಯ ಪತ್ರಕರ್ತ ಶಶಿಕಾಂತ ಶೆಂಬೆಳ್ಳಿ ಹೇಳಿದರು. ಅವಿರತ ಆರ್ಗನೈಶೇನ್ ವತಿಯಿಂದ ಬೀದರ್ ತಾಲ್ಲೂಕಿನ ಬೆಳ್ಳೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ಹಮ್ಮಿಕೊಂಡ ಉಚಿತ ನೋಟ್ ಬುಕ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಆಂಗ್ಲ ಹಾಗೂ ಕನ್ನಡ ಮಾಧ್ಯಮದ ಖಾಸಗಿ ಶಾಲೆಗಳ ಹಾವಳಿಯಿಂದ ಅನೇಕ ಕಡೆ ಸರ್ಕಾರಿ ಶಾಲೆಗಳು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ನಲುಗುತ್ತಿವೆ. ಮಕ್ಕಳನ್ನು ಬಹುಮುಖಿ ಪ್ರತಿಭಾವಂತರನ್ನಾಗಿ


ಉದಯವಾಹಿನಿ ಚಿತ್ರ

ಮಾಡುವ ಜೊತೆಗೆ ಶಾಲೆಯಲ್ಲಿ ಕಲಿಕೆಯ ವಾತಾವರಣ ನಿರ್ಮಿಸಲು ಶಿಕ್ಷಕರು ಗುಣಮಟ್ಟ ಶಿಕ್ಷಣ, ನೈತಿಕ ಮೌಲ್ಯ ಬೋಧನೆಗೆ ಮುಂದಾಗಬೇಕು ಎಂದು ತಿಳಿಸಿದರು. ಪತ್ರಕರ್ತ ಬಾಲಾಜಿ

> ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುವ ಮಕ್ಕಳ ಕಲಿಕೆಗೆ ಅಗತ್ಯವಿರುವ ನೋಟ್ ಬುಕ್ ಸೇರಿದಂತೆ ಇತರ ಸಾಮಾಗ್ರಿ, ಕಾರ್ಯ ಅವಿರತ ತಂಡದಿಂದ ಮಾಡಲಾಗುತ್ತಿದೆ. ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ನಿಟ್ಟನಲ್ಲಿ ಅವಿರತ ಆರ್ಗನೈಶೇನ್ ತಂಡದಿಂದ ಜಿಲ್ಲೆಯ ವಿವಿಧ ಸರ್ಕಾರಿ ಶಾಲೆಗಳಲ್ಲಿ ವಿಭಿನ್ನ ಕಾರ್ಯಕ್ರಮ ಆಯೋಜಿಸುವ ಯೋಜನೆಯಿದೆ -ದಿಲೀಪ ಚಂದಾ, ಚಿಂತಕ

ಕುಂಬಾರ ಮಾತನಾಡಿ, ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು ಉಳಿಸುವುದು ಇಂದಿನ ಸವಾಲಿನ ಕೆಲಸವಾಗಿದೆ. ಶಿಕ್ಷಕ ಇಚ್ಛಾಶಕ್ತಿ, ಪೋಷಕರ ಪ್ರೋತ್ಸಾಹದಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿ ಸಾಧ್ಯ. ಸರ್ಕಾರೇತರ ಸಂಘ-ಸಂಸ್ಥೆಗಳು, ಗ್ರಾಮಸ್ಥರು, ಹಳೆ ವಿದ್ಯಾರ್ಥಿಗಳ ಸಹಾಯಧನದಿಂದ ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸಬಹುದು. ಮಕ್ಕಳನ್ನು ಮೌಲ್ಯ ಶಿಕ್ಷಣ, ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವಂತೆ ಪ್ರೇರಣೆ ನೀಡಬೇಕು ಎಂದರು.

### ಶಾಲೆಗಳಲ್ಲಿ ಪ್ರತಿ ಶನಿವಾರ ಯೋಗ ಕಲಿಕೆ ಕಡ್ಡಾಯವಾಗಲಿ: ಸಂಸದ ಗೋವಿಂದ ಎಂ ಕಾರಜೋಳ ಸಲಹೆ

## 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ

• **ಉದಯವಾಹಿನಿ ಚಿತ್ರದುರ್ಗ**

ರಾಜ್ಯ ಸರ್ಕಾರ ಎಲ್ಲಾ ಶಾಲೆಗಳಲ್ಲಿ ಪ್ರತಿ ಶನಿವಾರ ಒಂದು ಗಂಟೆ ಯೋಗ ಕಲಿಯುವುದನ್ನು ಕಡ್ಡಾಯವಾಗಿಸಬೇಕು. ಮಕ್ಕಳು ಚಿಕ್ಕಂದಿನಲ್ಲಿಯೇ ಯೋಗ ಕಲಿಯುವುದರಿಂದ ಶಿಸ್ತು ಮೂಡುತ್ತದೆ ಹಾಗೂ ಉತ್ತಮ ಆರೋಗ್ಯ ಲಭಿಸುತ್ತದೆ ಎಂದು ಸಂಸದ ಗೋವಿಂದ ಎಂ ಕಾರಜೋಳ ಸಲಹೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆಯುಷ್ ಇಲಾಖೆ ಹಾಗೂ ವಿವಿಧ ಯೋಗ ಸಂಸ್ಥೆಗಳ ಸಹಯೋಗದಲ್ಲಿ ನಗರದ ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ಆಯೋಜಿಸಲಾದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜಗತ್ತಿಗೆ ಯೋಗ ಪರಿಚಯಿಸಿದ ಕೀರ್ತಿ ಭಾರತ ದೇಶದ್ದಾಗಿದೆ. ಮೊದಲಿಗೆ ಯೋಗ ಎನ್ನುವುದು ಒಂದು ಧರ್ಮಕ್ಕೆ ಸೀಮಿತವಾದುದು ಎನ್ನುವ ಸಂಕುಚಿತ ಮನೋಭಾವವಿತ್ತು.ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾದ ನಂತರ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಿಲು ವಿಶ್ವಸಂಸ್ಥೆಗೆ ಮನವಿ ಮಾಡಿದರು. 2014 ರಲ್ಲಿ ವಿಶ್ವಸಂಸ್ಥೆಯಲ್ಲಿ ಸರ್ವಾನುಮತ ದಿಂದ ಜೂನ್.21ನ್ನು ಅಂತರಾಷ್ಟ್ರೀಯ ಯೋಗ ದಿನಾಚರಣೆಯಾಗಿ ಘೋಷಣೆ ಮಾಡಿತು.



ಉದಯವಾಹಿನಿ ಚಿತ್ರ

> ಯೋಗ ದೇಶದ ಸಾಂಸ್ಕೃತಿಕತೆಯ ಪ್ರತೀಕವಾಗಿದೆ. ನಿತ್ಯ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯ ಹೊಂದಬೇಕು. ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಸಾಮೂಹಿಕ ಯೋಗಭ್ಯಾಸದಲ್ಲಿ ತೊಡಗಿರುವುದು ಉತ್ತಮ ಸಂಗತಿಯಾಗಿದೆ. ಯೋಗ ಸಂಸ್ಥೆಗಳು ವರ್ಷ ವರ್ಷವೂ ಹೆಚ್ಚಿನ ಸಂಖ್ಯೆಯ ಜನರಿಗೆ ಯೋಗ ಪಸರಿಸುವ ಕೆಲಸ ಮಾಡಬೇಕು -ಕೆ.ಎಸ್.ನವೀನ್ , ವಿಧಾನ ಪರಿಷತ್ ಶಾಸಕ

**ಉತ್ತಮ ಆರೋಗ್ಯಕ್ಕೆ ಯೋಗ ಅವಶ್ಯಕ**

ವಿಶ್ವದ 187 ದೇಶಗಳಲ್ಲಿ ಯೋಗ ದಿನಾಚರಣೆ ಆಚರಿಸಲಾಗುತ್ತಿದೆ. ಪ್ರಧಾನ ಮಂತ್ರಿ, ನರೇಂದ್ರ ಮೋದಿ ಯೋಗವನ್ನು ವಿಶ್ವದಾದ್ಯಂತ ಪಸರಿಸಲು ಪ್ರಯತ್ನ ಮಾಡುತ್ತಿದ್ದಾರೆ. ದೇಶದಲ್ಲಿ ಆಯುಷ್ ಇಲಾಖೆಯನ್ನು ಬಲ ಪಡಿಸಲಾಗಿದೆ. ಹೆಚ್ಚಿನ ವೈದ್ಯರನ್ನು ಸಹ ನೇಮಕ ಮಾಡಲಾಗಿದೆ. ಯೋಗ ದಿನಾಚರಣೆಗೆ ಜಿಲ್ಲೆಯ ಯೋಗ ಸಂಸ್ಥೆಗಳು ಕೈ ಜೋಡಿಸಿರುವುದು ಸಂತಸದ ಸಂಗತಿಯಾಗಿ ಎಂದು ಸಂಸದ ಗೋವಿಂದ ಎಂ ಕಾರಜೋಳ ಹೇಳಿದರು. ವಿಧಾನ ಪರಿಷತ್ ಶಾಸಕ ಕೆ.ಎಸ್.ನವೀನ್ ಮಾತನಾಡಿ, ಯೋಗದಿಂದ ಜೀವನದಲ್ಲಿ ಸಕಾರಾತ್ಮಕ ಚಿಂತನೆ ಹಾಗೂ ಸದೃಢ ಮನೋಭಾವ ಬೆಳೆಯುವುದು. ಯೋಗ ಒಂದು ದಿನಕ್ಕೆ ಸೀಮಿತವಾಗಿರಬಾರದು. ವರ್ಷದ 365 ದಿನಗಳ ಕಾಲ ಯೋಗಾಭ್ಯಾಸ ಮಾಡಬೇಕು ಎಂದರು.

**ಉದ್ಯಾನವನಗಳಲ್ಲಿ ಯೋಗಕ್ಕೆ ಪ್ರತ್ಯೇಕ ವೇದಿಕೆ:** ಅಂತರಾಷ್ಟ್ರೀಯ ಯೋಗ ದಿನಾಚರಣೆ ಪ್ರೇರಣೆಯಿಂದ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ ಉದ್ಯಾನವನಗಳಲ್ಲಿ ಯೋಗ ಮಾಡಲು ಪ್ರತ್ಯೇಕ

### ಸಾವಿರಾರು ಜನರಿಂದ ಸಾಮೂಹಿಕ ಯೋಗಭ್ಯಾಸ

ಈ ಬಾರಿಯ ಯೋಗ ದಿನಾಚರಣೆಯ ಘೋಷವಾಕ್ಯ ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ' ಎನ್ನುವುದನ್ನು ಸಾರುವ ನಿಟ್ಟನಲ್ಲಿ ವಿವಿಧ ಯೋಗ ಸಂಸ್ಥೆಗಳಿಂದ ಆಗಮಿಸಿದ ಸಾವಿರಾರು ಯೋಗ ಪಟುಗಳು, ನಗರದ ಹಳೆ ಮಾಧ್ಯಮಿಕ ಶಾಲೆಯ ಆವರಣದಲ್ಲಿ 45 ನಿಮಿಷಗಳ ಕಾಲ ಸಾಮೂಹಿಕ ಯೋಗಾಭ್ಯಾಸ ಮಾಡಿದರು.

> ನಾಡಿನೆಲ್ಲೆಡೆ ಯೋಗವನ್ನು ಪ್ರಚಾರ ಮಾಡುವಲ್ಲಿ ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮಿಗಳ ಕೊಡುಗೆ ಮಹತ್ವದಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಯಾವುದೇ ಎಲೆಕ್ಟ್ರಾನಿಕ್ ಮಾಧ್ಯಮಗಳು ಇಲ್ಲದ ಸಂದರ್ಭದಲ್ಲಿ ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮಿಗಳು ಯೋಗವನ್ನು ಗ್ರಾಮ ಗ್ರಾಮಗಳಿಗೆ ಕೊಂಡೊಯ್ಯದರು. ಶತಾಯುಷಿಗಳಾಗಿದ್ದ ಅವರು ತಮ್ಮ ಇಡೀ ಜೀವನವನ್ನು ಯೋಗಕ್ಕೆ ಮುಡಿಪಾಗಿಟ್ಟದ್ದರು. ಯೋಗಾಸಕ್ತರು ಮಲ್ಲಾಡಿಹಳ್ಳಿ ಆಶ್ರಮಕ್ಕೆ ಭೇಟಿ ನೀಡಿ ಅವರ ಯೋಗ ಸಾಧನೆಗಳನ್ನು ಅರಿಯಬೇಕು -ತಾಜ್ಪೀರ್

ವೇದಿಕೆ ಸ್ಥಳವನ್ನು ನಿರ್ಮಿಸುತ್ತಿದೆ. ಈಗಾಗಲೇ ನಗರ ಪ್ರಮುಖ ಉದ್ಯಾನವನಗಳಲ್ಲಿ ವೇದಿಕೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ತಾಜ್ಪೀರ್ ಹೇಳಿದರು.

ಯೋಗದ ಜೊತೆ ಪರಿಸರ ರಕ್ಷಣೆಯ ಕೆಲಸಕ್ಕೆ ಪ್ರತಿಯೊಬ್ಬರು ಮುಂದಾಗಬೇಕು. ಪ್ರತಿದಿನ ಒಂದು ಗಿಡಕ್ಕೆ ಒಂದು ಲೀಟರ್ ನೀರನ್ನು ಗಿಡ ಮರಗಳಿಗೆ ಹಾಕುವುದರ ಮೂಲಕ ಪರಿಸರ ಪ್ರತಿಯೊಬ್ಬರು ಮುಂದಾಗಬೇಕು. ಇದರಿಂದ ಪರಿಸರದಲ್ಲಿ ಗಿಡ ಮರಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುವುದು ಎಂದರು.

ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಜಿ.ಪಂ.ಉಪಕಾರ್ಯದರ್ಶಿ ರಂಗಸ್ವಾಮಿ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಮಲಾತೇಶ್ ಮುದ್ದಜ್ಜಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ತಾಜ್ಪೀರ್ ಅವರು ಸಾಮೂಹಿಕ ಯೋಗಭ್ಯಾಸದಲ್ಲಿ ಪಾಲ್ಗೊಂಡಿದ್ದರು.

ವೇದಿಕೆಯಲ್ಲಿ ಚಿತ್ರದುರ್ಗ ಅಮೃತ ಆರ್ಯ ವೇದ ಕಾಲೇಜಿನ ವೈದ್ಯ ವಿದ್ಯಾರ್ಥಿಗಳು ವಿಶೇಷ ಯೋಗ ನೃತ್ಯ ಪ್ರದರ್ಶಿಸಿದರು.

## ತೀವ್ರತರ ಅತಿಸಾರ ಕೊನೆಗೊಳಿಸುವ ಅಭಿಯಾನ-ಸಭೆ

• **ಉದಯವಾಹಿನಿ ಧಾರವಾಡ**

ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರ ಅಧ್ಯಕ್ಷತೆಯಲ್ಲಿ ತೀವ್ರತರ ಅತಿಸಾರ ಕೊನೆಗೊಳಿಸುವ ಅಭಿಯಾನ 2025 ರನ್ನು ಜಿಲ್ಲೆಯ ಯಶಸ್ವಿಯಾಗಿ ಆಯೋಜಿಸುವ ಕುರಿತು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಸಮನ್ವಯ ಸಮಿತಿ ಸಭೆ ಜರುಗಿತ್ತು.

ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮಾತನಾಡಿ, ತೀವ್ರ ಅತಿಸಾರದಿಂದ ಮಕ್ಕಳ ಮರಣವನ್ನು ಶೂನ್ಯಕ್ಕೆ ತರುವುದು ಈ ಅಭಿಯಾನದ ಉದ್ದೇಶವಾಗಿದೆ. ಜೂನ್ 16, 2025 ರಿಂದ ಜುಲೈ 31, 2025 ರವರೆಗೆ ಅಭಿಯಾನವನ್ನು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದೆ. ಆಶಾ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತೆಯರು ಈ ಕುರಿತಂತೆ ಕ್ಷೇತ್ರ ಮಟ್ಟದಲ್ಲಿ ಅರಿವು


ಉದಯವಾಹಿನಿ ಚಿತ್ರ

ಮೂಡಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಶಾಲೆಗಳಲ್ಲಿ ಕೈಗಳ ಸ್ವಚ್ಚತೆ, ಕೈ ತೊಳೆಯುವ ವಿಧಾನ ಕುರಿತಂತೆ ಮತ್ತು ಶುದ್ಧ ಕುಡಿಯುವ ನೀರನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಶಾಲಾ ಶಿಕ್ಷಣ ಇಲಾಖೆಗೆ ಅವರು ಸೂಚಿಸಿದರು.

> ತೀವ್ರತರ ಅತಿಸಾರ ಕೊನೆಗೊಳಿಸುವ ಅಭಿಯಾನದಡಿ ಜಿಲ್ಲೆಯಲ್ಲಿ ಹುಟ್ಟಿದ ಮಗುವಿನಿಂದ ಹಿಡಿದು ಐದು ವರ್ಷದವರೆಗಿನ ಮಕ್ಕಳನ್ನು ಗುರುತಿಸಿ ಓಆರೆಸ್ ನೀಡಲಾಗುತ್ತದೆ. ಜಿಲ್ಲೆಯಲ್ಲಿ 1622 ಅಂಗನವಾಡಿ ಕೇಂದ್ರಗಳಿದ್ದು, ಸುಮಾರು 95,118 ಮಕ್ಕಳಿದ್ದಾರೆ. ಅಂಗನವಾಡಿ ಕೇಂದ್ರಗಳಲ್ಲಿ ಓಆರೆಸ್ ಕಾರ್ನರ್ಗಳನ್ನು ಮಾಡಲು ಮತ್ತು ಕೈತೊಳೆಯುವ ವಿಧಾನ ಕುರಿತಂತೆ ಮಕ್ಕಳಿಗೆ ತಿಳಿಸಿ ಹೇಳಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ಅಭಿಯಾನದ ಕುರಿತು ಎಸ್.ಡಿ.ಎಮ್ ಧಾರವಾಡ ಮತ್ತು ಕಿಮ್ಸ್ ಹುಬ್ಬಳ್ಳಿ ವೈದ್ಯಕೀಯ ಮಹಾವಿದ್ಯಾಲಯದ ಮಕ್ಕಳ ವಿಭಾಗ ಮತ್ತು ಸಮುದಾಯ ಆರೋಗ್ಯ ವಿಭಾಗದವರಿಂದಲೂ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ತಿಳಿಸಿದರು. ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಸಂಗಪ್ಪಾ ಗಾಬಿ ಅವರು ಮಾತನಾಡಿ, ಜಿಲ್ಲಾ ಆಸ್ಪತ್ರೆಯಲ್ಲಿ ಅತಿಸಾರದಿಂದ ಬಳಲುತ್ತಿರುವ ಮಕ್ಕಳಿಗೆ ಸೂಕ್ತ ವ್ಯವಸ್ಥೆ ಲಭ್ಯವಿರುವುದಾಗಿ ತಿಳಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್. ಎಮ್ ಹೊನಕೇರಿ ಅವರು ಮಾತನಾಡಿ, ಇದೊಂದು ಮಹತ್ವದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮವಾಗಿದ್ದು, ಎಲ್ಲಾ ಇಲಾಖೆಗಳು ಸಹಕಾರ ನೀಡಬೇಕೆಂದು ಕೋರಿದರು.

## ರೈಲ್ವೆ ಇಲಾಖೆಯಿಂದ ಸಾರ್ವಜನಿಕ ಸಮಸ್ಯೆ ಬಗೆಹರಿಸುವಂತೆ ರಕ್ಷಣಾ ವೇದಿಕೆ ಮನವಿ

• **ಉದಯವಾಹಿನಿ ಅರಸೀಕೆರೆ**

ಕೇಂದ್ರ ಸರ್ಕಾರದ ರೈಲ್ವೆ ಮತ್ತು ಜಲ ಶಕ್ತಿ ರಾಜ್ಯ ಸಚಿವರಾದ ವಿ ಸೋಮಣ್ಣನವರಿಗೆ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಅರಸೀಕೆರೆ ತಾಲ್ಲೂಕು ಅಧ್ಯಕ್ಷರಾದ ಎ ಜಿ ಕಿರಣ್ ಕುಮಾರ್. ಜಿಲ್ಲಾ ಉಪಾಧ್ಯಕ್ಷರಾದ ಹೇಮಂತ್ ಕುಮಾರ್ ಅವರ ನೇತೃತ್ವದಲ್ಲಿ ಅರಸೀಕೆರೆ ತಾಲ್ಲೂಕಿನ ಸಾರ್ವಜನಿಕರಿಗೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಿ ಕೊಡುವಂತೆ ಮನವಿ ನೀಡಿದರು.

ಅರಸೀಕೆರೆ ರೈಲ್ವೆ ನಿಲ್ದಾಣದಿಂದ ಗೋಡ್ಸೆಡ್ ರಸ್ತೆ ಅಂಚೆ ಇಲಾಖೆ ಮುಂಭಾಗದಿಂದ ಪಿಎನ್‌ಟಿ ಕ್ವಾಟ್ರಸ್ ರಸ್ತೆಯಲ್ಲಿ ರೈಲ್ವೆ ಇಲಾಖೆ ವತಿಯಿಂದ ತಡೆಗೋಡೆಯನ್ನು ಕಟ್ಟಿರುತ್ತಾರೆ ಅದನ್ನು ತೆರವುಗೊಳಿಸಿಕೊಡಲು ತಾವು ಆದೇಶ ಮಾಡಬೇಕಾಗಿ


ಉದಯವಾಹಿನಿ ಚಿತ್ರ

ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ.

ರೈಲ್ವೆ ಇಲಾಖೆ ವತಿಯಿಂದ ಲಕ್ಷ್ಮಿಪುರ ಮುಂಭಾಗದಿಂದ ಅಂಚೆ ಕೊಪ್ಪಲು ಕಾಟಿಕೆರೆ ಸಂಪೂರ್ಣ ಹಳ್ಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಯಾವುದೇ ರೀತಿಯ ರಸ್ತೆ ವ್ಯವಸ್ಥೆ ಇಲ್ಲದ ಕಾರಣ ಈ ಭಾಗದ ಜನರು ತುಂಬಾ ತೊಂದರೆ ಎದುರಿಸುತ್ತಿದ್ದು ಇದಕ್ಕೆ ಮೇಲ್ ಸೇತುವೆ ನಿರ್ಮಿಸಿ ಕೊಡಬೇಕೆಂದರು. ಅರಸೀಕೆರೆ ಪ್ರಮುಖ ಜಂಕ್ಷನ್ ಆಗಿದ್ದು ಇಲ್ಲಿಗೆ ಹೊರ ಊರುಗಳಿಂದ ಹೆಚ್ಚಿನ ರೀತಿಯಲ್ಲಿ ಪ್ರಯಾಣಿಕರು ಸಂಚರಿಸುವುದರಿಂದ ಅರಸೀಕೆರೆ ರೈಲ್ವೆ ಇಲಾಖೆಯ ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸೂಕ್ತ ರೀತಿಯ ಸಾರ್ವಜನಿಕ ಸೌಲಭ್ಯಗಳನ್ನು ನೀಡದೆ ನಿರ್ಲಕ್ಷ ವೆಸಗಿದ್ದಾರೆ ಎಂದರು.

**ಸಚಿವ ಸೋಮಣ್ಣಗೆ ಮನವಿ**

ಅಲ್ಲದೆ ರೈಲ್ವೆ ಸಮುದಾಯ ಭವನದ ಮುಂಭಾಗದಿಂದ ರೈಲ್ವೆ ಕೆಳ ಸೇತುವೆ ಸಂಪರ್ಕ ಕಲ್ಪಿಸಿ ನೇರ ರಸ್ತೆಯನ್ನು ಮಾಡಿಸಿ ಕೊಡಬೇಕೆಂದು ರಕ್ಷಣಾ ವೇದಿಕೆಯ ಮುಖಂಡರು ರೈಲ್ವೆ ಮತ್ತು ಜಲ ಶಕ್ತಿ ಸಚಿವರಾದ ವಿ. ಸೋಮಣ್ಣನವರಿಗೆ ಅರಸೀಕೆರೆಯಲ್ಲಿ ಮನವಿ ಸಲ್ಲಿಸಿದರು.

## ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಯೋಗ ಅತ್ಯವಶ್ಯಕ

• **ಉದಯವಾಹಿನಿ ಬೀದರ**

ಒತ್ತಡದ ಜೀವನದಲ್ಲಿ ಮನಷ್ಯನು ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗವು ಅತ್ಯಂತ ಅವಶ್ಯಕವಾಗಿದ್ದು ಈ ನಿಟ್ಟಿನಲ್ಲಿ ಯೋಗ ಪ್ರತಿಯೊಬ್ಬರ ಜೀವನದ ಭಾಗವಾಗಬೇಕಿದೆ ಎಂದು ಭಾರತೀಯ ಜನತಾ ಪಕ್ಷದ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಹೇಳಿದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಭಾರತೀಯ ಜನತಾ ಪಕ್ಷ ಬೀದರ ನಗರ ಮಂಡಲ ವತಿಯಿಂದ ನಗರದ ವಿಜ್ಞಾನ ವರ್ಧಿನಿ ವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡ ವಿಶ್ವ ಯೋಗ ದಿನಾಚಾರಣೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ವೇದ ಉಪನೀಷತ್ತಿನಲ್ಲು ಯೋಗದ ಉಲ್ಲೇಖವಿದೆ ಮತ್ತು ಶತಮಾನಗಳಿಂದ ನಮ್ಮ ಸಾಧು ಸಂತರು ಮತ್ತು ಆಧ್ಯಾತ್ಮಿಕ ಗುರುಗಳು ಯೋಗಾಭ್ಯಾಸ ಮಾಡುತ್ತಿದ್ದಾರೆ. ಯೋಗಗುರು ಬಾಬಾ ರಾಮದೇವ, ಶ್ರೀ


ಉದಯವಾಹಿನಿ ಚಿತ್ರ

ಶ್ರೀ ರವಿಶಂಕರ ಗೂರುಜಿ ಸೇರಿದಂತೆ ಅನೇಕ ಸಂತರು ಯೋಗವನ್ನು ಜಗತ್ತಿಗೆ ಪರಿಚಯಿಸಿದ್ದು, ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಯೋಗಕ್ಕೆ ವಿಶ್ವಮಾನ್ಯತೆ ದೊರೆತಿದ್ದು ಜಗತ್ತಿನಾದ್ಯಂತ ಯೋಗ ದಿನವನ್ನು ಆಚರಿಸುತ್ತಿರುವುದು ಭಾರತೀಯರೆಲ್ಲರಿಗೆ ಹೆಮ್ಮೆಯ ವಿಷಯ ಎಂದು ಹೇಳಿದರು. ಐ.ಎನ್.ಓ ಜಿಲ್ಲಾಧ್ಯಕ್ಷ ಗೋರಖನಾಥ ಕುಂಬಾರ ಹಾಗೂ ಉಪಾಧ್ಯಕ್ಷ ನಿಲಮ್ಮಾ ರೂಗನ್ ಯೋಗಾಭ್ಯಾಸ ಮಾಡಿಸಿದರು.

## ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿ

• **ಉದಯವಾಹಿನಿ ಬಳ್ಳಾರಿ**

ನಗರದ ಎಸ್ ಜಿ ಕಾಲೇಜು ಮೈದಾನದಲ್ಲಿ ಬೆಳಿಗ್ಗೆ 11ನೇ ವಿಶ್ವ ಯೋಗ ದಿನಾಚರಣೆ ನಡೆಯಿತು. ಕಾರ್ಯಕ್ರಮಕ್ಕೆ ಮೇಯರ್ ಮುಲ್ಲಂಗಿ ನಂದೀಶ್ ಚಾಲನೆ ನೀಡಿದರು.

ಯೋಗ ಗುರುಗಳು ನೆರೆದ ನಗರದ ಜನತೆ, ವಿದ್ಯಾರ್ಥಿಗಳು, ಸರ್ಕಾರಿ ನೌಕರರಿಗೆ ಯೋಗ ಹೇಳಿಕೊಟ್ಟರು. ಯೋಗ ದಿನ ನಿತ್ಯ ಅಭ್ಯಾಸ ಮಾಡಿದರೆ ಉತ್ತಮ ಆರೋಗ್ಯಕ್ಕೆ ಸಹಕಾರಿ ಎಂದು ಉಪನ್ಯಾಸ ನೀಡಲಾಯ್ತು. ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್, ಡಿಸಿ ಪ್ರಶಾಂತ್ ಕುಮಾರ್ ಮಿಶ್ರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು. ಯೋಗ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯ್ತು.

## ಅನಧಿಕೃತ ವಸತಿ ಸಹಿತ ಶಾಲೆಗಳ ಮಾನ್ಯತೆ ರದ್ದುಪಡಿಸುವಂತೆ ಮನವಿ

• **ಉದಯವಾಹಿನಿ ಯಾದಗಿರಿ**

ಸುರಪುರ ತಾಲ್ಲೂಕಿನಾದ್ಯಂತ ಅನಧಿಕೃತ ವಸತಿ ಸಹಿತ ಶಾಲೆಗಳ ಮಾನ್ಯತೆ ರದ್ದು ಪಡಿಸುವಂತೆ ಒತ್ತಾಯಿಸಿ ಜಯ ಕರ್ನಾಟಕ ಜನಪರ ವೇದಿಕೆ ಹುಣಸಗಿ ತಾಲ್ಲೂಕು ಅಧ್ಯಕ್ಷ ಪ್ರಭುಗೌಡ ಪೋತ ರೆಡ್ಡಿ ನೇತೃತ್ವದಲ್ಲಿ ಇಂದು ಜಿಲ್ಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು.


ಉದಯವಾಹಿನಿ ಚಿತ್ರ

ತಾಲ್ಲೂಕಿನಲ್ಲಿ ಬಹುತೇಕ ಖಾಸಗಿ ಶಾಲೆಗಳು ಯಾವುದೇ ಅನುಮತಿ ಪಡೆಯದೆ ವಸತಿ ಸಹಿತ ಶಾಲೆಗಳು ನಡೆಸುತ್ತಿದ್ದು ಇದು ಕಾನೂನು ಬಾಹಿರವಾಗಿದೆ ಪಾಲಕರಿಂದ ಅತಿ ಹೆಚ್ಚು ಹಣ ಪಡೆದು ಅಲ್ಲಿಯ ಮಕ್ಕಳಿಗೆ ಯಾವುದೇ ರೀತಿಯ ಸರಿಯಾದ ಸೌಲಭ್ಯ ಒದಗಿಸದೆ ಶಾಲೆಗಳನ್ನು ನಡೆಸುತ್ತಿದ್ದಾರೆ. ಈ ಕುರಿತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಖಾಸಗಿ ಅನುದಾನ ರಹಿತ ಶಾಲೆಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿ ತಪ್ಪಿಸ್ತರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಜಯ ಕರ್ನಾಟಕ ಜನಪರ ವೇದಿಕೆ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರುದ್ರಾಂಬಿಕ. ಆರ್.ಪಾಟೀಲ್ ಚಟ್ನಳ್ಳಿ, ಪರಶುರಾಮ್, ಆಕಾಶ್ ಖಾನಾಪುರ, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## 1898ರಲ್ಲಿ ನಿರ್ಮಾಣವಾದ ಸೇತುವೆ: ನಿರ್ವಹಣೆಗೆ ಕಾದಿರುವ ವಾಣಿವಿಲಾಸ ಸೇತುವೆ

• **ಉದಯವಾಹಿನಿ ಹೊಳೆನರಸೀಪುರ**

ಶತಮಾನಗಳ ಇತಿಹಾಸವನ್ನು ಹೊಂದಿರುವ ಇಲ್ಲಿನ ವಾಣಿವಿಲಾಸ ಸೇತುವೆ, ನಿರ್ವಹಣೆ ಇಲ್ಲದೇ ಸೊರಗುತ್ತಿದೆ. ಗಿಡಗಂಟಿಗಳು ಬೆಳೆಯುತ್ತಿದ್ದು, ಸೇತುವೆ ಶಿಥಿಲವಾಗುವ ಆತಂಕ ಎದುರಾಗಿದೆ.

ಆಧುನಿಕ ತಂತ್ರಜ್ಞಾನವೂ ಇಲ್ಲದ ಕಾಲದಲ್ಲಿ ನಿರ್ಮಾಣವಾಗಿರುವ ಈ ಸೇತುವೆ ಗಟ್ಟಿಯಾಗಿದೆ. ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಆದರೆ, ಇದೇ ರೀತಿ ನಿರ್ವಹಣೆಯ ಕೊರತೆ ಎದುರಾದರೆ, ಕೆಲವೇ ವರ್ಷಗಳಲ್ಲಿ ಸೇತುವೆಗೆ ಧಕ್ಕೆಯಾಗಲಿದೆ ಎಂದು ಸಾರ್ವಜನಿಕರು ಹೇಳುತ್ತಿದ್ದಾರೆ. ಪಟ್ಟಣದಿಂದ ಹಾಸನಕ್ಕೆ ಹೋಗುವ ಮಾರ್ಗದಲ್ಲಿ ಹೇಮಾವತಿ ನದಿಗೆ ಮಹಾರಾಜರಾಗಿದ್ದ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಸೇತುವೆ ನಿರ್ಮಾಣ ಮಾಡಲಾಗಿದೆ. 1897ರಲ್ಲಿ ಪ್ರಾರಂಭವಾದ ಸೇತುವೆ ಕಾಮಗಾರಿ 1898 ಮುಗಿದಿದ್ದು, ಸಾರ್ವಜನಿಕರ ಬಳಕೆಗೆ ಮುಕ್ತ ಮಾಡಲಾಯಿತು. ಅಂದಿನಿಂದ ಈ ಸೇತುವೆಗೆ ವಾಣಿವಿಲಾಸ ಸೇತುವೆ ಎಂದು ಹೆಸರಿಡಲಾಗಿದೆ.

ಅಂದಿನಿಂದ ಇಲ್ಲಿಯವರೆಗೆ ಕೋಟ್ಯಂತರ ವಾಹನಗಳು, ಭಾರಿ ಭಾರಹೊತ್ತ 20 ಚಕ್ರದ ಲಾರಿಗಳು ಈ ಸೇತುವೆ ಮೇಲೆ ತಿರುಗಾಡಿವೆ. ದಿವಂಗತ ಜಿ. ಪುಟ್ಟಸ್ವಾಮಿಗೌಡರು ನೀರಾವರಿ ಸಚಿವರಾಗಿದ್ದಾಗ


ಉದಯವಾಹಿನಿ ಚಿತ್ರ

ಪಕ್ಕದಲ್ಲೇ ಒಂದು ಹೊಸ ಸೇತುವೆ ನಿರ್ಮಾಣ ಮಾಡಿಸಿದ್ದು, ನಂತರ ಈ ಸೇತುವೆಯ ಬಳಕೆ ಕಡಿಮೆ ಆಗಿದೆ. ಹೊಸ ಸೇತುವೆ ಬಂದು ಹಳೆ ಸೇತುವೆ ಪಾಳುಬಿತ್ತು ಎನ್ನುವಂತಾಗಿದೆ. ಸೇತುವೆ ಒಳಗಿಂದ ಗಿಡಗಂಟಿಗಳು ಬೆಳೆದು ಸೇತುವೆ ದುರ್ಬಲವಾಗುತ್ತಿದೆಯೇ ಎನ್ನುವ ಆತಂಕ ಜನರದ್ದು. ಸಂಬಂಧಪಟ್ಟ ಅಧಿಕಾರಿಗಳು ಈ ಗಿಡಗಂಟಿಗಳನ್ನು ತೆಗೆದು ಸ್ವಲ್ಪ ನಿರ್ವಹಣೆ ಮಾಡಿದರೆ, ಈ ಸೇತುವೆ ಇನ್ನೂ 100 ವರ್ಷ ಬಳಸಬಹುದು ಎಂದು ನಿವೃತ್ತ ಎಂಜಿನಿಯರ್ ಒಬ್ಬರು ಹೇಳುತ್ತಾರೆ.


### ಇಲ್ಲಿಯೇ ಸುಸಜ್ಜಿತ ಎಪಿಎಂಸಿ ಮಾರುಕಟ್ಟೆ ನಿರ್ಮಿಸಿದರೆ ರೈತರಿಗೆ ಒಳ್ಳೆಯದು: ರೈತ ಸಂಘದ ಮುಖ್ಯಸ್ಥ ದೇವೇಂದ್ರ ಹಲಿಂಗೆ

## ಕೃಷಿ ಮಾರುಕಟ್ಟೆ ಇಲ್ಲದೆ ರೈತರಿಗೆ ಸಂಕಷ್ಟ: ನೆರೆ ರಾಜ್ಯದ ಮಾರುಕಟ್ಟೆಗಳ ಜೊತೆ ವಹಿವಾಟು

• **ಉದಯವಾಹಿನಿ ಹುಲಸೂರ**

ಮುಂಗಾರು ಪೂರ್ವ ಕೃಷಿ ಚಟುವಟಿಕೆಗೆ ತಾಲ್ಲೂಕಿನ ರೈತರು ಸಜ್ಜಾಗುತ್ತಿದ್ದು, ಹಿಂಗಾರು ಹಾಗೂ ಮುಂಗಾರಿನ ಧಾನ್ಯಗಳನ್ನು ಮಾರುಕಟ್ಟೆಗೆ ತರುತ್ತಾರೆ. ಬರುವ ಆದಾಯದಲ್ಲಿ ಬೀಜ, ಗೊಬ್ಬರ ಖರೀದಿಸುತ್ತಾರೆ. ಆದರೆ, ಬೀಜ, ರಸಗೊಬ್ಬರ ಖರೀದಿ, ಭೂಮಿ ಹದ ಮಾಡಿಕೊಳ್ಳಲು ಸಂಗ್ರಹಿಸಿಟ್ಟಿದ್ದ ಧಾನ್ಯದ ಮಾರಾಟ ಮಾಡಬೇಕೆಂದಲ್ಲಿ ತಾಲ್ಲೂಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ಇಲ್ಲದೆ ತಾಲ್ಲೂಕಿನ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

80ರ ದಶಕದಲ್ಲಿ ಪಟ್ಟಣದ ಮುಖ್ಯ ರಸ್ತೆಯಿಂದ ಹಾಲಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಪಕ್ಕದಲ್ಲಿ ಗ್ರಾಮಸ್ಥರಿಂದ ಹಣ ವಂತಿಕೆ ಸಂಗ್ರಹಿಸಿ ಸುಮಾರು 8 ಎಕರೆ ಜಮೀನು ಖರೀದಿಸಿ ಕೃಷಿ ಮಾರುಕಟ್ಟೆಗಾಗಿ (ಎಪಿಎಂಸಿ) ಕೊಡಲಾಗಿತ್ತು. ಬಳಿಕ ಎಪಿಎಂಸಿಯಿಂದ ಸ್ಥಳಕ್ಕೆ ಎನ್‌ಎ ಲೇಔಟ್ ಮಾಡಿ ದೇವನಾಳ, ಹಾಲಹಳ್ಳಿ, ಖಂಡಾಳ, ಬಸವಕಲ್ಯಾಣ ಸೇರಿ ವಿವಿಧ ಗ್ರಾಮದ 40 ಜನ ವರ್ತಕರಿಗೆ ಅಂಗಡಿ ತೆರೆಯಲು ಅವಕಾಶ ಕಲ್ಪಿಸಿದ್ದು, ರೈತರ ಉತ್ಪನ್ನಗಳ ಖರೀದಿಗೆ ಅನುಮತಿ ಕೊಟ್ಟಿಲ್ಲ. ಹೀಗಾಗಿ ಇಲ್ಲಿಯವರೆಗೆ ವರ್ತಕರು ಅಂಗಡಿ


ಉದಯವಾಹಿನಿ ಚಿತ್ರ

**ಮೂಲ ಸೌಕರ್ಯಗಳ ಕೊರತೆ**

> ಪಟ್ಟಣದ ಮಾರುಕಟ್ಟೆಯಲ್ಲಿ ಮೂಲಭೂತ ಸೌಕರ್ಯಗಳ ಒದಗಿಸುವಂತೆ ವರ್ತಕರು ಕೋರ್ಟ್ ಮೊರೆ ಹೋಗಿದ್ದಾರೆ. ಕೂಡಲೇ ಮಾರುಕಟ್ಟೆಯಲ್ಲಿ ವ್ಯಾಪಾರಿಗಳು ರೈತರು ಅಥವಾ ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಸಂಪರ್ಕ ಗುಣಮಟ್ಟದ ರಸ್ತೆ ಚರಂಡಿ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ ಸೂಕ್ತ ಕಸ ವಿಲೇವಾರಿ ಶೌಚಾಲಯ ವ್ಯವಸ್ಥೆ ಸೇರಿ ಹಲವು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು ನಿಯಮಿತವಾಗಿ ನಿರ್ವಹಣೆಯ ಕೊರತೆಯೂ ಕಂಡುಬಂದಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ವರ್ತಕರು ಆಗ್ರಹಿಸಿದ್ದಾರೆ.

ಗಳು ತೆರೆದಿಲ್ಲ ಹಾಗೂ ಅದರ ನಿರ್ವಹಣೆ ಸರಿಯಾಗಿ ಆಗದೇ ಅವ್ಯವಸ್ಥೆಯ ತಾಣವಾಗಿ ಮಾರ್ಪಟ್ಟಿದೆ' ಎಂದು ವರ್ತಕ ಓಂಕಾರ ಪಟ್ಟೆ ಹೇಳುತ್ತಾರೆ.

ಕೃಷಿ ಮಾರುಕಟ್ಟೆಗೆ ತನ್ನದೇ ಆದ ಜಮೀನು ಇದ್ದರೂ ಪಟ್ಟಣದಲ್ಲಿ ಪ್ರತಿ ಭಾನುವಾರ ನಡೆಯುವ ಸಂತೆಯನ್ನು ತರಕಾರಿ, ಹಣ್ಣು, ಬಟ್ಟೆ, ದಿನಸಿ ವ್ಯಾಪಾರಿಗಳು ಪಟ್ಟಣದ ಗಾಂಧಿವೃತ್ತದಲ್ಲಿ ನಡೆಸುವಂತಾಗಿದೆ.

ಇದರಿಂದ ವಾಹನಗಳ ದಟ್ಟಣೆ ಉಂಟಾಗಿ ಜನರ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಸುರಕ್ಷತೆಯ ದೃಷ್ಟಿಯಿಂದ ಎಪಿಎಂಸಿ ಮಾರುಕಟ್ಟೆ ಆರಂಭಿಸಿ ಅದರ ಒಳ ಆವರಣದಲ್ಲೇ ವ್ಯಾಪಾರ ನಡೆಸುವಂತಾಗಬೇಕು' ಎಂದು ತರಕಾರಿ ಬೆಳಗಾರ ಮಲ್ಲಪ್ಪ ಒತ್ತಾಯಿಸಿದ್ದಾರೆ.

> ತಾಲ್ಲೂಕಿನ ರೈತರು ಕಷ್ಟಪಟ್ಟು ತಾವು ಬೆಳೆದ ಉತ್ಪನ್ನಗಳನ್ನು ನೆರೆ ರಾಜ್ಯ ಮಹಾರಾಷ್ಟ್ರದ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಅಲ್ಲಿ ದಲ್ಲಾಳಿಗಳ ಹಾವಳಿ ವಿಪರೀತವಾಗಿದೆ. ಮಧ್ಯವರ್ತಿಯಿಲ್ಲದೇ ಒಂದೇ ಒಂದು ತರಕಾರಿಯನ್ನೂ ಮಾರಾಟ ಮಾಡಲು ಸಾಧ್ಯವಿಲ್ಲ. ದಲ್ಲಾಳಿಗಳಿಗೆ ಬರುವ ಆದಾಯದಲ್ಲಿ ಶೇ 10ರಷ್ಟು ಕಮಿಷನ್ ಕೊಡುವುದು ಕಡ್ಡಾಯ. ಹೀಗಾಗಿ ಕಷ್ಟಪಡುವುದು ರೈತರು ಲಾಭ ಮಾಡಿಕೊಳ್ಳುವುದು ದಲ್ಲಾಳಿಗಳು ಎಂಬಂತಾಗಿದೆ ಎಂದು ರೈತರು ಅಲವತ್ತುಕೊಳ್ಳುತ್ತಾರೆ.

**ನೆರೆ ರಾಜ್ಯದಲ್ಲಿ ಶೇ. 10 ಕಮಿಷನ್**

ಪಟ್ಟಣ ಸೇರಿ ತಾಲ್ಲೂಕಿನಲ್ಲಿ ಒಟ್ಟು 50 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರೈತರು ಹಲವು ಬೆಳೆ ಬೆಳೆಯುತ್ತಿದ್ದು, ಕೋಟಮಾಳ, ಹನುಮಂತವಾಡಿ, ಕಾದೆಪೂರ, ದೇವನಾಳ, ಮಾಚನಾಳ, ಮಿರಖಲ, ಸೋಲ ದಾಪಕ ಹಾಗೂ ಸಮೀಪದ ಹರೆವಾಡಿ, ಕೊಂಗಳಿ, ಹಲಸಿ ತುಗಾಂವ, ಶ್ರೀಮಾಳಿ, ಅಳವಾಯಿ, ಮೆಹಕರ ಸೇರಿ ಗಡಿ ಭಾಗದ ಹಲವು ಹಳ್ಳಿಗಳಲ್ಲಿನ ರೈತರು ಎಪಿಎಂಸಿ ಮಾರುಕಟ್ಟೆಯ ವ್ಯವಸ್ಥೆ ಇಲ್ಲದ ಕಾರಣ ನೆರೆ ರಾಜ್ಯದ ಮಹಾರಾಷ್ಟ್ರದ ಔರಾದ್ (ಶಾ), ಉದಗೀರ, ಲಾತೂರ ಹಾಗೂ ಹೈದರಾಬಾದ್‌ಗೆ ಉತ್ಪನ್ನಗಳನ್ನು ಕೊಂಡೊಯ್ಯಬೇಕು. ಇಲ್ಲಿಯೇ ಸುಸಜ್ಜಿತ ಎಪಿಎಂಸಿ ಮಾರುಕಟ್ಟೆ ನಿರ್ಮಿಸಿದರೆ ರೈತರಿಗೆ ಒಳ್ಳೆಯದು' ಎಂದು ರೈತ ಸಂಘದ ಮುಖ್ಯಸ್ಥ ದೇವೇಂದ್ರ ಹಲಿಂಗೆ ಆಗ್ರಹಿಸುತ್ತಾರೆ.

ಎಪಿಎಂಸಿ ಮಾರುಕಟ್ಟೆಯಲ್ಲಿ 2005 ರಿಂದ ಇಲ್ಲಿಯವರೆಗೆ ಸುಮಾರು 20 ವರ್ಷಗಳಿಂದ ಸಮಿತಿ ಇಲ್ಲದೆ ಅಧ್ಯಕ್ಷ ಹಾಗೂ ಸದಸ್ಯರ ಚುನಾವಣೆ ನಡೆದಿಲ್ಲ, ಶಾಸಕರ ಹಾಗೂ ಅಧಿಕಾರಿಗಳ ನಿರ್ಲಕ್ಷದಿಂದ ಅಭಿವೃದ್ಧಿಗಾಗಿ ಕಾದಿರುವ ಕೃಷಿ ಮಾರುಕಟ್ಟೆ ಜಮೀನಲ್ಲಿ ಮಾರುಕಟ್ಟೆಯ ಕಟ್ಟಡವು ಪಾಳು ಬಿದ್ದು ಮದ್ಯವ್ಯಸನಿಗಳ ತಾಣವಾಗಿದೆ ಮಾರ್ಪಟ್ಟಿದೆ.

## ಹೆಚ್ಚುವರಿ ಬಸ್ ಒದಗಿಸಲು ಒತ್ತಾಯ

• **ಉದಯವಾಹಿನಿ ಚನ್ನಮ್ಮನ ಕಿತ್ತೂರು**


ತಾಲ್ಲೂಕಿನ ಕತ್ರಿದಡ್ಡಿ ಸರ್ಕಾರಿ ಪ್ರೌಢಶಾಲೆಗೆ ಹೋಗುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶಾಲೆ ಬಿಡುವ ವೇಳೆ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಪಾಲಕರು ಆಗ್ರಹಿಸಿದ್ದಾರೆ.

ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ಕುರಬರ ಹಾಗೂ ಗ್ರಾಮ ಪಂಚಾಯಿತಿ ಸದಸ್ಯ ಮಹಾಂತೇಶ ಎಮ್ಮಿ ಗುರುವಾರ ಪತ್ರಕರ್ತರ ಜತೆ ಮಾತನಾಡಿ ಕುಲವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂಬತ್ತು ಗ್ರಾಮಗಳು ಬರುತ್ತವೆ. ಈ ಎಲ್ಲಾ ಹಳ್ಳಿಗಳ ಮಕ್ಕಳು ಕತ್ರಿದಡ್ಡಿ ಪ್ರೌಢಶಾಲೆಗೆ ಓದಲು ಬರುತ್ತಾರೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 300 ತಲುಪಿದೆ. ಬೆಳಿಗ್ಗೆ ವೇಳೆ ಎರಡು ಬಸ್ ವ್ಯವಸ್ಥೆಯಿದೆ. ಶಾಲೆ ಬಿಟ್ಟ ನಂತರ ಒಂದೇ ಬಸ್ ಸಂಚರಿಸುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ' ಎಂದು ಹೇಳಿದರು. ಸಾರಿಗೆ ಅಧಿಕಾರಿಗಳು ವಿದ್ಯಾರ್ಥಿನಿಯರ ಪ್ರಯಾಣದ ಈ ಸಮಸ್ಯೆಗೆ ಸ್ಪಂದಿಸಬೇಕು. ಹೆಚ್ಚುವರಿ ಮತ್ತೊಂದು ಬಸ್ ಸಂಜೆ ವೇಳೆ ಓಡಿಸಬೇಕು' ಎಂದು ಅವರು ಆಗ್ರಹಿಸಿದರು.

### ಸೆಮ್ನಾನ್ ನಗರದ ನೈರುತ್ಯ ದಿಕ್ಕಿನಲ್ಲಿ ಭೂಮಿಯಿಂದ 10 ಕಿ.ಮೀ. ಕೆಳಗಡೆ ಈ ಕಂಪನ ಉಂಟಾಗಿದೆ

# ಕಡೆಗೂ ಪರಮಾಣು ಅಸ್ತ್ರಕ್ಕೆ ಕೈ ಹಾಕಿತಾ ಆ ದೇಶ?

**ಟೆಹರಾನ್:** ಯುದ್ಧಪೀಡಿತ ಇರಾನ್ ನಲ್ಲಿ ಜೂ. 21ರಂದು ಪ್ರಬಲ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ ಇದರ ತೀವ್ರತೆ 5.1ರಷ್ಟಿತ್ತು ಎಂದು ತಜ್ಞರು ಹೇಳಿದ್ದಾರೆ. ಇರಾನ್ ನ ಪ್ರಮುಖ ನಗರವಾದ ಸೆಮ್ನಾನ್‌ನ ವಾಯುವ್ಯ ದಿಕ್ಕಿನಿಂದ 27 ಕಿ.ಮೀ. ದೂರದಲ್ಲಿರುವ ಗುಡ್ಡಗಾಡು ಪ್ರದೇಶದಲ್ಲಿ ಭೂಮಿಯಿಂದ 10 ಕಿ.ಮೀ.ನಷ್ಟು ಕೆಳಗೆ ಈ ಕಂಪನವಾಗಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ತಜ್ಞರಿಂದ ಈ ವಿಚಾರ ಬಹಿರಂಗವಾಗುತ್ತಲೇ, ಇರಾನ್ ದೇಶವು ಇಸ್ರೇಲ್ ಮೇಲೆ ಪರಮಾಣು ಅಸ್ತ್ರವನ್ನು ಯಾವುದೇ ಸಂದರ್ಭದಲ್ಲಾದರೂ ಪ್ರಯೋಗಿಸಬಹುದು ಎಂಬ ಅನುಮಾನಕ್ಕೆ ರೆಕ್ಕೆಪುಕ್ಕ ಬಂದಿವೆ. ಅಣ್ವಸ್ತ್ರ ಪ್ರಯೋಗಕ್ಕೆ ಪೂರ್ವಭಾವಿಯಾಗಿ ನಗರ ಪ್ರದೇಶಗಳು, ಜನ ವಸತಿಗಳಿಗಿಂತ ತುಂಬಾ ದೂರವಾಗಿರುವ ಬಂಜರು – ಗುಡ್ಡಗಾಡು ಪ್ರದೇಶದಲ್ಲಿ ನೆಲದಿಂದ ಸುಮಾರು 10 ಕಿ.ಮೀ. ಆಳದಲ್ಲಿ ಇರಾನ್ ದೇಶ ಅಣ್ವಸ್ತ್ರಗಳನ್ನು ಪ್ರಯೋಗಿಸಿರಬಹುದೇ ಎಂಬ ಗುಮಾನಿಗಳು ಎದ್ದಿವೆ. ಇದಕ್ಕೆ ಪೂರಕವಾಗಿ ಕೆಲವಾರು ಮಾಹಿತಿಗಳೂ ಹರಿದಾಡಲಾರಂಭಿಸಿವೆ. ಭೂಕಂಪನದ ಕೇಂದ್ರ ಬಿಂದು, ಸೆಮ್ನಾನ್ ಸ್ಪೇಸ್ ಸೆಂಟರ್, ಸೆಮ್ನಾನ್ ಕ್ಷಿಪಣಿ ಕಾಂಪ್ಲೆಕ್‌ಗಳಿಗೆ ಹತ್ತಿರದಲ್ಲೇ ಇತ್ತು. ಈ ಎರಡೂ ಕೇಂದ್ರಗಳನ್ನು ಇರಾನ್ ಸೇನೆಯೇ ನಿರ್ವಹಿಸುತ್ತಿದೆ. ಹಾಗಾಗಿ, ಸೇನೆ ಹಾಗೂ ವಿಜ್ಞಾನಿಗಳು ಸೇರಿ ಅಣ್ವಸ್ತ್ರವನ್ನು ಇದೇ ಕೇಂದ್ರಗಳಿಗೆ ಹತ್ತಿರವಿರುವ ಪ್ರದೇಶದಲ್ಲಿ ಪರೀಕ್ಷಿಸಿರಬಹುದು ಎಂದು ಊಹಾಪೋಹಗಳು ಈಗ ಎಲ್ಲೆಡೆ ಹರಿದಾಡುತ್ತಿವೆ.




**ಇರಾನ್‌ನಲ್ಲಿ ಪ್ರಬಲ ಭೂಕಂಪ**

**ಇಸ್ರೇಲ್ ಕ್ಷಿಪಣಿ ದಾಸ್ತಾನು ಖಾಲಿಯಾಗ್ತಾ ಇದೆಯಾ?:** ಜೂ. 20ರ ಹೊತ್ತಿಗೆ ಇಸ್ರೇಲ್ – ಇರಾನ್ ಯುದ್ಧ ಶುರುವಾಗಿ 8 ದಿನಗಳಾಗಿವೆ. ಅಂದು ಇಸ್ರೇಲ್ 40 ಕ್ಷಿಪಣಿಗಳ ಮೂಲಕ ಇರಾನ್ ಮೇಲೆ ದಾಳಿ ನಡೆಸಿದೆ. ಆದರೆ, ಇಸ್ರೇಲ್‌ನ ದಾಸ್ತಾನಿನಲ್ಲಿದ್ದ ಶಸ್ತ್ರಾಸ್ತ್ರಗಳು ಕ್ರಮೇಣ ಖಾಲಿಯಾಗುತ್ತಿವೆ. ಇದರಿಂದ ಇಸ್ರೇಲ್ ಆತಂಕಕ್ಕೊಳಗಾಗಿದೆ ಎಂದು ಹೇಳಲಾಗಿದೆ. ಅದು ಅಮೆರಿಕಕ್ಕೆ ಶಸ್ತ್ರಾಸ್ತ್ರ ಪೂರೈಕೆಗಾಗಿ ಬೇಡಿಕೆಯಿಟ್ಟಿದೆ ಎಂದು ಹೇಳಲಾಗಿದೆ.

**ಸೋನಿಯಾ ಗಾಂಧಿ ಆಕ್ಷೇಪ:** ಇಸ್ರೇಲ್–ಇರಾನ್ ನಡುವಿನ ಯುದ್ಧದ ಸಂದರ್ಭ, ಮಧ್ಯಪ್ರಾಚ್ಯದ ಶಾಂತಿಗೆ ಭಂಗ ತಂದಿರುವುದಲ್ಲದೆ, ಜಗತ್ತಿನ ನಾನಾ ದೇಶಗಳ ಆತಂಕಕ್ಕೂ ಕಾರಣವಾಗಿದೆ. ಈ ವಿಚಾರದಲ್ಲಿ ಭಾರತ, ಮಗುಮ್ಮಾಗಿದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಆರೋಪಿಸಿದ್ದಾರೆ. ಇಸ್ರೇಲ್ ಇರಾನ್ ಜೊತೆಗೆ ಉತ್ತಮ ಸ್ನೇಹ ಹೊಂದಿರುವ ಭಾರತವು, ಈ ವಿಚಾರದಲ್ಲಿ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಹೇಳಿದ್ದಾರೆ.

**ನಾನ್ಯಾಕೆ ಕದನ ವಿರಾಮದ ಮಧ್ಯಸ್ಥಿಕೆ ವಹಿಸಲಿ: ಟ್ರಂಪ್**



**ಇರಾನ್ ಹಾಗೂ ಇಸ್ರೇಲ್ ರಾಷ್ಟ್ರಗಳ ನಡುವಿನ ಯುದ್ಧದ ರೀತಿಯ ಸಂಘರ್ಷ 8ನೇ ದಿನಕ್ಕೆ ಕಾಲಿಟ್ಟಿದೆ. ಎರಡೂ ದೇಶಗಳಲ್ಲಿ ಮೂಲಸೌಕರ್ಯಗಳು, ಆರ್ಥಿಕತೆ, ಜನಜೀವನ – ಹೀಗೆ ಹಲವಾರು ರೀತಿಯ ನಷ್ಟಗಳಾಗಿವೆ. ಇದೇ ವೇಳೆ, ಎರಡೂ ದೇಶಗಳ ನಡುವೆ ಕದನ ವಿರಾಮ ಏರ್ಪಡಲು ಟ್ರಂಪ್ ನಿರ್ಧರಿಸಿದ್ದಾರೆ ಎಂಬ ವರದಿಗಳನ್ನು ಖುದ್ದು ಟ್ರಂಪ್ ಅವರೇ ಎರಡು ದೇಶಗಳ ನಡುವೆ ಮಧ್ಯಸ್ಥಿಕೆ ವಹಿಸಿಕೊಳ್ಳುವುದಿಲ್ಲ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅವರ ಪ್ರಕಾರ, ಇಸ್ರೇಲ್ ದೇಶವು ಯುದ್ಧದಲ್ಲಿ ಜಯದತ್ತ ಸಾಗುತ್ತಿದೆ, ಇರಾನ್ ಸೋಲುತ್ತಿದೆ.**

## ಬಿಹಾರ ಚುನಾವಣೆ: ವೃದ್ಧಾಪ್ಯ ವಿಧವಾ ವೇತನ 400ರಿಂದ 1,100ಕ್ಕೆ ಹೆಚ್ಚಳ

**ಪಟ್ನಾ:** ಬಿಹಾರದಲ್ಲಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದು, ಹಿರಿಯ ನಾಗರಿಕರು, ವಿಧವೆಯರು, ಅಂಗವಿಕಲರ ಮಾಸಿಕ ಪಿಂಚಣಿಯನ್ನು 700ರಷ್ಟು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಎಕ್ಸ್‌ನಲ್ಲಿ ಮಾಹಿತಿ ನೀಡಿರುವ ಮುಖ್ಯಮಂತ್ರಿ ನಿತೀಶ್ ಕುಮಾರ್, ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯಡಿಯಲ್ಲಿ ರಾಜ್ಯದ ವೃದ್ಧರು, ಅಂಗವಿಕಲರು, ವಿಧವೆಯರು ಈಗ 400ರ ಬದಲು 1,100 ಪಡೆಯುತ್ತಾರೆ ಎಂದು ತಿಳಿಸಲು ನನಗೆ ಸಂತೋಷವಾಗಿದೆ. ಜುಲೈನಿಂದಲೇ ಇದು ಅನುಷ್ಠಾನವಾಗಲಿದೆ ಎಂದು ತಿಳಿಸಿದ್ದಾರೆ.



ಪ್ರತಿ ತಿಂಗಳ 10ನೇ ದಿನದಂದು ಎಲ್ಲಾ ಫಲಾನುಭವಿಗಳ ಖಾತೆಗಳಿಗೆ ಪಿಂಚಣಿ ಮೊತ್ತವನ್ನು ಕಳುಹಿಸಲಾಗುವುದು ಎಂದೂ ಹೇಳಿದ್ದಾರೆ. ಸರ್ಕಾರದ ಈ ನಿರ್ಧಾರವು ಫಲಾನುಭವಿಗಳಿಗೆ ಸಹಾಯ ಮಾಡುತ್ತದೆ ಮತ್ತು ಅವರು ಗೌರವಯುತ ಜೀವನವನ್ನು ನಡೆಸುವುದನ್ನು ಖಚಿತಪಡಿಸುತ್ತದೆ. ಇದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಬಂದನಾ ಪ್ರಿಯಾಶಿ ತಿಳಿಸಿದ್ದಾರೆ. ರಾಜ್ಯದಲ್ಲಿ ಪಿಂಚಣಿ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ 1.96 ಕೋಟಿ ಇದೆ. ಈ ವರ್ಷದ ಕೊನೆಯಲ್ಲಿ ಬಿಹಾರದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ.

# ಕೇಂದ್ರದ ಮೌನ ರಾಜತಾಂತ್ರಿಕ ಲೋಪಕ್ಕೆ ನಿದರ್ಶನ

### ಕೇಂದ್ರದ ಮೌನ ಭಾರತದ ದೀರ್ಘಕಾಲದ ರಾಜತಾಂತ್ರಿಕ ನಿಲುವು, ಬದ್ಧತೆಗೆ ಧಕ್ಕೆ ತಂದಿದೆ

**ಹೊಸದಿಲ್ಲಿ:** ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮೌನವನ್ನು ಪ್ರಶ್ನಿಸಿರುವ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಈ ಮೌನ ಭಾರತದ ರಾಜತಾಂತ್ರಿಕ ಲೋಪವನ್ನು ಮಾತ್ರವಲ್ಲದೇ, ನೈತಿಕ ಮತ್ತು ಕಾರ್ಯತಂತ್ರದ ಸಂಪ್ರದಾಯಗಳಿಂದ ಸಂಪೂರ್ಣ ವಿಮುಖವಾಗಿರುವುದನ್ನು ಪ್ರತಿನಿಧಿಸುತ್ತದೆ ಎಂದು ಆರೋಪಿಸಿದ್ದಾರೆ.

**ಸೋನಿಯಾ ಗಾಂಧಿ ಕಿಡಿ**

ಇರಾನ್ ಭೂಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ಮಿಲಿಟರಿ ದಾಳಿಯನ್ನು ಕಾನೂನುಬಾಹಿರ, ಸಾರ್ವಭೌಮತ್ವದ ಉಲ್ಲಂಘನೆ ಎಂದು ಖಂಡಿಸಿರುವ ಸೋನಿಯಾ ಗಾಂಧಿ, ಇಸ್ರೇಲ್‌ನ ಆಕ್ರಮಣಕಾರಿ ವರ್ತನೆ, ಇರಾನ್‌ನ ಸ್ವರಕ್ಷಣಾ ಮಿಲಿಟರಿ ಕ್ರಮಗಳು ಮಧ್ಯಪ್ರಾಚ್ಯದಲ್ಲಿ ಆತಂಕದ ವಾತಾವರಣ ಸೃಷ್ಟಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇರಾನ್ ನೆಲದಲ್ಲಿ ನಡೆದ ಈ ಬಾಂಬ್ ದಾಳಿಗಳನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಖಂಡಿಸಿದೆ. ಇದು ಗಂಭೀರ ಪ್ರಾದೇಶಿಕ, ಜಾಗತಿಕ ಪರಿಣಾಮಗಳನ್ನು ಹೊಂದಿರುವ ಅಪಾಯಕಾರಿ ಉಲ್ಬಣವನ್ನು ಪ್ರತಿನಿಧಿಸುತ್ತದೆ. ಗಾಜಾದಲ್ಲಿ ಇಸ್ರೇಲ್‌ನ ಕ್ರೂರ ಕಾರ್ಯಾಚರಣೆ ಮತ್ತು ಇರಾನ್ ಮೇಲಿನ ಆಕ್ರಮಣಕಾರಿ ದಾಳಿಯನ್ನು ಪ್ರಾದೇಶಿಕ ಸ್ಥಿರತೆಯನ್ನು ಸಂಪೂರ್ಣವಾಗಿ ಕಡೆಗಣಿಸಿ ನಡೆಸಲಾಗಿದೆ. ಕಾಂಗ್ರೆಸ್ ಮಧ್ಯಪ್ರಾಚ್ಯದ ಬೆಳವಣಿಗೆಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತದೆ ಎಂದು ಸೋನಿಯಾ ಗಾಂಧಿ ಮಾಧ್ಯಮವೊಂದಕ್ಕೆ ಬರೆದ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಇದೇ ವೇಳೆ ಇಸ್ರೇಲ್–ಇರಾನ್ ನಡುವಿನ ಸಂಘರ್ಷಕ್ಕೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೀತಿಯನ್ನು ಟೀಕಿಸಿರುವ ಸೋನಿಯಾ ಗಾಂಧಿ, ಇರಾಕ್ ಯುದ್ಧದಲ್ಲಿ ಮಾಡಿದ ತಪ್ಪುಗಳನ್ನೇ ಅಮೆರಿಕ ಈ ಬಾರಿಯೂ ಮಾಡುತ್ತಿದೆ ಎಂದು ಹರಿಹಾಯ್ದಿದ್ದಾರೆ.



ಇದೇ ವೇಳೆ ಇಸ್ರೇಲ್–ಇರಾನ್ ಸಂಘರ್ಷಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಿಲುವನ್ನು ಟೀಕಿಸಿರುವ ಸೋನಿಯಾ ಗಾಂಧಿ, ಇಸ್ರೇಲ್‌ಗೆ ಹತ್ತಿರವಾಗುವ ಭರದಲ್ಲಿ ನಾವು ಇರಾನ್ ಮರೆಯುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಇರಾನ್, ಇಸ್ರೇಲ್ ಎರಡೂ ದೇಶಗಳೊ ಇಂದಿಗೆ ದೀರ್ಘಕಾಲದ ಸಂಬಂಧಗಳನ್ನು ಹೊಂದಿರುವ ಭಾರತದ ವಿಶಿಷ್ಟ ರಾಜತಾಂತ್ರಿಕ ನಿಲುವನ್ನು ಪುನರುಚ್ಚಿಸಿರುವ ಸೋನಿಯಾ ಗಾಂಧಿ, ಇತ್ತೀಚಿನ ದಶಕಗಳಲ್ಲಿ ಭಾರತವು ಇಸ್ರೇಲ್‌ನೊಂದಿಗೆ ರಕ್ಷಣೆ, ವ್ಯಾಪಾರ, ಗುಪ್ತಚರ ಸಹಕಾರವನ್ನು ವಿಸ್ತರಿಸಿದ್ದರೂ, ಅದು ಇರಾನ್‌ನೊಂದಿಗೆ ಆಳವಾದ ಐತಿಹಾಸಿಕ, ನಾಗರಿಕ ಮತ್ತು ಕಾರ್ಯತಂತ್ರದ ಸಂಪರ್ಕಗಳನ್ನು ಸಹ ಉಳಿಸಿಕೊಂಡಿದೆ ಎಂದು ಸೂಚ್ಯವಾಗಿ ಹೇಳಿದ್ದಾರೆ. ಇರಾನ್ ಭಾರತಕ್ಕೆ ದೀರ್ಘಕಾಲದ ಸ್ನೇಹಿತನಾಗಿದ್ದು, ಆಳವಾದ ನಾಗರಿಕ ಸಂಬಂಧಗಳಿಂದ ನಮಗೆ ಬದ್ಧವಾಗಿದೆ. ಜಮ್ಮು, ಕಾಶ್ಮೀರ ಸೇರಿದಂತೆ ನಿರ್ಣಾಯಕ ಘಟ್ಟಗಳಲ್ಲಿ, ಇರಾನ್ ಭಾರತಕ್ಕೆ ನೀಡಿದ ದೃಢವಾದ ಬೆಂಬಲ ನೀಡಿದ ಇತಿಹಾಸವಿದೆ. 1994ರಲ್ಲಿ ಕಾಶ್ಮೀರ ವಿಷಯದ ಕುರಿತು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದಲ್ಲಿ, ಭಾರತವನ್ನು ಟೀಕಿಸುವ ನಿರ್ಣಯವನ್ನು ತಡೆಯಲು ಇರಾನ್ ಸಹಾಯ ಮಾಡಿದ್ದನ್ನು ನಾವು ಮರೆಯುವಂತಿಲ್ಲ ಎಂದು ಸೋನಿಯಾ ಗಾಂಧಿ ತಮ್ಮ ಪತ್ರದಲ್ಲಿ ಬರೆದಿದ್ದಾರೆ. ಈ ಪ್ರದೇಶದಲ್ಲಿ, ಭಾರತ ಸರ್ಕಾರ ತನ್ನ ರಾಜತಾಂತ್ರಿಕ ಪಾತ್ರವನ್ನು ಮುಂದುವರೆಸಬೇಕು ಎಂದು ಮನವಿ ಮಾಡಿರುವ ಸೋನಿಯಾ ಗಾಂಧಿ, ಸ್ಪಷ್ಟವಾಗಿ ಮಾತನಾಡಲು, ಜವಾಬ್ದಾರಿಯುತವಾಗಿ ವರ್ತಿಸಲು ಮತ್ತು ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆಯನ್ನು ಶಮನಗೊಳಿಸಲು ಮತ್ತು ಸಂವಾದಕ್ಕೆ ಮರಳಲು ಲಭ್ಯವಿರುವ ಪ್ರತಿಯೊಂದು ರಾಜತಾಂತ್ರಿಕ ಮಾರ್ಗವನ್ನು ಬಳಸುವಂತೆ, ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

**ಮೋದಿ ಸರ್ಕಾರ ಬಹುತೇಕ ಕೈಬಿಟ್ಟಿದೆ**

**ಈ ಮಾನವೀಯ ದುರಂತದ ಸಂದರ್ಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮೌನ ನಮ್ಮನ್ನು ಅಚ್ಚರಿಗೆ ದೂಡಿದೆ. ಇಸ್ರೇಲ್–ಪ್ಯಾಲೆಸ್ಟೈನ್ ಸಂಘರ್ಷಕ್ಕೆ ಸಂಬಂಧಿಸಿದಂತೆ ಭಾರತ ಹೊಂದಿದ್ದ ದೀರ್ಘಕಾಲದ ತತ್ವಬದ್ಧ ಬದ್ಧತೆಯನ್ನು ಮೋದಿ ಸರ್ಕಾರ ಬಹುತೇಕ ಕೈಬಿಟ್ಟಿದೆ. ಇನ್ನೂ ತಡಮಾಡದೇ ಭಾರತ ಗಾಜಾ ವಿನಾಶದ ವಿರುದ್ಧ, ಇರಾನ್ ವಿರುದ್ಧ ಆಕ್ರಮಣಕಾರಿ ದಾಳಿಯ ವಿರುದ್ಧ ಇಸ್ರೇಲ್‌ಗೆ ತನ್ನ ಅಸಮಾಧಾನವನ್ನು ದಾಖಲಿಸಬೇಕು ಎಂದು ಕಾಂಗ್ರೆಸ್ ನಾಯಕಿ ಒತ್ತಾಯಿಸಿದ್ದಾರೆ.**

**ಇಸ್ರೇಲ್–ಇರಾನ್ ನಡುವಿನ ಸಂಘರ್ಷ ಮಧ್ಯಪ್ರಾಚ್ಯದ ಶಾಂತಿಗೆ ಭಾರೀ ಅಪಾಯ ತಂದಿದೆ, ಈ ವಿಚಾರವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮೌನವನ್ನು ಖಂಡನೀಯ. ಈ ಕುರಿತು ಪತ್ರ ಬರೆದಿರುವ ಅವರು, ಭಾರತ ತಡಮಾಡದೇ ತನ್ನ ಸುದೀರ್ಘ ರಾಜತಾಂತ್ರಿಕ ನಿಲುವು ಮತ್ತು ಬದ್ಧತೆಯನ್ನು ಪ್ರದರ್ಶಿಸುತ್ತಾ, ಇಸ್ರೇಲ್ ವಿರುದ್ಧ ತನ್ನ ಅಸಮಾಧಾನವನ್ನು ದಾಖಲಿಸಬೇಕು**

**– ಸೋನಿಯಾ ಗಾಂಧಿ, ಕಾಂಗ್ರೆಸ್ ನಾಯಕಿ**

## ಸುವರ್ಣರೇಖಾ ನದಿಯಲ್ಲಿ ದಿಢೀರ್ ಪ್ರವಾಹ

**ಬಾಲೇಶ್ವರ:** ನರಯ ಜಾರ್ಖಂಡ್‌ನಲ್ಲಿ ಶನಿವಾರ ಸುರಿದ ಭಾರಿ ಮಳೆಯಿಂದಾಗಿ ಸುವರ್ಣ ರೇಖಾ ನದಿಯಲ್ಲಿ ಹಠಾತ್ ಪ್ರವಾಹ ಉಂಟಾಗಿದೆ. ಇದರಿಂದಾಗಿ ಒಡಿಶಾದ ಬಾಲೇಶ್ವರ ಜಿಲ್ಲೆಯ ಹಳ್ಳಿಗಳಿಗೆ ನೀರು ನುಗ್ಗಿದ್ದು, 50 ಸಾವಿರಕ್ಕೂ ಹೆಚ್ಚು ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಭೋಗ್ರೈ, ಬಲಿಯಾಪಾಲ್, ಬಸ್ತಾ, ಜಲೇಶ್ವರ ಅಧಿಸೂಚಿತ ಪ್ರದೇಶ ಮಂಡಳಿಯ ಮೂರು ಬ್ಲಾಕ್‌ಗಳಲ್ಲಿರುವ 17 ಗ್ರಾಮ ಪಂಚಾಯತ್ ಪ್ರದೇಶಗಳು ಹಠಾತ್ ಪ್ರವಾಹಕ್ಕೆ ಒಳಗಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಸಂಕಷ್ಟದಲ್ಲಿ 50 ಸಾವಿರ ಮಂದಿ**

ಜಿಲ್ಲಾಡಳಿತವು ಪರಿಹಾರ, ರಕ್ಷಣಾ ಕಾರ್ಯಾಚರಣೆಗೆ ಸಜ್ಜಾಗಿದೆ ಎಂದು ಅವರು ಹೇಳಿದ್ದಾರೆ. ತಗ್ಗು ಪ್ರದೇಶ, ಪ್ರವಾಹ ಭೀತಿ ಎದುರಿಸುತ್ತಿರುವ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳಿಗೆ ಜಾಗರೂಕರಾಗಿರಲು ತಿಳಿಸಲಾಗಿದೆ. ಪರಿಸ್ಥಿತಿ ತೀರಾ ಹದಗೆಟ್ಟರೆ ಹತ್ತಿರದ ಆಶ್ರಯ ಶಿಬಿರಗಳಿಗೆ ಸ್ಥಳಾಂತರಗೊಳ್ಳಲು ಸಿದ್ಧರಾಗಿರುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. ಅಗತ್ಯವಿದ್ದರೆ ಜನರನ್ನು ಸ್ಥಳಾಂತರಿಸಲು ಸಿದ್ಧರಾಗಿರುವಂತೆ ಬ್ಲಾಕ್ ಅಭಿವೃದ್ಧಿ ಅಧಿಕಾರಿಗಳು, ತಹಶೀಲ್ದಾರ್‌ಗೆ ಬಾಲೇಶ್ವರ ಜಿಲ್ಲಾಧಿಕಾರಿ ಸೂರ್ಯವಂಶಿ ಮಯೂರ್ ವಿಕಾಸ್ ಅವರು ಸೂಚನೆ ನೀಡಿದ್ದಾರೆ. ಅಲ್ಲದೇ ಅಗತ್ಯ ಔಷಧಿಗಳ ದಾಸ್ತಾನು ಇಟ್ಟುಕೊಳ್ಳಲು ಮುಖ್ಯ ಜಿಲ್ಲಾ ವೈದ್ಯಾಧಿಕಾರಿಗೆ ನಿರ್ದೇಶನ ನೀಡಿದ್ದಾರೆ.

## ಮೂವರು ಅಧಿಕಾರಿಗಳನ್ನು ಹೊಣೆಯಿಂದ ತೆರವುಗೊಳಿಸಲು ಏರ್ ಇಂಡಿಯಾಗೆ ಡಿಜಿಸಿಎ ಆದೇಶ

**ಮುಂಬೈ:** ಅಹಮದಾಬಾದ್ ವಿಮಾನ ದುರಂತದಲ್ಲಿನ ಗಂಭೀರ ಲೋಪಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ಕರ್ತವ್ಯ, ಹಂಚಿಕೆ ಮತ್ತು ಸರದಿ ಪಟ್ಟಿ ಸಿದ್ಧಪಡಿಸುವುದನ್ನೂ ಒಳಗೊಂಡು ಹಿರಿಯ ಉಪಾಧ್ಯಕ್ಷ ಸಹಿತ ಮೂವರು ಅಧಿಕಾರಿಗಳನ್ನು ತಡಮಾಡದೆ ಎಲ್ಲಾ ಕರ್ತವ್ಯಗಳಿಂದ ಬಿಡುಗಡೆ ಮಾಡುವಂತೆ ಏರ್ ಇಂಡಿಯಾ ಸಂಸ್ಥೆಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ ಆದೇಶಿಸಿದೆ. ಡಿಜಿಸಿಎ ಆದೇಶವನ್ನು ತಕ್ಷಣದಿಂದಲೇ ಜಾರಿಗೆ ತರಲಾಗಿದೆ ಎಂದು ಏರ್ ಇಂಡಿಯಾ ಹೇಳಿದೆ. ಅಂತರ್ಗತ ಕಾರ್ಯಾಚರಣೆ ನಿರ್ವಹಣಾ ಕೇಂದ್ರದ ಮೇಲೆ ಕಂಪನಿಯ ಮುಖ್ಯ ನಿರ್ವಹಣಾ ಅಧಿಕಾರಿಯು ಮೇಲ್ವಿಚಾರಣೆ ವಹಿಸಲಿದ್ದಾರೆ.




ವಿಮಾನಗಳ ಕಾರ್ಯಾಚರಣೆಯಲ್ಲಿ ಸುರಕ್ಷತಾ ಪ್ರೋಟೋಕಾಲ್ ಮತ್ತು ಸಾಮಾನ್ಯ ಅಭ್ಯಾಸಗಳನ್ನು ನಿರಂತರವಾಗಿ ನಡೆಸಲು ಏರ್ ಇಂಡಿಯಾ ಬದ್ಧವಾಗಿದೆ ಎಂದು ಕಂಪನಿ ಹೇಳಿದೆ. ಏರ್ ಇಂಡಿಯಾದ ವಿಮಾನ ಮತ್ತು ವಿಮಾನ ಸಿಬ್ಬಂದಿ ನಿರ್ವಹಣಾ ವ್ಯವಸ್ಥೆಯ ಕುರಿತು ಇತ್ತೀಚೆಗೆ ನಡೆಸಿದ ಪರಿಶೀಲನೆ ಸಂದರ್ಭದಲ್ಲಿ ಗಂಭೀರ ಸ್ವರೂಪದ ಉಲ್ಲಂಘನೆಗಳು ಕಂಡು ಬಂದಿವೆ. ಇದರಲ್ಲಿ ಪರವಾನಗಿಯಲ್ಲಿ ಲೋಪ, ಸಿಬ್ಬಂದಿಯ ವಿಶ್ರಾಂತಿ ಮತ್ತಿತರ ಸೌಲಭ್ಯಗಳು ಸಮರ್ಪಕವಾಗಿಲ್ಲ ಎಂದು ವರದಿಯಾಗಿದೆ. ಇಂಥ ಲೋಪಗಳು ಪುನರಾವರ್ತನೆಯಾಗುತ್ತಿದೆ ಎಂದು ಡಿಜಿಸಿಎ ತನ್ನ ಆದೇಶದಲ್ಲಿ ಹೇಳಿತ್ತು.

ವಿಮಾನ ಸಿಬ್ಬಂದಿಯನ್ನು ನಿಯೋಜಿಸುವಲ್ಲಿ ಪದೇ ಪದೇ ವ್ಯವಸ್ಥಿತ ಲೋಪಗಳು ಆಗುತ್ತಿವೆ. ದೂರುಗಳ ನಿರ್ವಹಣೆ, ಆಂತರಿಕ ಲೆಕ್ಕಾಚಾರಗಳಲ್ಲೂ ಲೋಪಗಳಾಗಿವೆ. ಇವುಗಳು ಪುನರಾವರ್ತನೆ ಆದಲ್ಲಿ ಪರವಾನಗಿ ರದ್ದು ಮತ್ತು ಕಾರ್ಯಾಚರಣೆಗೆ ನಿರ್ಬಂಧ ಹೇರಲಾಗುವುದು ಎಂದು ಡಿಜಿಸಿಎ ಎಚ್ಚರಿಸಿತ್ತು. ವಿಮಾನದೊಳಗಿದ್ದ ಸಿಬ್ಬಂದಿ ಸಹಿತ 241 ಪ್ರಯಾಣಿಕರನ್ನೂ ಒಳಗೊಂಡು 270ಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡರು. ವಿಮಾನದಲ್ಲಿದ್ದ ಒಬ್ಬರು ಬದುಕುಳಿದಿದ್ದಾರೆ.

## ಟ್ರಂಪ್‌ಗೆ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಿದ ಪಾಕ್

**ಇಸ್ಲಾಮಾಬಾದ್:** ಭಾರತ ಮತ್ತು ಪಾಕಿಸ್ತಾನ ನಡುವಿನ ಇತ್ತೀಚಿನ ಸಂಘರ್ಷದ ಸಮಯದಲ್ಲಿ ನಿರ್ಣಾಯಕ ರಾಜತಾಂತ್ರಿಕ ಹಸ್ತಕ್ಷೇಪ ಮತ್ತು ಪ್ರಮುಖ ನಾಯಕತ್ವವನ್ನು ಉಲ್ಲೇಖಿಸಿ, ಪಾಕಿಸ್ತಾನ ಸರ್ಕಾರವು 2026 ರ ನೊಬೆಲ್ ಶಾಂತಿ ಪ್ರಶಸ್ತಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಔಪಚಾರಿಕವಾಗಿ ನಾಮನಿರ್ದೇಶನ ಮಾಡಿದೆ. ಭಾರತ– ಪಾಕ್ ಸಂಘರ್ಷದ ಬಳಿಕ ಅಮೆರಿಕ ಭೇಟಿ ನೀಡಿದ ಪಾಕಿಸ್ತಾನ ಸೇನೆಯ ಮುಖ್ಯಸ್ಥ ಅಸೀಮ್ ಮುನೀರ್ ಅವರಿಗೆ ಟ್ರಂಪ್ ಶ್ವೇತಭವನದಲ್ಲಿ ವಿಶೇಷ ಔತಣಕೂಟ ಆಯೋಜಿಸಿದ ಮರುದಿನವೇ ಈ ಅಚ್ಚರಿಯ ಹೇಳಿಕೆ ಹೊರಬಿದ್ದಿದೆ. ಇತ್ತೀಚಿನ ಭಾರತ–ಪಾಕಿಸ್ತಾನ ಬಿಕ್ಕಟ್ಟಿನ ಸಂದರ್ಭದಲ್ಲಿ ಅಧ್ಯಕ್ಷ ಜೆ. ಟ್ರಂಪ್ ಅವರ ನಿರ್ಣಾಯಕ ರಾಜತಾಂತ್ರಿಕ ಹಸ್ತಕ್ಷೇಪ, ಪ್ರಮುಖ ನಾಯಕತ್ವವನ್ನು ಗುರುತಿಸಿ 2026 ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿಗೆ ಅರ್ಹರು ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಸಾಮಾಜಿಕ ಜಾಲ ತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿದೆ.

ಎರಡು ಪರಮಾಣು ಶಕ್ತಿಗಳ ನಡುವಿನ ಉದ್ವಿಗ್ನತೆಯನ್ನು ಕಡಿಮೆ ಮಾಡಲು ತಾನು ಸಹಾಯ ಮಾಡಿದ್ದೇನೆ ಎಂದು ಟ್ರಂಪ್ ಬಹಳ ಹಿಂದಿನಿಂದಲೂ ಹೇಳಿಕೊಂಡಿದ್ದಾರೆ, ಆದರೆ ಭಾರತ ಸರ್ಕಾರ ಈ ಹೇಳಿಕೆಯನ್ನು ಹಲವಾರು ಬಾರಿ ತಳ್ಳಿಹಾಕಿದೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದ ಸಂದರ್ಭದಲ್ಲಿ ರಾಜತಾಂತ್ರಿಕ ಮಧ್ಯಪ್ರವೇಶ ಜಮ್ಮು ಕಾಶೀರದ ಪಹಲ್ಗಾಮ್‌ನಲ್ಲಿ 26 ಮಂದಿ ಪ್ರವಾಸಿಗರನ್ನು ಉಗ್ರರು ಹತ್ಯೆ ಮಾಡಿದ ಹಿನ್ನೆಲೆಯಲ್ಲಿ ಉಭಯ ದೇಶಗಳ ನಡುವೆ ಉದ್ವಿಗ್ನ ವಾತಾವರಣ ನಿರ್ಮಾಣವಾಗಿ ಹಲವು ದಿನಗಳ ಕಾಲ ಗಡಿಯಾಚೆಗೆ ಶೆಲ್ ದಾಳಿ ನಿರಂತರವಾಗಿ ನಡೆಯುತ್ತಿತ್ತು. ಈ ಹಂತದಲ್ಲಿ ಎರಡೂ ದೇಶಗಳು ದಿಢೀರನೇ ಶಾಂತಿ ಒಪ್ಪಂದಕ್ಕೆ ಬಂದಿದ್ದವು. ಪಾಕಿಸ್ತಾನ ಸರ್ಕಾರ 2026ರ ನೊಬೆಲ್ ಶಾಂತಿ ಪ್ರಶಸ್ತಿಗೆ ಡೊನಾಲ್ಡ್ ಜೆ.ಟ್ರಂಪ್ ಅವರ ಹೆಸರನ್ನು ಶಿಫಾರಸ್ಸು ಮಾಡುತ್ತಿದೆ.



**ಸಾರ್ವಜನಿಕವಾಗಿ ಪ್ರತಿಕ್ರಿಯಿಸಿಲ್ಲ**

**ನೊಬೆಲ್ ಶಾಂತಿ ಪ್ರಶಸ್ತಿಯನ್ನು ವಾರ್ಷಿಕವಾಗಿ ನಾರ್ವೇಜಿಯನ್ ನೊಬೆಲ್ ಸಮಿತಿಯು ನೀಡುತ್ತದೆ, ಇದು ಶಾಂತಿಯನ್ನು ಉತ್ತೇಜಿಸಲು ಮತ್ತು ಸಂಘರ್ಷಗಳನ್ನು ಪರಿಹರಿಸಲು ಅವರ ಪ್ರಯತ್ನಗಳ ಆಧಾರದ ಮೇಲೆ ಪ್ರಶಸ್ತಿ ವಿಜೇತರನ್ನು ಆಯ್ಕೆ ಮಾಡುತ್ತದೆ. ಟ್ರಂಪ್ ಅವರ ಉಮೇದುವಾರಿಕೆಯ ಬಗ್ಗೆ ಸಮಿತಿಯು ಎಂದಿಗೂ ಸಾರ್ವಜನಿಕವಾಗಿ ಪ್ರತಿಕ್ರಿಯಿಸಿಲ್ಲ.**

ಭಾರತ–ಪಾಕ್ ಸಂಘರ್ಷದ ಸಂದರ್ಭದಲ್ಲಿ ಟ್ರಂಪ್ ವಹಿಸಿದ ಪ್ರಮುಖ ರಾಜತಾಂತ್ರಿಕ ಹಸ್ತಕ್ಷೇಪ ಮತ್ತು ಪರಿವರ್ತನಾಶೀಲ ನಾಯಕತ್ವ ಪ್ರದರ್ಶಿಸಿದ್ದನ್ನು ಗುರುತಿಸಿ ಪಾಕಿಸ್ತಾನ ಸರ್ಕಾರವು 2026ರ ನೊಬೆಲ್ ಶಾಂತಿ ಪ್ರಶಸ್ತಿಗೆ ಡೊನಾಲ್ಡ್ ಜೆ.ಟ್ರಂಪ್ ಅವರ ಹೆಸರನ್ನು ಅಧಿಕೃತವಾಗಿ ಶಿಫಾರಸ್ಸು ಮಾಡುತ್ತಿದೆ ಎಂದು ಸ್ಪಷ್ಟಪಡಿಸಿದೆ.

## ಎಲೆಕ್ಟ್ರಾನಿಕ್ ದತ್ತಾಂಶ ಅಳಿಸಲು ಸೂಚನೆ ಇಸಿ ವಿರುದ್ಧ ಮತ್ತೆ ಗುಡುಗಿದ ರಾಹುಲ್

**ನವದೆಹಲಿ:** ಉತ್ತರಿಸಬೇಕಾದವರು ಸಾಕ್ಷಿ ನಾಶ ಮಾಡಲು ಹೊರಟಿದ್ದಾರೆ ಎಂದು ಎಲೆಕ್ಟ್ರಾನಿಕ್ ದತ್ತಾಂಶ ಅಳಿಸುವ ಚುನಾವಣಾ ಆಯೋಗದ ನಿರ್ಧಾರದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.

ಚುನಾವಣೆ ಪ್ರಕ್ರಿಯೆಗೆ ಸಂಬಂಧಿಸಿದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ, ವೆಬ್‌ಕಾಸ್ಟಿಂಗ್ ಮತ್ತು ಇತರ ವಿಡಿಯೋಗಳನ್ನು ಚುನಾವಣೆ ನಡೆದ 45 ದಿನಗಳ ಬಳಿಕ ಅಳಿಸಿ ಹಾಕುವಂತೆ ಚುನಾವಣಾ ಆಯೋಗವು ತನ್ನ ಎಲ್ಲಾ ರಾಜ್ಯ ಚುನಾವಣಾ ಅಧಿಕಾರಿಗಳಿಗೆ ಸೂಚಿಸಿದೆ.

ಈ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ರಾಹುಲ್, ಮತದಾರರ ಪಟ್ಟಿ ಕೇಳಿದರೆ, ಅದು ಮೆಶಿನ್ ರಿಡೇಬಲ್ ಫಾರ್ಮ್ಯಾಟ್‌ನಲ್ಲಿ ಇರುವುದರಿಂದ ಒದಗಿಸಲು ಸಾಧ್ಯವಿಲ್ಲ ಎಂದು ಆಯೋಗ ಹೇಳಿದೆ. ಸಿಸಿಟಿವಿ ದೃಶ್ಯಾವಳಿ ಕೇಳಿದರೆ, ಅದನ್ನು ಮರೆಮಾಚಲು ಕಾನೂನನ್ನೇ ಬದಲಿಸಿದೆ. ಇನ್ನು ಫೋಟೊ ಮತ್ತು ವಿಡಿಯೋ ಸಾಕ್ಷಿಗಳನ್ನು 1 ವರ್ಷ ಕಾಪಿಟ್ಟುಕೊಳ್ಳುವ ಬದಲು ಈಗ 45 ದಿನಗಳಲ್ಲಿ ಅಳಿಸಿ ಹಾಕಲು ಹೊರಟಿದೆ ಎಂದು ಹೇಳಿದ್ದಾರೆ.

ನನ್ನ ಆರೋಪಗಳಿಗೆ ಯಾರು ಉತ್ತರಿಸಬೇಕಿತ್ತೊ ಅವರೇ ಸಾಕ್ಷಿಗಳನ್ನು ನಾಶ ಮಾಡಲು ಹೊರಟಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಮ್ಯಾಚ್ ಫಿಕ್ಸಿಂಗ್ ಆಗಿರುವುದು ಇದರಿಂದ ಸ್ಪಷ್ಟವಾಗುತ್ತಿದೆ. ಚುನಾವಣಾ ಅಕ್ರಮಗಳು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂದು ಹೇಳಿದ್ದಾರೆ. ಮಹಾರಾಷ್ಟ್ರದ ಚುನಾವಣೆಯಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆದಿದೆ ಎಂದು ಆರೋಪಿಸಿದ್ದ ರಾಹುಲ್, ತಮ್ಮ ಆರೋಪಗಳಿಗೆ ಉತ್ತರ ನೀಡುವಂತೆ ಚುನಾವಣಾ ಆಯೋಗವನ್ನು ಕೇಳಿದ್ದರು. ಅಲ್ಲದೇ ಮುಂಬರುವ ಬಿಹಾರ ಚುನಾವಣೆಯಲ್ಲಿಯೂ ಮ್ಯಾಚ್ ಫಿಕ್ಸಿಂಗ್ ನಡೆಯುವ ಸಾಧ್ಯತೆಯಿದೆ ಎಂದಿದ್ದರು. ರಾಹುಲ್ ಆರೋಪಗಳನ್ನು ಚುನಾವಣಾ ಆಯೋಗ ಅಲ್ಲಗೆಳೆದಿದೆ.




### ಯೋಗದ ಮೇಲಿನ ಒಲವುಗೆ ಹೆಸರುವಾಸಿಯಾದ 76 ವರ್ಷದ ದೊರೆ

# ಜಾಗತಿಕ ಒಗ್ಗಟ್ಟಿಗೆ ಯೋಗ ಸಹಕಾರಿ: ಕಿಂಗ್ ಚಾರ್ಲ್ಸ್

**ಲಂಡನ್:** ಲಂಡನ್‌ನಲ್ಲಿರುವ ಭಾರತದ ಹೈಕಮಿಷನ್ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನವನ್ನು ಗುರುತಿಸಲು ತಜ್ಞರ ನೇತೃತ್ವದ ಆಸನಗಳು ಮತ್ತು ಉಸಿರಾಟದ ತಂತ್ರಗಳ ಸರಣಿಯಲ್ಲಿ ಭಾಗವಹಿಸಲು ಲಂಡನ್‌ನ ಸ್ಟ್ರಾಂಡ್‌ನಲ್ಲಿರುವ ಐಕಾನಿಕ್ ಚೌಕದಲ್ಲಿ ನೂರಾರು ಜನರು ಸೇರಿದ್ದರು. ಯುಕೆಯಲ್ಲಿ ಭಾರತೀಯ ಹೈಕಮಿಷನರ್ ವಿಕ್ರಮ್ ದೊರೈಸ್ವಾಮಿ ಅವರು ಇಲ್ಲಿನ ಬಿಸಿಲಿನ ವಾತಾವರಣದಲ್ಲಿ ಯೋಗ ದಿನದ 10ನೇ ವಾರ್ಷಿಕೋತ್ಸವವನ್ನು ಆಚರಿಸುವ ಪ್ರಕ್ರಿಯೆಗಳನ್ನು ರಾಜ ಚಾರ್ಲ್ಸ್ ರ ವಿಶೇಷ ಸಂದೇಶವನ್ನು ಓದುವ ಮೂಲಕ ಉದ್ಘಾಟಿಸಿದರು. ಯೋಗದ ಮೇಲಿನ ಒಲವುಗೆ ಹೆಸರುವಾಸಿಯಾದ 76 ವರ್ಷದ ದೊರೆ, ಈ ವಾರ್ಷಿಕ ಆಚರಣೆಯು ಏಕತೆ, ಸಹಾನುಭೂತಿ ಮತ್ತು ಯೋಗಕ್ಷೇಮದ ಜಾಗತಿಕ ತತ್ವಗಳನ್ನು ಉತ್ತೇಜಿಸಿತು ಎಂದು ಹೇಳಿದರು. ಈ ವರ್ಷದ ದಿನದ ವಿಷಯ, ಒಂದು ಭೂಮಿಗಾಗಿ ಒಂದು ಆರೋಗ್ಯ, ಪ್ರಸ್ತುತ, ಭವಿಷ್ಯದ ಪೀಳಿಗೆಗೆ ಸಂತೋಷದ ಮತ್ತು ಆರೋಗ್ಯಕರ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಜಗತ್ತು ಒಟ್ಟಾಗಿ ಬರುವುದು ಎಷ್ಟು ಮುಖ್ಯ ಎಂಬುದನ್ನು ನಮಗೆ ನೆನಪಿಸುತ್ತದೆ ಎಂದು ಬಕಿಂಗ್‌ಹ್ಯಾಮ್ ಅರಮನೆಯಿಂದ ರಾಜನ ಸಂದೇಶವನ್ನು ಓದಲಾಯಿತು. ಅಂತರರಾಷ್ಟ್ರೀಯ ಯೋಗ ದಿನದಂತಹ ಉಪಕ್ರಮಗಳು ಅನೇಕರಿಗೆ ಬಹಳ ಮುಖ್ಯವಾದ ಅಭ್ಯಾಸ, ತತ್ವಶಾಸ್ತ್ರವನ್ನು ಆಚರಿಸಲು ಅವಕಾಶವನ್ನು ಒದಗಿಸುತ್ತವೆ. ವರ್ಷದಿಂದ ವರ್ಷಕ್ಕೆ, ಯುನೈಟೆಡ್ ಕಿಂಗ್‌ಡಂನಾದ್ಯಂತ ಯೋಗವು ಜನಪ್ರಿಯತೆಯನ್ನು ಹೆಚ್ಚಿಸುತ್ತಿದೆ, ನಮ್ಮ ದೇಶದಲ್ಲಿ ಲಕ್ಷಾಂತರ ಜನರು ಅದರ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ.



**ವ್ಯಾಪಾರ ಒಪ್ಪಂದಕ್ಕೆ ಸಹಿ**

ಯೋಗವು ಸಾರ್ವತ್ರಿಕ ಭಾಷೆಗೆ ಮಾತನಾಡುವ ವಿಷಯ, ಮಾನವ ಅನುಭವದ ಸಾಮಾನ್ಯತೆಯ ಕಲ್ಪನೆ, ನಾವೆಲ್ಲರೂ, ನಾವು ಎಲ್ಲಿಂದ ಬಂದರೂ, ನಾವು ಹೇಗೆ ಕಾಣುತ್ತೇವೆ, ನಾವು ಹೇಗೆ ಪ್ರಾರ್ಥಿಸುತ್ತೇವೆ, ನಾವು ಏನು ಮಾತನಾಡುತ್ತೇವೆ, ನಮ್ಮ ದೇಹಕ್ಕೆ ಒಂದೇ ರೀತಿಯ ಗುಣಪಡಿಸುವಿಕೆಯ ಅಗತ್ಯವಿದೆ ಎಂದು ಹೈಕಮಿಷನರ್ ಹೇಳಿದರು. ಈ ವರ್ಷದ ಕಾರ್ಯಕ್ರಮವನ್ನು ಇಂಡಿಯಾ ಹೌಸ್ ಬಳಿ ಇರುವ ಕಿಂಗ್ಸ್ ಕಾಲೇಜ್ ಲಂಡನ್‌ನ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದೆ. ಸಮುದಾಯ, ಯೋಗ ಕ್ಷೇಮ, ಆಂತರಿಕ ಶಾಂತತೆ, ಯೋಗ ಪ್ರತಿನಿಧಿಸುವ ಎಲ್ಲದರ ಮೌಲ್ಯಗಳು ಎಂದು ಕಿಂಗ್ಸ್ ಕಾಲೇಜ್ ಲಂಡನ್‌ನ ಆರೋಗ್ಯ, ಜೀವ ವಿಜ್ಞಾನಗಳ ಹಿರಿಯ ಉಪಾಧ್ಯಕ್ಷ ಗ್ರಹಾಂ ಲಾರ್ಡ್ ಹೇಳಿದರು. ಯುಕೆಯಿಂದ ಡ್ರಮ್ಸ್ ಆಫ್ ಇಂಡಿಯಾ ಸಂಗೀತ ವಿಭಾಗದೊಂದಿಗೆ ಪ್ರಾರಂಭವಾದ ಈ ಸಭೆಯನ್ನು ಸೂರ್ಯ ನಮಸ್ಕಾರದ ಮೂಲಕ ಮುನ್ನಡೆಸಲಾಯಿತು, ನಂತರ ಅಯ್ಯಂಗಾರ್ ಯೋಗದ ಪರಿಚಯವನ್ನು ಮಾಡಲಾಯಿತು. ಹಾರ್ಟ್‌ಫುಲ್ ನೆಸ್ ಯುಕೆ, ಆರ್ಟ್ ಆಫ್ ಲಿವಿಂಗ್, ಇಶಾ ಫೌಂಡೇಶನ್‌ನ ತಜ್ಞರು ನಂತರ ಪ್ರೇಕ್ಷಕರನ್ನು ಉಸಿರಾಟದ ತಂತ್ರಗಳು ಮತ್ತು ಮೈಂಡ್‌ಫುಲ್‌ನೆಸ್ ಅಭ್ಯಾಸಗಳ ಮೂಲಕ ಕರೆದೊಯ್ದರು. ಈ ಕಾರ್ಯಕ್ರಮವು ಸಾಮರಸ್ಯದ ಯೋಗ ಮತ್ತು ನೃತ್ಯ ಪ್ರದರ್ಶನವಾದ ಸಮಗಮ್ ನೊಂದಿಗೆ ಮುಕ್ತಾಯವಾಯಿತು.

**ಸಮುದಾಯಗಳಲ್ಲಿ ಯೋಗಕ್ಷೇಮ, ಒಗ್ಗಟ್ಟಿನ ಪ್ರಜ್ಞೆಯನ್ನು ಬೆಳೆಸುತ್ತದೆ**

**ಯೋಗವು ಯಾರಾದರೂ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸಲು ಅನುವು ಮಾಡಿಕೊಡುವ ಪ್ರಬಲ ಸಾಧನವಾಗಿದೆ ಮತ್ತು ಸಮುದಾಯಗಳಲ್ಲಿ ಯೋಗಕ್ಷೇಮ ಮತ್ತು ಒಗ್ಗಟ್ಟಿನ ಪ್ರಜ್ಞೆಯನ್ನು ಬೆಳೆಸುತ್ತದೆ ಎಂದು ಅವರು ಹೇಳಿದರು. ವಿಶ್ವಸಂಸ್ಥೆಯು 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಡಿಸಿದ ನಿರ್ಣಯವನ್ನು ಒಂದು ಕಲ್ಪನೆಯಾಗಿ ಅಂಗೀಕರಿಸಿದ ನಂತರ ಒಂದು ದಶಕಕ್ಕೂ ಹೆಚ್ಚು ಕಾಲ ಹೇಗೆ ಕಳೆದಿದೆ ಎಂಬುದನ್ನು ದೊರೈಸ್ವಾಮಿ ಪ್ರತಿಬಿಂಬಿಸಿದರು, ಇದು ಎಲ್ಲಾ ಪಾಲುದಾರ ರಾಷ್ಟ್ರಗಳ ಬೆಂಬಲದೊಂದಿಗೆ ಅಗಾಧ ಜನಪ್ರಿಯ ಉಪಕ್ರಮವಾಗಿದೆ.**

## ಮಿನಿ ನ್ಯೂಸ್

### ಬಾಲಕಿಯನ್ನು ಎಳೆದೊಯ್ದ ಚಿರತೆ

**ಚೆನ್ನೈ:** ತಮಿಳುನಾಡಿನಲ್ಲಿ 4 ವರ್ಷದ ಬಾಲಕಿಯನ್ನು ಚಿರತೆ ಎಳೆದೊಯ್ದಿದ್ದು, ಹುಡುಕಾಟ ನಡೆಯುತ್ತಿದೆ. ಆದರೆ, ಇದುವರೆಗೂ ಮಗುವನ್ನು ಎಳೆದೊಯ್ದ ಚಿರತೆ ಎಲ್ಲಿದೆ ಎಂಬ ಬಗ್ಗೆ ಸುಳಿವು ದೊರೆತಿಲ್ಲ. ನಿನ್ನೆ ಸಂಜೆ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಲ್ಲಿ ಚಿರತೆಯೊಂದು ದಾಳಿ ಮಾಡಿ ನಾಲ್ಕು ವರ್ಷದ ಬಾಲಕಿಯನ್ನು ಆಕೆಯ ಮನೆಯಿಂದ ಎಳೆದೊಯ್ದಿದೆ ಎಂದು ವರದಿಯಾಗಿದೆ. ರೋಶ್ನಿ ಎಂದು ಗುರುತಿಸಲಾದ ಅಪ್ರಾಪ್ತ ಬಾಲಕಿ ವಾಲ್ಪರೈ ಬೆಟ್ಟದ ಪಟ್ಟಣದಲ್ಲಿರುವ ತನ್ನ ಮನೆಯ ಹೊರಗೆ ಆಟವಾಡುತ್ತಿದ್ದಾಗ ಈ ಘಟನೆ ನಡೆದಿದೆ. ಚಿರತೆ ಆಕೆಯನ್ನು ಎತ್ತಿ ಹತ್ತಿರದ ಅರಣ್ಯ ಪ್ರದೇಶಕ್ಕೆ ಎತ್ತೊಯ್ದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯ ನಂತರ ಅರಣ್ಯ ಅಧಿಕಾರಿಗಳು ಮತ್ತು ಪೊಲೀಸರು ರಾತ್ರಿಯಿಡೀ ತೀವ್ರ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದಾರೆ. ಸರ್ಚ್‌ಲೈಟ್‌ಗಳು, ಡ್ರೋನ್‌ಗಳು, ಸ್ನಿಫರ್ ನಾಯಿಗಳನ್ನು ಹೊಂದಿರುವ ತಂಡಗಳು ದಟ್ಟವಾದ, ಗುಡ್ಡಗಾಡು ಪ್ರದೇಶವನ್ನು ಜಗಳವಾಡುತ್ತಿರುವುದನ್ನು ದೃಶ್ಯಗಳು ತೋರಿಸುತ್ತವೆ. ಅರಣ್ಯ ಅಧಿಕಾರಿಗಳು, ಪೊಲೀಸರು ಜಂಟಿಯಾಗಿ ಈ ಪ್ರದೇಶವನ್ನು ಶೋಧಿಸುತ್ತಿದ್ದಾರೆ. ಈ ದಾಳಿಯು ಸ್ಥಳೀಯ ನಿವಾಸಿಗಳಲ್ಲಿ ವ್ಯಾಪಕ ಭೀತಿಯನ್ನು ಹುಟ್ಟುಹಾಕಿದೆ. ತಮಿಳುನಾಡಿನ ಬಯಲು, ಬೆಟ್ಟದ ಜಿಲ್ಲೆಗಳಲ್ಲಿನ ಅರಣ್ಯ ಪ್ರದೇಶಗಳು ಮಾನವ–ಪ್ರಾಣಿ ಸಂಘರ್ಷದ ತಾಣಗಳಾಗಿವೆ, ವಿಶೇಷವಾಗಿ ಚಿರತೆಗಳು, ಆನೆಗಳನ್ನು ಒಳಗೊಂಡಿವೆ.ಹೆಚ್ಚುತ್ತಿರುವ ಕಳವಳಗಳೊಂದಿಗೆ, ತಮಿಳುನಾಡು ಅರಣ್ಯ ಇಲಾಖೆಯು ಸೂಕ್ಷ್ಮ ವಲಯಗಳಲ್ಲಿ ವನ್ಯಜೀವಿಗಳ ಚಲನವಲನಗಳನ್ನು ಪತ್ತೆಹಚ್ಚಲು, ನಿವಾಸಿಗಳಿಗೆ ನೈಜ ಸಮಯದಲ್ಲಿ ಎಚ್ಚರಿಕೆ ನೀಡಲು ಆಧಾರಿತ ಕ್ಯಾಮೆರಾ ಎಚ್ಚರಿಕೆ ವ್ಯವಸ್ಥೆಗಳನ್ನು ಸ್ಥಾಪಿಸುತ್ತಿದೆ. ಮಗುವನ್ನು ಪತ್ತೆಹಚ್ಚಲು ಮತ್ತು ಚಿರತೆಯನ್ನು ಸುರಕ್ಷಿತವಾಗಿ ಪತ್ತೆಹಚ್ಚಲು ಅಧಿಕಾರಿಗಳು ತಮ್ಮ ಪ್ರಯತ್ನಗಳನ್ನು ತೀವ್ರಗೊಳಿಸುವಾಗ ಶಾಂತವಾಗಿರಲು ಮನವಿ ಮಾಡುತ್ತಿದ್ದಾರೆ. ಕತ್ತಲಾದ ನಂತರ ಮನೆಯೊಳಗೆ ಇರಲು, ಮಕ್ಕಳನ್ನು ಮೇಲ್ವಿಚಾರಣೆಯಲ್ಲಿಡಲು ನಿವಾಸಿಗಳಿಗೆ ಸೂಚಿಸಲಾಗಿದೆ.


### ಇರಾನ್‌ನಿಂದ ಒಟ್ಟು 517 ಭಾರತೀಯರು ತಾಯ್ನಾಡಿಗೆ: ಎಂಇಎ

**ನವದೆಹಲಿ:** ಆಪರೇಷನ್ ಸಿಂಧು ಕಾರ್ಯಾಚರಣೆಯಲ್ಲಿ 500ಕ್ಕೂ ಅಧಿಕ ಭಾರತೀಯರು ತಾಯ್ನಾಡಿಗೆ ಮರಳಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಶನಿವಾರ ತಿಳಿಸಿದೆ. ಆಪರೇಷನ್ ಸಿಂಧು ಅಡಿ ಸ್ಥಳಾಂತರಗೊಳಿಸಿದ ಮಾಹಿತಿಯನ್ನು ಎಂಇಎ ಎಕ್ಸ್ ನಲ್ಲಿ ಹಂಚಿಕೊಂಡಿದೆ. ಇಸ್ರೇಲ್ ಜೊತೆಗಿನ ಸಂಘರ್ಷದಿಂದಾಗಿ ಇರಾನ್‌ನಲ್ಲಿರುವ ಭಾರತೀಯರನ್ನು ಸ್ಥಳಾಂತರ ನಡೆಸುವ ಕಾರ್ಯ ನಡೆಯುತ್ತಿದ್ದು, ವಿದ್ಯಾರ್ಥಿಗಳು ಸೇರಿ ಹಲವು ಭಾರತೀಯರು ಶುಕ್ರವಾರ ತಡರಾತ್ರಿ ಹಾಗೂ ಶನಿವಾರ ಮುಂಜಾನೆ ದೆಹಲಿಗೆ ಬಂದಿಳಿದಿದ್ದಾರೆ.

ಇರಾನ್‌ನಲ್ಲಿ ಸಿಲುಕಿಕೊಂಡಿರುವ ಭಾರತೀಯರನ್ನು ಕರೆತರಲು ಸರ್ಕಾರ ಬುಧವಾರ ಆಪರೇಷನ್ ಸಿಂಧು ಘೋಷಣೆ ಮಾಡಿತ್ತು. ಆಪರೇಷನ್ ಸಿಂಧು ವಿಮಾನ ನಾಗರಿಕರನ್ನು ತವರಿಗೆ ಕರೆತಂದಿದೆ. ಧಾರ್ಮಿಕ ಯಾತ್ರಿಕರು ಹಾಗೂ ವಿದ್ಯಾರ್ಥಿಗಳು ಸೇರಿ ಭಾರತದ ನಾಗರಿಕರನ್ನು ಚಾರ್ಟಡ್ ವಿಮಾನದಲ್ಲಿ ಕರೆತರಲಾಗಿದೆ. ಜೂನ್ 20 ರಾತ್ರಿ 11.30ಕ್ಕೆ ವಿಮಾನ ದೆಹಲಿಗೆ ಬಂದಿಳಿಯಿತು. ಅವರನ್ನು ವಿದೇಶಾಂಗ ಇಲಾಖೆಯ ಕಾರ್ಯದರ್ಶಿ ಅರುಣ್ ಚಟರ್ಜಿ ಬರಮಾಡಿ ಕೊಂಡರು ಎಂದು ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಎಕ್ಸ್‌ನಲ್ಲಿ ಮಾಹಿತಿ ನೀಡಿದ್ದಾರೆ.

### ಸಿನಿಮಾ ಇನ್ನಷ್ಟೇ ಆರಂಭವಾಗಬೇಕಿದೆ ಚುನಾವಣೆ ಕುರಿತು ಗಡ್ಕರಿ ಸುಳಿವು

**ನಾಗ್ಪುರ:** ಕಳೆದ 11 ವರ್ಷಗಳಲ್ಲಿ ಏನು ನೀವು ನೋಡಿದ್ದೀರೋ ಅವೆಲ್ಲವೂ ನ್ಯೂಸ್ ರೀಲ್. ನಿಜವಾದ ಚಿತ್ರ ಇನ್ನಷ್ಟೇ ಆರಂಭವಾಗಬೇಕಿದೆ ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. 2029ರ ಚುನಾವಣೆಯಲ್ಲಿ ತಮ್ಮ ಪಾತ್ರ ಏನಾಗಿರಲಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಪಕ್ಷವು ಅದರ ಕಾರ್ಯಕರ್ತರಿಗೆ ಯಾವ ಜವಾಬ್ದಾರಿ ನೀಡಬೇಕು ಎಂದು ನಿರ್ಧರಿಸಲಿದೆ. ಅದಕ್ಕೆ ತಕ್ಕಂತೆ ನಾನು ಕೆಲಸ ಮಾಡಲಿದ್ದೇನೆ ಎಂದಿದ್ದಾರೆ. ನಾನು ಎಂದಿಗೂ ನನ್ನ ರಾಜಕೀಯ ಬಯೋಡಾಟಾವನ್ನು ಪ್ರಕಟಿಸಿದವನಲ್ಲ ಅಥವಾ ವಿಮಾನ ನಿಲ್ದಾಣದಲ್ಲಿ ಭವ್ಯ ಸ್ವಾಗತ ಪಡೆಯಲು ದೊಡ್ಡ ಕಾರ್ಯಕರ್ತರ ಪಡೆ ಕಟ್ಟಿಕೊಂಡವನಲ್ಲ. ನನ್ನ ಉದ್ದೇಶವಿರುವುದು ಸಂದರ್ಭದಲ್ಲಿ ರೈತರ ಆತ್ಮಹತ್ಯೆ ತಡೆಯುವ ಕಡೆ ಮಾತ್ರ. ರಸ್ತೆ ಕಾಮಗಾರಿಗಿಂತ ಕೃಷಿ ಮತ್ತು ಸಮಾಜ ಕಾರ್ಯಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಬಯಸುತ್ತೇನೆ ಎಂದು ಗಡ್ಕರಿ ಹೇಳಿದರು. ಭಾರತದ ತಲಾದಾಯ ಜಗತ್ತಿನ ಮೊದಲ 10 ರಾಷ್ಟ್ರಗಳ ಪಟ್ಟಿಯಲ್ಲಿವಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ನಿತಿನ್ ಗಡ್ಕರಿ, ಇದಕ್ಕೆ ದೇಶದ ಜನಸಂಖ್ಯೆಯನ್ನೇ ದೂಷಿಸಬೇಕು. ಜನಸಂಖ್ಯೆ ನಿಯಂತ್ರಣ ಮಸೂದೆಯನ್ನು ವಿಸ್ತರಿಸಲು ಬೆಂಬಲಿಸಬೇಕಿದೆ. ಇದು ಯಾವುದೇ ಧರ್ಮ ಅಥವಾ ಭಾಷೆಯ ವಿಷಯವಲ್ಲ. ಇದು ದೇಶದ ಆರ್ಥಿಕ ಸಮಸ್ಯೆ. ಎಷ್ಟೇ ಅಭಿವೃದ್ಧಿ ಕೆಲಸ ಮಾಡಿದರೂ, ಅದರ ಫಲಿತಾಂಶ ಕಾಣಿಸುತ್ತಿಲ್ಲ. ಇವೆಲ್ಲದಕ್ಕೂ ಹೆಚ್ಚುತ್ತಿರುವ ಜನಸಂಖ್ಯೆಯೇ ಕಾರಣ ಎಂದರು. 2014ರಿಂದ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಹಲವು ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ ಎಂದು ಗಡ್ಕರಿ ಅವರು ಸಂದರ್ಶನದಲ್ಲಿ ಹೇಳಿದ್ದಾರೆ.



### ಸುಲಿಗೆ ಪ್ರಕರಣ: ಬಿಆರ್‌ಎಸ್ ಶಾಸಕ ಕೌಶಿಕ್ ರೆಡ್ಡಿ ಬಂಧನ

**ಹೈದರಾಬಾದ್:** ಸುಲಿಗೆ ಪ್ರಕರಣದಲ್ಲಿ ಬಿಆರ್‌ಎಸ್ ಶಾಸಕ ಕೌಶಿಕ್ ರೆಡ್ಡಿ ಅವರನ್ನು ವಾರಂಗಲ್ ಪೊಲೀಸರು ಶನಿವಾರ ಮುಂಜಾನೆ ಬಂಧಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.ಆರ್‌ಜಿಐ ವಿಮಾನ ನಿಲ್ದಾಣದಲ್ಲಿ ಕೌಶಿಕ್ ರೆಡ್ಡಿ ಅವರನ್ನು ವಶಕ್ಕೆ ಪಡೆಯಲಾಯಿತು ಎಂದೂ ಅವರು ತಿಳಿಸಿದ್ದಾರೆ. ಕೌಶಿಕ್ ರೆಡ್ಡಿ ಅವರು ಕ್ವಾರಿ ಮಾಲೀಕರನ್ನು ಬೆದರಿಸಿ 25 ಲಕ್ಷ ಪಡೆದಿದ್ದು, 50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂಬ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

ಪಕ್ಷದ ಶಾಸಕನ ಬಂಧನವಾಗಿರುವುದರ ಬಗ್ಗೆ ಪ್ರತಿಕ್ರಿಯಿಸಿರುವ ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್, ಮುಖ್ಯಮಂತ್ರಿ ರೇವಂತ್ ರೆಡ್ಡಿ ಸೇರಿದಂತೆ ಸಚಿವರು, ಕಾಂಗ್ರೆಸ್ ನಾಯಕರ ಭ್ರಷ್ಟಾಚಾರ, ಅಕ್ರಮಗಳನ್ನು ಪ್ರಶ್ನಿಸಿದ್ದಕ್ಕೆ ಕೌಶಿಕ್ ರೆಡ್ಡಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದು ಕಿಡಿಕಾರಿದ್ದಾರೆ.



## ಅತಂತ್ರ ಸ್ಥಿತಿಯಲ್ಲಿ ಥಗ್ ಲೈಫ್ ಕರ್ನಾಟಕ ವಿತರಕ

ನಟ ಕಮಲ್ ಹಾಸನ್ ಬಾಯಿಮುಚ್ಚಿಕೊಂಡು ಸುಮ್ಮನಿದ್ದರೆ, ಥಗ್ ಲೈಫ್ ಸೋಲುತ್ತಿತ್ತೋ, ಗೆಲ್ಲುತ್ತಿತ್ತೋ ಬೇರೆ ಮಾತು. ಆದರೆ ಒಬ್ಬ ವಿತರಕನನ್ನು ಅಡ್ಡಕತ್ತರಿಗೆ ಸಿಲುಕಿಸಲಿಕ್ಕೆ ಹೋಗುತ್ತಿರಲಿಲ್ಲ.

ತಿಂಗಳ ಮುಂಚೆಯೇ ಕೋಟಿ ಕೋಟಿ ಹಣ ಕೊಟ್ಟು, ಕರ್ನಾಟಕದ ವಿತರಣಾ ಹಕ್ಕು ಪಡೆದಿರುವ ವೆಂಕಟ್ ಇದೀಗ ಇಕ್ಕಟ್ಟಿಗೆ ಸಿಲುಕಿದ್ದಂತೂ ಸತ್ಯ. ಥಗ್ ಲೈಫ್ ಸಾಕಷ್ಟು ಕುತೂಹಲ ಮೂಡಿಸಿದ್ದ ಚಿತ್ರ. ಹಲವು ವರ್ಷಗಳ ನಂತರ ಕಮಲ್ ಮತ್ತು ಮಣಿರತ್ನಂ ಒಂದಾಗಿ ಕೆಲಸ ಮಾಡಿದ್ದರು. ಹಾಗಾಗಿ ಸಹಜವಾಗಿಯೇ ಕ್ರೇಜ್ ಕ್ರಿಯೇಟ್ ಆಗಿತ್ತು.

ಕರ್ನಾಟಕದಲ್ಲಿ ವಿತರಿಸಲು ಮುಂಗಡವಾಗಿ ವಿತರಕರು ಅಂದಾಜು ಆರು ಕೋಟಿ ರೂಪಾಯಿ ಕೊಟ್ಟು ಖರೀದಿಸಿದ್ದರಂತೆ. ಚೆನ್ನಾಗಿ ದುಡ್ಡು ಮಾಡಬೇಕು ಅಂತ ಹೋದವರು, ಈಗ ಕೈಕೈ ಹಿಸುಕೊಳ್ಳುತ್ತಿದ್ದಾರೆ. ಥಗ್ ಲೈಫ್ ಹಾಡುಗಳ ಬಿಡುಗಡೆ ಸಮಾರಂಭದಲ್ಲಿ ಕಮಲ್, ಕನ್ನಡ ಭಾಷೆಯ ಬಗ್ಗೆ ಹಗುರವಾಗಿ ಮಾತಾಡಿದ್ದರು. ಪರಿಣಾಮ, ಥಗ್ ಲೈಫ್ ಸಿನಿಮಾವನ್ನು ಕರ್ನಾಟಕದಲ್ಲಿ ಬಿಡುಗಡೆ ಆಗಲು ಬಿಡಲಿಲ್ಲ. ಅದು ಕೋರ್ಟ್ ಮೆಟ್ಟಿಲು ಬೇರೆ ಏರಿತು. ಈಗ ಸಿನಿಮಾದ ಫಲಿತಾಂಶ ಜನರಿಗೆ ಗೊತ್ತಾಗಿದೆ.

**ವಿತರಣಾ ಹಕ್ಕು ಪಡೆದಿರುವ ವೆಂಕಟ್**



## ಕಂಗನಾ ಬ್ರ್ಯಾಂಡ್ ಅಂಬಾಸಿಡರ್

ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನ ಬ್ರ್ಯಾಂಡ್ ಅಂಬಾಸಿಡರ್ ಆಗಿ ಕಂಗನಾ ರಣಾವತ್ ನೇಮಕಗೊಂಡಿದ್ದಾರೆ. ಭಾರತದ ಪ್ಯಾರಾಲಿಂಪಿಕ್ ಸಮಿತಿಯು , ನಟಿ ಮತ್ತು ರಾಜಕಾರಣಿ ಕಂಗನಾ ರಣಾವತ್ ಅವರನ್ನು 2025ರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ನ ರಾಯಭಾರಿಯಾಗಿ ನೇಮಿಸಲಾಗಿದೆ ಎಂದು ಘೋಷಿಸಿದೆ. ಕಂಗನಾ ಅವರು ಭಾರತದಲ್ಲಿ ಪ್ಯಾರಾ ಅಥ್ಲೆಟಿಕ್ಸ್‌ಗೆ ನವೀಕೃತ ಶಕ್ತಿ, ಗೋಚರತೆ ಮತ್ತು ಗಮನವನ್ನು ತರುವ ನಿರೀಕ್ಷೆ ನಮಗಿದೆ. ಕಂಗನಾ ಅವರ ಹೊಸ ಪಾತ್ರದಲ್ಲಿ, ಚಾಂಪಿಯನ್‌ಶಿಪ್‌ಗಳ ಮೂಲ ಮೌಲ್ಯಗಳನ್ನು ಉತ್ತೇಜಿಸುತ್ತಾರೆ ಎಂದು ಪಿಸಿಐ ತಿಳಿಸಿದೆ. ಈ ಬಗ್ಗೆ ಕಂಗನಾ ರಣಾವತ್ ಅವರು ಸಮಾರಂಭದ ವಿಡಿಯೋವನ್ನು ಇನ್ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ.

ಭಾರತದ ಪ್ಯಾರಾ ಅಥ್ಲೀಟ್‌ಗಳನ್ನು ಬೆಂಬಲಿಸಲು ಮತ್ತು ಅವರ ಅಸಾಧಾರಣ ಸಾಧನೆಗಳ ಬಗ್ಗೆ ಜಾಗೃತಿ ಮೂಡಿಸಲು ನನಗೆ ತುಂಬಾ ಗೌರವವಿದೆ. ಚಾಂಪಿಯನ್ಸ್ ಹಿಂದೆ ನಿಲ್ಲಲು ನನಗೆ ಹೆಮ್ಮೆ ಇದೆ ಎಂದು ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. 2025ರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಸೆಪ್ಟೆಂಬರ್ 27ರಿಂದ ಅಕ್ಟೋಬರ್ 5ರವರೆಗೆ ದೆಹಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಚಾಂಪಿಯನ್ ಶಿಪ್‌ನಲ್ಲಿ 100ಕ್ಕೂ ಹೆಚ್ಚು ದೇಶಗಳ 1,000ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗಿಯಾಗಲಿದ್ದಾರೆ.



## ಕೊನೆಗೂ ಪವನ್ ಕಲ್ಯಾಣ್ ಸಿನಿಮಾ ರಿಲೀಸ್ ಡೇಟ್ ಫಿಕ್ಸ್

ತೆಲುಗು ಚಿತ್ರರಂಗದ ಪವರ್ ಸ್ಟಾರ್ ಪವನ್ ಕಲ್ಯಾಣ್ ಉಪಮುಖ್ಯಮಂತ್ರಿ ಗದ್ದುಗೇರಿದ ಮೇಲೆ ರಾಜಕೀಯದಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆ ಅವರು ಬಹಳ ದಿನಗಳ ಬಳಿಕ ಸಿನಿಮಾ ಕಡೆ ಮುಖ ಮಾಡಿದ್ದಾರೆ. ಇದೀಗ ಪವನ್ ಕಲ್ಯಾಣ್ ಗುಡ್ ನ್ಯೂಸ್ ಕೊಟ್ಟಿದ್ದಾರೆ. ಅವರು ನಟಿಸಿರುವ ಬಹುನಿರೀಕ್ಷಿತ ಸಿನಿಮಾ 'ಹರಿ ಹರ ವೀರ ಮಲ್ಲು ಬಿಡುಗಡೆಗೆ ಸಜ್ಜಾಗಿದೆ. ಈ ಚಿತ್ರದ ರಿಲೀಸ್ ಡೇಟ್ ಕೂಡಾ ಘೋಷಣೆಯಾಗಿದೆ.

ಹರಿ ಹರ ವೀರ ಮಲ್ಲು ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸ ಭರದಿಂದ ಸಾಗುತ್ತಿದೆ. ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಸಿನಿಪ್ರಿಯರಿಗೆ ಇಷ್ಟವಾಗಿವೆ. ಬಿಗ್ ಬಜೆಟ್‌ನಲ್ಲಿ ತಯಾರಾಗಿರುವ ಹರಿ ಹರ ವೀರ ಮಲ್ಲು ಸಿನಿಮಾ ಜುಲೈ 24ರಂದು ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ಬಿಡುಗಡೆಯಾಗಲಿದೆ. ಹರಿ ಹರ ವೀರ ಮಲ್ಲುವಾಗಿ ಪವನ್ ಕಲ್ಯಾಣ್ ಸಿನಿಮಾದಲ್ಲಿ ಅಬ್ಬರಿಸಿದ್ದಾರೆ. 17ನೇ ಶತಮಾನದಲ್ಲಿ ಮೊಘಲ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ನಾಯಕನಾಗಿ ಪವರ್ ಸ್ಟಾರ್ ಮಿಂಚಿದ್ದಾರೆ. 300 ವರ್ಷಗಳ ಹಿಂದಿನ ಕಾಲಘಟ್ಟವನ್ನು ಕಟ್ಟಿಕೊಡಲು ಚಿತ್ರತಂಡ ಬಹಳ ಶ್ರಮಿಸಿದೆ. ವೀರಮಲ್ಲು ಆಗಿ ಪವನ್ ಕಲ್ಯಾಣ್ ಲುಕ್ ಭರವಸೆ ಮೂಡಿಸಿದೆ. ಜ್ಯೋತಿ ಕೃಷ್ಣ ಮತ್ತು ಕ್ರಿಶ್ ಜಗರ್ಲಮುಡಿ ನಿರ್ದೇಶನದಲ್ಲಿ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಚಿತ್ರ ಮೂಡಿಬರಲಿದೆ. ಚಿತ್ರದಲ್ಲಿ ನಿಧಿ ಅಗರ್ವಾಲ್ ನಾಯಕಿಯಾಗಿ ಮಿಂಚಿದ್ದಾರೆ. ಇನ್ನುಳಿದಂತೆ ಬಾಬಿ ಡಿಯೋಲ್, ನರ್ಗೀಸ್ ಫಕ್ರಿ, ಆದಿತ್ಯಾ ಮೆನನ್, ಶುಭಲೇಖ ಸುಧಾಕರ್ ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ರೋಚಕ ಯುದ್ಧದ ಸನ್ನಿವೇಶಗಳಿವೆ. ಮೆಗಾ ಸೂರ್ಯ ಪ್ರೊಡಕ್ಷನ್ಸ್ ಬ್ಯಾನರ್‌ನಡಿಯಲ್ಲಿ ಎ. ದಯಾಕರ್ ರಾವ್ ಈ ಚಿತ್ರವನ್ನು ನಿರ್ಮಿಸಿದ್ದು, ಎ.ಎಂ

**ಎಂ.ಎಂ ಕೀರವಾಣಿ ಸಂಗೀತ ನಿರ್ದೇಶನ**

## ಕಸದತೊಟ್ಟಿಯಿಂದ ತಂದು ಸಾಕಿದ ಮಗುವಿಗೆ ಬಹುಬೇಡಿಕೆ

ಮಿಥುನ್ ಚಕ್ರವರ್ತಿ ಮತ್ತು ಯೋಗಿತಾ ಬಾಲಿ ಅವರ ದತ್ತು ಪುತ್ರಿ, ದಿಶಾನಿ ಚಕ್ರವರ್ತಿ ಬಗ್ಗೆ ತಿಳಿದುಕೊಳ್ಳೋಣ. ಕಸದ ತೊಟ್ಟಿಯ ಬಳಿ ಬಿಟ್ಟು ಹೋಗಿದ್ದ ದಿಶಾನಿಯನ್ನು ಮಿಥುನ್ ದತ್ತು ಪಡೆದರು. ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಯಲ್ಲಿ ಶಿಕ್ಷಣ ಪಡೆದ ನಂತರ, ಅವರು ಹಲವಾರು ಚಿತ್ರಗಳಲ್ಲಿ ನಟಿಸಿದ್ದಾರೆ.



ಹಿರಿಯ ನಟ ಮಿಥುನ್ ಚಕ್ರವರ್ತಿ ಅನೇಕ ಚಿತ್ರಗಳಲ್ಲಿ ಪವರ್‌ಫುಲ್ ಪಾತ್ರಗಳನ್ನು ನಿರ್ವಹಿಸುವ ಮೂಲಕ ಅಭಿಮಾನಿಗಳನ್ನು ರಂಜಿಸಿದ್ದಾರೆ. ಭಾರತೀಯ ಚಿತ್ರರಂಗಕ್ಕೆ ಅವರ ಕೊಡುಗೆ ಬಹಳ ಮುಖ್ಯ. ಅವರ ವೃತ್ತಿಪರ ಜೀವನ ಮಾತ್ರವಲ್ಲ, ಅವರ ವೈಯಕ್ತಿಕ ಜೀವನವೂ ಸುದ್ದಿಯಲ್ಲಿದೆ. ಮಿಥುನ್ ಅವರು ಹೆಲೆನಾ ಲ್ಯೂಕ್ ಅವರನ್ನು ವಿವಾಹವಾದರು ಮತ್ತು ಅವರು ನಾಲ್ಕು ತಿಂಗಳ ನಂತರ ಬೇರ್ಪಟ್ಟರು. ಅದರ ನಂತರ, ನಟ ಯೋಗಿತಾ ಬಾಲಿಯನ್ನು ವಿವಾಹವಾದರು. ಮದುವೆಯ ನಂತರ, ಯೋಗಿತಾ ಮತ್ತು ಮಿಥುನ್ ಚಕ್ರವರ್ತಿ ಮೂರು ಮಕ್ಕಳನ್ನು ಜಗತ್ತಿಗೆ ಸ್ವಾಗತಿಸಿದರು. ಅವರ ಮೂವರು ಮಕ್ಕಳು ಬಾಲಿವುಡ್‌ನಲ್ಲಿ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಮಿಥುನ್ ಅವರ ದತ್ತು ಪುತ್ರಿ ದಿಶಾನಿ ಕೂಡ ಹಾಲಿವುಡ್‌ಗೆ ಪಾದಾರ್ಪಣೆ ಮಾಡಿದ್ದಾರೆ. ದಿಶಾನಿ ಚಕ್ರವರ್ತಿ ಅವರು ಮಿಥುನ್ ಚಕ್ರವರ್ತಿ ಮತ್ತು ಯೋಗಿತಾ ಬಾಲಿ ಅವರ ದತ್ತು ಪುತ್ರಿ. ದಿಶಾನಿ ಕೋಲ್ಕತ್ತಾದಲ್ಲಿ ಜನಿಸಿದರು ಮತ್ತು ಜನನದ ನಂತರ ಆಕೆಯ ಪೋಷಕರು ಅವಳನ್ನು ಕಸದ ತೊಟ್ಟಿಯ ಬಳಿ ಬಿಟ್ಟು ಹೋದರು. ದಾರಿಹೋಕರು ಅವಳನ್ನು ನೋಡಿದರು ಮತ್ತು ಅವರಲ್ಲಿ ಒಬ್ಬರು ಅವಳನ್ನು ಮನೆಗೆ ಕರೆದೊಯ್ದರು. ಪತ್ರಿಕೆಯಲ್ಲಿ ಅವಳ ಬಗ್ಗೆ ಓದಿದ ನಂತರ, ಮಿಥುನ್ ತಕ್ಷಣ ಕೋಲ್ಕತ್ತಾಗೆ ಧಾವಿಸಿ ಹುಡುಗಿಯನ್ನು ದತ್ತು ಪಡೆದರು. ನಟನ ಪತ್ನಿ ಕೂಡ ಅವರ ನಿರ್ಧಾರವನ್ನು ಬೆಂಬಲಿಸಿದರು. ಮಿಥುನ್ ಮತ್ತು ಯೋಗಿತಾ ಔಪಚಾರಿಕತೆಗಳನ್ನು ಪೂರ್ಣಗೊಳಿಸಿದರು ಮತ್ತು ಕಾನೂನುಬದ್ಧವಾಗಿ ದಿಶಾನಿಯನ್ನು ದತ್ತು ಪಡೆದರು. ಅವಳನ್ನು ಮನೆಗೆ ಕರೆತಂದ ನಂತರ, ಚಕ್ರವರ್ತಿ ಕುಟುಂಬವು ಅವಳಿಗೆ ದಿಶಾನಿ ಎಂದು ಹೆಸರಿಸಿತು.



**ನಾಗಶೇಖರ್ ವಿರುದ್ಧ ರಚಿತಾ ಕಿಡಿ**

## ನಾನು ತಪ್ಪೇ ಮಾಡಿಲ್ಲ, ಅಭಿಮಾನಿಗಳಿಗೆ ಮಾತ್ರ ಕ್ಷಮೆ ಕೇಳ್ತೀನಿ

ತನ್ನ ವಿರುದ್ಧ ಕೇಳಿ ಬಂದ ಆರೋಪಗಳಿಗೆ ನಟಿ ರಚಿತಾ ರಾಮ್ ಮೌನ ಮುರಿದಿದ್ದು ಸಂಜು ವೆಡ್ಸ್ ಗೀತಾ 2 ನಿರ್ದೇಶಕ ರಾಜಶೇಖರ್ ಅವರದ್ದೇ ತಪ್ಪು ಎಂದು ಕಿಡಿಕಾರಿದ್ದಾರೆ. ಕಳೆದ ಮೂರು ದಿನಗಳಿಂದ ಬರುತ್ತಿರುವ ಆರೋಪಗಳಿಗೆ ರಚಿತಾ ರಾಮ್ ಇನ್‌ಸ್ಟಾಗ್ರಾಮ್‌ನಲ್ಲಿ ವಿಡಿಯೋ ಅಪ್ಲೋಡ್ ಮಾಡುವ ಮೂಲಕ ಸ್ಪಷ್ಟನೆ ನೀಡಿದ್ದಾರೆ. ನಾಗಶೇಖರ್ ಈಗ ನನ್ನ ವಿರುದ್ಧ ಮಾಡುತ್ತಿರುವ ಎಲ್ಲಾ ಆರೋಪಗಳು ಸುಳ್ಳು. ಜನವರಿ 17 ರಂದು ಸಂಜು ವೆಡ್ಸ್ ಗೀತಾ 2 ಮೊದಲ ಬಾರಿ ಬಿಡುಗಡೆಯಾಗಿತ್ತು. ಮೊದಲ ಬಾರಿ ಸಿನಿಮಾ ಬಿಡುಗಡೆ ಆದಾಗ ನಾನು ಎಲ್ಲಾ ಪ್ರಚಾರಕ್ಕೆ ಹೋಗಿದ್ದೇನೆ. ಈ ಸಂದರ್ಭದಲ್ಲಿ ಇಡೀ ಸಿನಿಮಾ ತಂಡ ನನಗೆ ಮೆಚ್ಚುಗೆ ಸೂಚಿಸಿತ್ತು. ಈಗ ಯಾಕೆ ನನ್ನ ಅನುಪಸ್ಥಿತಿಯಲ್ಲಿ ಆ ರೀತಿ ಮಾತಾನಾಡುತ್ತಿದ್ದಾರೋ ಗೊತ್ತಿಲ್ಲ. ಈಗ ನಾನು ಬೇರೊಂದು ಸಿನಿಮಾದಲ್ಲಿ ಅಭಿನಯಿಸುತ್ತಿದ್ದು ಅವರಿಗೆ ಡೇಟ್ ನೀಡಿದ್ದೇನೆ. ಈ ಸಂದರ್ಭದಲ್ಲಿ ಎರಡನೇ ಬಾರಿ ಸಿನಿಮಾ ರಿಲೀಸ್ ಆಗುತ್ತಿದ್ದು ಈಗ ಪ್ರಚಾರಕ್ಕೆ ಬರಬೇಕು ಎಂದು ಹೇಳಿದರೆ ಹೇಗೆ ಇದೇ ಸಂಜು ವೆಡ್ಸ್ ಗೀತಾ ತಂಡ ಶೂಟಿಂಗ್ ಕಾರಣವೊಡ್ಡಿ ಬೇರೊಂದು ಸಿನಿಮಾ ಪ್ರಚಾರಕ್ಕೆ ಅವಕಾಶ ಮಾಡಿ ಕೊಡಲಿಲ್ಲ. ಆ ಸಿನಿಮಾವನ್ನು ಮಹಿಳಾ ನಿರ್ಮಾಪಕಿ ನಿರ್ಮಾಣ ಮಾಡಿದ್ದರು. ಅವರು ದುಡ್ಡು ಹಾಕಿರ್ಲಿಲ್ವಾ ಅವಾಗ ಆ ನಿರ್ಮಾಪಕರಿಗೆ ಕಷ್ಟ ಆಗಿಲ್ವಾ ನಾನು ಪ್ರಚಾರಕ್ಕೆ ಹೋಗದೇ ಇದ್ರೂ ನಾನು ಸಾಮಾಜಿಕ ಜಾಲತಾಣದಲ್ಲಿ ಚಿತ್ರದ ಬಗ್ಗೆ ಪೋಸ್ಟ್, ಸ್ಟೋರಿ ಹಾಕಿದ್ದೇನೆ.

ಈ ಹಿಂದೆ ಪ್ರಚಾರದ ಸಮಯದಲ್ಲಿ ಸರಿಯಾದ ಪ್ಲ್ಯಾನಿಂಗ್ ಮಾಡಿರಲಿಲ್ಲ. ಒಂದೊಂದು ದಿನ ಒಂದೊಂದು ಶೆಡ್ಯೂಲ್ ಹೇಳುತ್ತಿದ್ದರು. ಇಂದು ಕಾರ್ಯಕ್ರಮ ಎಂದು ಹೇಳಿ ಮುಂದೂಡುತ್ತಿದ್ದರು. ಹೀಗಾಗಿ ನನಗೆ ಎರಡನೇ ಬಾರಿ ಪ್ರಚಾರದಲ್ಲಿ ಭಾಗಿಯಾಗಲು ಸಾಧ್ಯವಾಗಿಲ್ಲ. ಇದೆಲ್ಲಾ ನನ್ನ ಮೇಲೆ ಉದ್ದೇಶಪೂರ್ವಕವಾಗಿಯೇ ಮಾಡಿರುವ ಆರೋಪ.

## ಕ್ರೀಸ್‌ಗೆ ಬಂದಿಲ್ಲ ಅದಾಗಲೇ ವಿಶ್ವ ದಾಖಲೆ

ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯಕ್ಕಾಗಿ ಕರುಣ್ ನಾಯರ್ ಆಡುವ ಹನ್ನೊಂದಕ್ಕೆ ಮರಳಿದ್ದಾರೆ. ದೇಶೀಯ ಕ್ರಿಕೆಟ್‌ನಲ್ಲಿ ಸಾಕಷ್ಟು ರನ್ ಗಳಿಸಿ ಮತ್ತು ಐಪಿಎಲ್ 2025 ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಪರ ತಮ್ಮ ಪ್ರತಿಭೆಯನ್ನು ತೋರಿಸಿ ಈಗ ಟೀಮ್ ಇಂಡಿಯಾಕ್ಕೆ ಕಮ್ಬ್ಯಾಕ್ ಮಾಡಿದ್ದಾರೆ. ಆದರೆ, ಇನ್ನೂ ಕರುಣ್ ಕ್ರೀಸ್ಗೆ ಬಂದಿಲ್ಲ. ಇದಕ್ಕೂ ಮೊದಲೇ ಅವರು ವಿಶೇಷ ದಾಖಲೆ ನಿರ್ಮಿಸಿದ್ದಾರೆ.



**ಸಂಪೂರ್ಣ ಬದಲಾದ ಆಸ್ಟ್ರೇಲಿಯಾ ಟೆಸ್ಟ್ ತಂಡ**

ಬೆಂಗಳೂರು (ಜೂ. 21): ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ರವಿಚಂದ್ರನ್ ಅಶ್ವಿನ್ ಇಲ್ಲದೆ ಇಂಗ್ಲೆಂಡ್ ಪ್ರವಾಸಕ್ಕೆ ಬಂದ ಯುವ ಭಾರತೀಯ ತಂಡವನ್ನು ದುರ್ಬಲ ಎಂದು ಕೆಲವರು ಕರೆದಿದ್ದರು. ಕಠಿಣ ಇಂಗ್ಲೆಂಡ್ ಪರಿಸ್ಥಿತಿಗಳಲ್ಲಿ ಭಾರತ ತಂಡವು ರನ್ ಗಳಿಸಲು ಪರದಾಡಲಿದೆ ಎಂದು ಹೇಳಲಾಗುತ್ತಿತ್ತು. ಆದರೆ ಲೀಡ್ಸ್ ಟೆಸ್ಟ್‌ನ ಮೊದಲ ದಿನದಂದು, ನಡೆದಿದ್ದೇ ಬೇರೆ. ಭಾರತೀಯ ತಂಡ ಎಲ್ಲರನ್ನೂ ಮೌನಗೊಳಿಸಿತು. ಟಾಸ್ ಸೋತ ನಂತರ ಮೊದಲು ಬ್ಯಾಟಿಂಗ್ ಮಾಡಿದ ಟೀಮ್ ಇಂಡಿಯಾ, ನಾವು ಯಾರಿಗೂ ಕಡಿಮೆಯಿಲ್ಲ ಎಂಬಂತೆ ಬ್ಯಾಟ್ ಬೀಸಿತು. ಪಂದ್ಯದ ಮೊದಲ ದಿನದಂದು 85 ಓವರ್‌ಗಳು ಇದ್ದವು, ಇದರಲ್ಲಿ ಭಾರತ ತಂಡವು 3 ವಿಕೆಟ್‌ಗಳಿಗೆ 359 ರನ್ ಗಳಿಸಿತು. ನಾಯಕ ಶುಭ್‌ಮನ್ ಗಿಲ್ ಅದ್ಭುತ ಇನ್ನಿಂಗ್ಸ್ ಆಡಿದರು ಮತ್ತು ದಿನದ ಅಂತ್ಯದವರೆಗೆ 127 ರನ್‌ಗಳನ್ನು ಆಡುವ ಮೂಲಕ ಅಜೇಯರಾಗಿ ಉಳಿದರು.



## ಭರ್ಜರಿ ಸೆಂಚುರಿ ಸಿಡಿಸಿದ ಪಂತ್


ಲೀಡ್ಸ್‌ನಲ್ಲಿ ನಡೆಯುತ್ತಿರುವ ಭಾರತ ಮತ್ತು ಇಂಗ್ಲೆಂಡ್ ನಡುವಿನ ಟೆಸ್ಟ್ ಪಂದ್ಯದಲ್ಲಿ ಭಾರತ ಅದ್ಭುತ ಪ್ರದರ್ಶನ ನೀಡಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ, ಮೊದಲ ದಿನ 3 ವಿಕೆಟ್‌ಗೆ 359 ರನ್ ಗಳಿಸಿತ್ತು. ಎರಡನೇ ದಿನವೂ ಉತ್ತಮ ಆರಂಭ ಪಡೆದ ಭಾರತ, ಶುಭ್ಮನ್ ಗಿಲ್ ಮತ್ತು ರಿಷಬ್ ಪಂತ್ ಅವರ ಅದ್ಭುತ ಬ್ಯಾಟಿಂಗ್‌ನಿಂದಾಗಿ ಇಂಗ್ಲೆಂಡ್ ಮೇಲೆ ಮೇಲುಗೈ ಸಾಧಿಸಿದೆ. ಇದೇ ವೇಳೆ ಉಪನಾಯಕ ರಿಷಬ್ ಪಂತ್ ಕೂಡ ಶತಕ ಸಿಡಿಸಿ ಮಿಂಚಿದ್ದಾರೆ. ಭಾರತ ಮತ್ತು ಇಂಗ್ಲೆಂಡ್ ನಡುವಿನ 5 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯ ಲೀಡ್ಸ್‌ನಲ್ಲಿ ನಡೆಯುತ್ತಿದೆ. ಮೊದಲ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿತ್ತಿರುವ ಟೀಂ ಇಂಡಿಯಾ, ಆಂಗ್ಲರ ವಿರುದ್ಧ ಸಂಪೂರ್ಣವಾಗಿ ಮೇಲುಗೈ ಸಾಧಿಸಿದೆ. ಮೊದಲ ದಿನದಾಟದಂತ್ಯಕ್ಕೆ 3 ವಿಕೆಟ್ ಕಳೆದುಕೊಂಡು 359 ರನ್ ಬಾರಿಸಿದ್ದ ಭಾರತ, ಎರಡನೇ ದಿನದಾಟವನ್ನು ಸಹ ಉತ್ತಮವಾಗಿ ಆರಂಭಿಸಿದೆ. ಮೊದಲ ದಿನದಾಟದಲ್ಲಿ ಅಜೇಯರಾಗಿ ಉಳಿದಿದ್ದ ನಾಯಕ ಶುಭ್‌ಮನ್ ಗಿಲ್ ಹಾಗೂ ರಿಷಭ್ ಪಂತ್ ಎರಡನೇ ದಿನವೂ ತಂಡಕ್ಕೆ ಉತ್ತಮ ಆರಂಭ ಒದಗಿಸಿಕೊಟ್ಟಿದ್ದಾರೆ. ಅದರಲ್ಲೂ ಉಪನಾಯಕ ರಿಷಭ್ ಪಂತ್ ಎಂದಿನಂತೆ ತಮ್ಮ ಹೊಡಿಬಡಿ ಆಟದ ಮೂಲಕ ಆಂಗ್ಲರ ಹೆಡೆಮುರಿ ಕಟ್ಟಿದ್ದು, ಎರಡನೇ ದಿನದಾಟದ ಮೊದಲ ಸೆಷನ್‌ನಲ್ಲೇ ಭರ್ಜರಿ ಶತಕ ಸಿಡಿಸಿ ಮಿಂಚಿದ್ದಾರೆ.


## ವಿರಾಟ್ ಕೊಹ್ಲಿಯನ್ನು ಹೀಯಾಳಿಸಿದ ಬೆನ್ನಲ್ಲೇ ಕೆಎಲ್ ರಾಹುಲ್ ಔಟ್..!

**ವಿಕೆಟ್ ಪಡೆಯಲು ಹರಸಾಹಸ**

ಟೀಮ್ ಇಂಡಿಯಾದ ಮಾಜಿ ಆಟಗಾರ ಸಂಜಯ್ ಮಂಜ್ರೇಕರ್, ಭಾರತ ಮತ್ತು ಇಂಗ್ಲೆಂಡ್ ನಡುವಣ ಪಂದ್ಯದ ವೇಳೆ ವಿರಾಟ್ ಕೊಹ್ಲಿಯ ಬ್ಯಾಟಿಂಗ್ ಅನ್ನು ಕುಹಕವಾಡಿದ್ದಾರೆ. ಲೀಡ್ಸ್‌ನಲ್ಲಿ ನಡೆಯುತ್ತಿರುವ ಈ ಪಂದ್ಯದ ವೇಳೆ ಕಾಮೆಂಟೇಟರ್ ಆಗಿ ಕಾಣಿಸಿಕೊಂಡಿರುವ ಮಂಜ್ರೇಕರ್ ಭಾರತೀಯ ಬ್ಯಾಟರ್‌ಗಳನ್ನು ಹೊಗಳುವ ಭರದಲ್ಲಿ ಪರೋಕ್ಷವಾಗಿ ಕೊಹ್ಲಿಯನ್ನು ಹೀಯಾಳಿಸಿದರು.

ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ಬ್ಯಾಟರ್‌ಗಳು ಔಟ್ ಸೈಡ್ ಆಫ್‌ನತ್ತ ಸಾಗುವ ಚೆಂಡುಗಳನ್ನು ಎದುರಿಸುವಲ್ಲಿ ತುಂಬಾ ಎಚ್ಚರಿಕೆವಹಿಸಿದ್ದರು. ಅದರಲ್ಲೂ ಆರಂಭದಲ್ಲೇ ಆಫ್ ಸೈಡ್‌ನತ್ತ ಬಂದ ಚೆಂಡುಗಳನ್ನು ಮುಟ್ಟುವ ಯತ್ನವೇ ಮಾಡದೇ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ್ದರು. ಪರಿಣಾಮ ಇಂಗ್ಲೆಂಡ್ ಬೌಲರ್‌ಗಳು ವಿಕೆಟ್ ಪಡೆಯಲು ಹರಸಾಹಸಪಡಬೇಕಾಯಿತು. ಇದರ ನಡುವೆ 21ನೇ ಓವರ್‌ನಲ್ಲಿ ಬ್ರೈಡನ್ ಕಾರ್ಸ್ ಎಸೆದ ಆಫ್ ಸೈಡ್‌ಚೆಂಡನ್ನು ಕೆಎಲ್ ರಾಹುಲ್ ಅಷ್ಟೇ ನಾಜೂಕಾಗಿ ಬಿಟ್ಟಿದ್ದರು. ಇದನ್ನು ಹೊಗಳುವ ಭರದಲ್ಲಿ ಸಂಜಯ್ ಮಂಜ್ರೇಕರ್ ವಿರಾಟ್ ಕೊಹ್ಲಿಯ ಬ್ಯಾಟಿಂಗ್ ಅನ್ನು ಪರೋಕ್ಷವಾಗಿ ವ್ಯಂಗ್ಯವಾಡಿದ್ದಾರೆ. ಭಾರತದ ಪರ ಕಣಕ್ಕಿಳಿದಿರುವ ಇಬ್ಬರು ದಾಂಡಿಗರಿಗೆ ಚೆಂಡಿನ ಮೇಲೆ ಉತ್ತಮ ಗ್ರಹಿಕೆ ಇದೆ. ಹೀಗಾಗಿಯೇ ಇಬ್ಬರು ಚೆಂಡನ್ನು ಹಿಂಬಾಲಿಸುತ್ತಿಲ್ಲ. ಈ ಹಿಂದೆ ಆಫ್ ಸೈಡ್‌ನತ್ತ ಸಾಗುವ ಚೆಂಡು ಹಿಂಬಾಲಿಸಿ ತೊಂದರೆಗೆ ಸಿಲುಕಿಸುತ್ತಿದ್ದ ಮಾಜಿ ಬ್ಯಾಟ್ಸ್‌ಮನ್ ಬಗ್ಗೆ ನಮಗೆ ತಿಳಿದಿದೆ. ಆದರೆ ಈ ಇಬ್ಬರು ಹಾಗಲ್ಲ, ಚೆಂಡನ್ನು ಚೆನ್ನಾಗಿ ನೋಡಿ ಆಡುತ್ತಿದ್ದಾರೆ ಎಂದಿದ್ದರು. ಇಲ್ಲಿ ಸಂಜಯ್ ಮಂಜ್ರೇಕರ್ ಮಾಜಿ ಬ್ಯಾಟ್ಸ್‌ಮನ್ ಎಂದಿರುವುದು ವಿರಾಟ್ ಕೊಹ್ಲಿ ಬಗ್ಗೆ. ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಔಟ್ ಸೈಡ್ ಆಫ್‌ನತ್ತ ಸಾಗಿ ಬಂದ ಚೆಂಡನ್ನು ಮುಟ್ಟಿ ಕೊಹ್ಲಿ ಹಲವು ಬಾರಿ ಕ್ಯಾಚ್ ನೀಡಿದ್ದರು.



## ಪಂತ್‌ಗೆ ಕೈ ಮುಗಿದ ರಾಹುಲ್

ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್‌ನಲ್ಲಿ ಯುವ ಭಾರತ ತಂಡ ಬಲಿಷ್ಠ ಆಂಗ್ಲರ ವಿರುದ್ಧ ಪ್ರಾಬಲ್ಯ ಸಾಧಿಸಿದೆ. ಸಾಯಿ ಸುದರ್ಶನ್ ಹೊರತುಪಡಿಸಿ, ಟೀಂ ಇಂಡಿಯಾದ ಬ್ಯಾಟ್ಸ್‌ಮನ್‌ಗಳು ಇಲ್ಲಿಯವರೆಗೆ ಅದ್ಭುತ ಪ್ರದರ್ಶನ ನೀಡಿದ್ದಾರೆ. ಆರಂಭಿಕ ಯಶಸ್ವಿ ಜೈಸ್ವಾಲ್ (101 ರನ್) ಮತ್ತು ಹೊಸ ನಾಯಕ ಶುಭ್‌ಮನ್ ಗಿಲ್ (ಔಟಾಗದೆ 127) ಪಂದ್ಯದ ಮೊದಲ ದಿನದಂದು ಶತಕಗಳನ್ನು ಬಾರಿಸುವ ಮೂಲಕ ಇಂಗ್ಲಿಷ್ ಬೌಲರ್‌ಗಳ ಬೆವರಿಳಿಸಿದರು. ಕನ್ನಡಿಗ ಕೆಎಲ್ ರಾಹುಲ್ (48 ರನ್) ಮತ್ತು ರಿಷಭ್ ಪಂತ್ (ಔಟಾಗದೆ 65) ಕೂಡ ಆತಿಥೇಯ ತಂಡಕ್ಕೆ ದುಸ್ವಪ್ನವಾಗಿ ಕಾಡಿದರು. ಮೊದಲ ದಿನದ ಆಟ ಮುಗಿದ ನಂತರ, ರಿಷಭ್ ಪಂತ್ ಹಾಗೂ ಗಿಲ್ ಡ್ರೆಸ್ಸಿಂಗ್ ಕೋಣೆಗೆ ಬಂದಾಗ ಕೆಎಲ್ ರಾಹುಲ್, ರಿಷಭ್ ಪಂತ್‌ಗೆ ಕೈ ಮುಗಿದ ವಿಡಿಯೋ ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿದೆ.

ಮೊದಲ ದಿನದಾಟದ ಅಂತ್ಯದ ವೇಳೆಗೆ, ನಾಯಕ ಶುಭ್‌ಮನ್ ಗಿಲ್ ಮತ್ತು ರಿಷಭ್ ಪಂತ್ ನಡುವೆ 138 ರನ್‌ಗಳ ಅಜೇಯ ಪಾಲುದಾರಿಕೆ ಇತ್ತು. ಹೀಗಾಗಿ ಈ ಇಬ್ಬರೂ ಬ್ಯಾಟ್ಸ್‌ಮನ್‌ಗಳು ಡ್ರೆಸ್ಸಿಂಗ್ ಕೋಣೆಗೆ ಬಂದಾಗ, ಎಲ್ಲರೂ ಅವರನ್ನು ಹರ್ಷಚಿತ್ತದಿಂದ ಸ್ವಾಗತಿಸಿದರು.

ಎಲ್ಲಾ ಆಟಗಾರರು ಮತ್ತು ಕೋಚಿಂಗ್ ಸಿಬ್ಬಂದಿ ಅವರನ್ನು ಚಪ್ಪಾಳೆಯೊಂದಿಗೆ ಸ್ವಾಗತಿಸಿದರು.

ಈ ಸಮಯದಲ್ಲಿ ಇವರಿಬ್ಬರನ್ನು ಸ್ವಾಗತಿಸಲು ಮೆಟ್ಟಿಲುಗಳ ಬಳಿ ನಿಂತಿದ್ದ ರಾಹುಲ್, ರಿಷಭ್ ಪಂತ್ ಸನಿಹಕ್ಕೆ ಬಂದ ಕೂಡಲೇ ಕೈ ಮುಗಿದು ನಮಸ್ಕರಿಸಿದರು.



## ಸಾಕ್ಸ್ ಬದಲಿಸಿದ ಶುಭ್‌ಮನ್ ಗಿಲ್‌ಗೆ ದಂಡದ ಭೀತಿ..!

ಭಾರತ ಮತ್ತು ಇಂಗ್ಲೆಂಡ್ ನಡುವಣ ಮೊದಲ ಟೆಸ್ಟ್ ಪಂದ್ಯವು ಲೀಡ್ಸ್‌ನಲ್ಲಿ ನಡೆಯುತ್ತಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ಮೊದಲ ದಿನದಾಟದ ಅಂತ್ಯಕ್ಕೆ 359 ರನ್ ಕಲೆಹಾಕಿದೆ. ಸದ್ಯ ಕ್ರೀಸ್‌ನಲ್ಲಿ ಶುಭ್‌ಮನ್ ಗಿಲ್ ಹಾಗೂ ರಿಷಭ್ ಪಂತ್ ಬ್ಯಾಟಿಂಗ್ ಕಾಯ್ದುಕೊಂಡಿದ್ದು, ಅದರಂತೆ ದ್ವಿತೀಯ ದಿನದಾಟದಲ್ಲಿ ಇನಿಂಗ್ಸ್ ಆರಂಭಿಸಲಿದ್ದಾರೆ. ಭಾರತ ಟೆಸ್ಟ್ ತಂಡದ ನಾಯಕ ಶುಭ್‌ಮನ್ ಗಿಲ್‌ಗೆ ದಂಡದ ಭೀತಿ ಎದುರಾಗಿದೆ. ಅದು ಕೂಡ ಸಾಕ್ಸ್ ಬದಲಿಸಿದಕ್ಕೆ ಎಂಬುದೇ ಅಚ್ಚರಿ. ಅಂದರೆ ಲೀಡ್ಸ್‌ನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ವೇಳೆ ಶುಭ್‌ಮನ್ ಗಿಲ್ ಬಿಳಿ ಸಾಕ್ಸ್ ಧರಿಸಲು ಮರೆತಿದ್ದಾರೆ.

ಇದಕ್ಕಾಗಿ ಈಗ ಅವರು ದಂಡ ಕಟ್ಟಬೇಕಾಗಿ ಬರಬಹುದು. ಐಸಿಸಿ, ನಿಯಮದ ಪ್ರಕಾರ ಟೆಸ್ಟ್ ಪಂದ್ಯಗಳನ್ನಾಡುವಾಗ ಬಿಳಿ ಅಥವಾ ತಿಳಿ ಬೂದು ಬಣ್ಣದ ಸಾಕ್ಸ್ ಧರಿಸುವುದು ಕಡ್ಡಾಯ. ಈ ನಿಯಮವನ್ನು 2023 ರಲ್ಲಿ ಜಾರಿಗೊಳಿಸಲಾಗಿದೆ. ಆದರೆ ಈ ನಿಯಮ ಗೊತ್ತಿಲ್ಲದೆ ಶುಭ್‌ಮನ್ ಗಿಲ್ ಇಂಗ್ಲೆಂಡ್ ವಿರುದ್ಧ ಕಪ್ಪು ಬಣ್ಣದ ಸಾಕ್ಸ್ ಧರಿಸಿ ಕಣಕ್ಕಿಳಿದಿದ್ದಾರೆ. ಇಲ್ಲಿ ಶುಭ್‌ಮನ್ ಗಿಲ್ ಧರಿಸಿರುವ ಸಾಕ್ಸ್ ಬಣ್ಣ ಬಹಿರಂಗವಾಗಿರುವುದು ಕೂಡ ಅವರು ಮಾಡಿದ ಎಡವಟ್ಟಿನಿಂದ ಎಂಬುದು ವಿಶೇಷ.

ಪಂದ್ಯದ ನಡುವೆ ಪ್ಯಾಡ್ ಸರಿ ಮಾಡಿದಾಗ ಶುಭ್‌ಮನ್ ಗಿಲ್ ಅವರ ಪ್ಯಾಂಟ್ ಮೇಲೇಕ್ಕೇರಿದ್ದು, ಇದರಿಂದ ಅವರು ಕಪ್ಪು ಬಣ್ಣದ ಸಾಕ್ಸ್ ಧರಿಸಿರುವುದು ಕಾಣಿಸಿಕೊಂಡಿದೆ. ಈ ಬಗ್ಗೆ ಮ್ಯಾಚ್ ರೆಫರಿ ರಿಚಿ ರಿಚರ್ಡ್ಸನ್ ಶುಭ್‌ಮನ್ ಗಿಲ್ ಅವರನ್ನು ವಿಚಾರಿಸಲಿದ್ದು, ಈ ವೇಳೆ ಡ್ರೆಸ್ ಕೋಡ್ ಉಲ್ಲಂಘನೆ ಮಾಡಿರುವುದು ಕಂಡು ಬಂದರೆ ಗಿಲ್ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ.

ಅದರಂತೆ ಉದ್ದೇಶಪೂರ್ವಕ ಹಂತ 1 ಅಪರಾಧವೆಂದು ಪರಿಗಣಿಸಿ ಶುಭ್‌ಮನ್ ಗಿಲ್ ಅವರಿಗೆ ಪಂದ್ಯ ಶುಲ್ಕದ ಶೇಕಡಾ 10 ರಿಂದ 20 ರಷ್ಟು ದಂಡ ವಿಧಿಸಬಹುದು. ಇನ್ನು ಈ ಪಂದ್ಯದಲ್ಲಿ ಇಂಗ್ಲೆಂಡ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ ಗಿಲ್ 175 ಎಸೆತಗಳಲ್ಲಿ 1 ಸಿಕ್ಸ್ ಹಾಗೂ 16 ಫೋರ್‌ಗಳೊಂದಿಗೆ ಅಜೇಯ 127 ರನ್ ಕಲೆಹಾಕಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966